ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಯೋಗಾಭ್ಯಾಸ
ಅಂತರರಾಷ್ಟ್ರೀಯ ಯೋಗ ದಿನದ ಮುನ್ನಾದಿನವಾದ ಸೋಮವಾರ ಜಮ್ಮುವಿನ ತವಿ ನದಿ ದಡದಲ್ಲಿ ಯುವತಿಯರು ತಾಲೀಮು ನಡೆಸಿದರು



ಸ್ಪರ್ಧೆಗೆ ಗೋಪಾಲಕೃಷ್ಣ ಗಾಂಧಿ ನಕಾರ • ಅಭ್ಯರ್ಥಿ ಆಯ್ಕೆಗೆ ಇಂದು ವಿರೋಧ ಪಕ್ಷಗಳ ನಾಯಕರ ಸಭೆ

ರಾಷ್ಟ್ರಪತಿ ಚುನಾವಣೆ: ಯಶವಂತ ಸಿನ್ಹಾ ಕಣಕ್ಕೆ?


ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರಪತಿ ಚುನಾವಣೆಗೆ ಸ್ಪರ್ಧಿಸಲು ಮಹಾತ್ಮ ಗಾಂಧಿ ಅವರ ಮೊಮ್ಮಗ, ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲ ಗೋಪಾಲಕೃಷ್ಣ ಗಾಂಧಿ ಅವರು ಸೋಮವಾರ ನಿರಾಕರಿಸಿದ್ದಾರೆ. ಹಾಗಾಗಿ, ವಿರೋಧ ಪಕ್ಷಗಳು ಕೇಂದ್ರದ ಮಾಜಿ ಸಚಿವ ಯಶವಂತ ಸಿನ್ಹಾ ಅವರನ್ನು ಜಂಟಿ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಲು ಚಿಂತನೆ ನಡೆಸಿವೆ.

‘ಬಿಜೆಪಿಯ ಮಾಜಿ ನಾಯಕ ಸಿನ್ಹಾ ಅವರು ಕಳೆದ ವರ್ಷ ತೃಣಮೂಲ ಕಾಂಗ್ರೆಸ್‌ಗೆ (ಟಿಎಂಸಿ) ಸೇರ್ಪಡೆಯಾಗಿದ್ದಾರೆ. ಸಿನ್ಹಾ ಅವರನ್ನು ವಿರೋಧ ಪಕ್ಷಗಳ ಕೆಲವು ನಾಯಕರು ಪ್ರಸ್ತಾಪಿಸಿದ್ದು, ಬೆಂಬಲವನ್ನೂ ವ್ಯಕ್ತಪಡಿಸಿವೆ’ ಎಂದು ಟಿಎಂಸಿಯ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

‘ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮತ್ತು ಟಿಎಂಸಿ ವರಿಷ್ಠೆ ಮಮತಾ ಬ್ಯಾನರ್ಜಿ ಅವರಿಗೆ ಸಿನ್ಹಾ ಅವರ ಹೆಸರನ್ನು ಸೂಚಿಸುವ ಫೋನ್ ಕರೆಗಳು ಬಂದಿವೆ. ಮಮತಾ ಕೂಡಾ ಸಿನ್ಹಾ ಅವರನ್ನು ವಿರೋಧ ಪಕ್ಷದ ಜಂಟಿ ಅಭ್ಯರ್ಥಿಯಾಗಿ ಆಯ್ಕೆ ಮಾಡಲು ಆಸಕ್ತಿ ತೋರಿದ್ದಾರೆ’ ಎಂದೂ ಅವರು ಹೇಳಿದ್ದಾರೆ.


ಗೋಪಾಲಕೃಷ್ಣ ಗಾಂಧಿ


ಯಶವಂತ ಸಿನ್ಹಾ

ವಿರೋಧ ಪಕ್ಷಗಳು ಗೋಪಾಲಕೃಷ್ಣ ಅವರ ಮನವೊಲಿಸುವ ಸಾಧ್ಯತೆಯಿದ್ದು, ಆದರೆ, ಅವರು ಸ್ಪರ್ಧೆಗೆ ಒಪ್ಪಿಕೊಳ್ಳುವರೇ ಎಂಬುದನ್ನು ಕಾದು ನೋಡಬೇಕಿದೆ. ಈ ಹಿಂದೆ ರಾಷ್ಟ್ರಪತಿ ಚುನಾವಣೆಗೆ ಅಭ್ಯರ್ಥಿಯಾಗಿ ಸ್ಪರ್ಧಿಸುವ ಪ್ರಸ್ತಾವವನ್ನು ಮಹಾರಾಷ್ಟ್ರದ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮತ್ತು ನ್ಯಾಷನಲ್ ಕಾನ್ಫರೆನ್ಸ್‌ನ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ ಅವರು ನಿರಾಕರಿಸಿದ್ದರು.


ಅಭ್ಯರ್ಥಿಯನ್ನು ಅಂತಿಮ ಗೊಳಿಸಲು ಸಂಸತ್ ಸೌಧದಲ್ಲಿ ಮಂಗಳವಾರ ನಡೆಯಲಿರುವ ಸಭೆಗೆ ಕೊನೆಯ ಹಂತದ ಸಿದ್ಧತೆಗಳು ನಡೆಯುತ್ತಿರುವಾಗ ಗೋಪಾಲಕೃಷ್ಣ ಅವರು ತಮ್ಮ 245 ಪದಗಳ ಹೇಳಿಕೆಯನ್ನು ಬಿಡುಗಡೆ ಮಾಡಿದರು. ಇದರಿಂದ ವಿರೋಧಪಕ್ಷಗಳ ನಾಯಕರಿಗೆ ನಿರಾಸೆ ಉಂಟಾಯಿತು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ರಾಷ್ಟ್ರಪತಿ ಚುನಾವಣೆಯನ್ನು ‘ಗೋಡ್ಸೆ v/s ಗಾಂಧಿ’ ಸಿದ್ಧಾಂತದ ಸ್ಪರ್ಧೆಯನ್ನಾಗಿಸಲು ವಿರೋಧಪಕ್ಷಗಳು ಬಯಸಿದ್ದವು.

‘ಪ್ರತಿಪಕ್ಷಗಳ ಹಲವು ಗೌರವಾನ್ವಿತ ನಾಯಕರು ರಾಷ್ಟ್ರಪತಿ ಅತ್ಯುನ್ನತ ಹುದ್ದೆಗೆ ಮುಂಬರುವ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿಯನ್ನಾಗಿ ನನ್ನ ಹೆಸರನ್ನು ಪ್ರಸ್ತಾಪಿಸಿವೆ. ಈ ಗೌರವಕ್ಕಾಗಿ ನಾನು ಅವರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ. ಆದರೆ, ಈ ವಿಷಯವನ್ನು ಆಳವಾಗಿ ಪರಿಗಣಿಸಿದಾಗ ವಿರೋಧಪಕ್ಷದ ಅಭ್ಯರ್ಥಿಯು ಪ್ರತಿಪಕ್ಷಗಳ ಏಕತೆಯ ಜೊತೆಗೆ ರಾಷ್ಟ್ರೀಯ ಸಹಮತವನ್ನೂ ಸೃಷ್ಟಿಸುವವರಾಗಿರಬೇಕು ಎಂಬುದನ್ನು ಮನಗಂಡಿದ್ದೇನೆ. ಇದನ್ನು ನನಗಿಂತ ಉತ್ತಮವಾಗಿ ಮಾಡುವ ಇತರರು ಇದ್ದಾರೆ ಎಂದು ನಾನು ಭಾವಿಸುತ್ತೇನೆ. ಹಾಗಾಗಿ, ಅಂಥ ವ್ಯಕ್ತಿಗೆ ಅವಕಾಶವನ್ನು ನೀಡಬೇಕೆಂದು ನಾನು ನಾಯಕರಲ್ಲಿ ವಿನಂತಿಸುತ್ತೇನೆ’ ಎಂದು ಗೋಪಾಲಕೃಷ್ಣ ಗಾಂಧಿ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ದೇಶದ ಕೊನೆಯ ಗವರ್ನರ್ ಜನರಲ್ ಆಗಿದ್ದ ರಾಜಾಜಿ ಅವರ ಬಳಿಕ, ಭಾರತದ ಪ್ರಥಮ ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದ ಡಾ. ರಾಜೇಂದ್ರ ಪ್ರಸಾದ್ ಅವರಂಥ ರಾಷ್ಟ್ರಪತಿಯನ್ನು ದೇಶವು ಪಡೆಯಲಿ’ ಎಂದೂ ಅವರು ಹಾರೈಸಿದ್ದಾರೆ.

2017ರ ರಾಷ್ಟ್ರಪತಿ ಚುನಾವಣೆಯಲ್ಲಿ ಗೋಪಾಲಕೃಷ್ಣ ಗಾಂಧಿ ಅವರು ವಿರೋಧ ಪಕ್ಷದ ಅಭ್ಯರ್ಥಿಯಾಗಿ ಮುಂಚೂಣಿಯಲ್ಲಿದ್ದರು. ಆದರೆ, ಎನ್‌ಡಿಎಯು ಪರಿಶಿಷ್ಟ ಜಾತಿಗೆ ಸೇರಿದ ರಾಮನಾಥ ಕೋವಿಂದ್ ಅವರ ಹೆಸರನ್ನು ಘೋಷಿಸುತ್ತಿದ್ದಂತೆಯೇ, ವಿರೋಧ ಪಕ್ಷಗಳು ತಮ್ಮ ಕಾರ್ಯತಂತ್ರ ವನ್ನು ಮರುಪರಿಶೀಲಿಸಿ, ಲೋಕಸಭೆಯ ಮಾಜಿ ಸ್ಪೀಕರ್ ಮೀರಾ ಕುಮಾರ್ ಅವರನ್ನು ಕಣಕ್ಕಿಳಿಸಿತ್ತು. ಬಳಿಕ ಗೋಪಾಲಕೃಷ್ಣ ಅವರನ್ನು ಉಪರಾಷ್ಟ್ರಪತಿ ಚುನಾವಣೆಗೆ ಅಭ್ಯರ್ಥಿಯನ್ನಾಗಿ ಕಣಕ್ಕೆ ಇಳಿಸಲಾಗಿತ್ತು. ಆದರೆ, ಎಂ. ವೆಂಕಯ್ಯ ನಾಯ್ಡು ಅವರ ವಿರುದ್ಧ ಗಾಂಧಿ ಅವರು ಸೋಲು ಅನುಭವಿಸಬೇಕಾಯಿತು.



ಸುದ್ದಿ 2 ನಿಮಿಷ

ಆಸ್ಪತ್ರೆಯಿಂದ ಸೋನಿಯಾ ಮನೆಗೆ 23ಕ್ಕೆ ಹಾಜರಾಗಲು ಇ.ಡಿ ನೋಟಿಸ್

ನವದೆಹಲಿ(ಪಿಟಿಐ): ಕೋವಿಡ್ 19 ಸೋಂಕಿನಿಂದ ಇಲ್ಲಿನ ಸರ್ ಗಂಗಾ ರಾಮ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಸೋಮವಾರ ಸಂಜೆ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಮನೆಯಲ್ಲೇ ವಿಶ್ರಾಂತಿ ಪಡೆಯುವಂತೆ ಅವರಿಗೆ ವೈದ್ಯರು ಸಲಹೆ ನೀಡಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ತಿಳಿಸಿದ್ದಾರೆ.



ಸೋನಿಯಾ ಅವರಿಗೆ ಕೋವಿಡ್ ಸೋಂಕು ಇರುವುದು ಜೂನ್ 2ರಂದು ಪರೀಕ್ಷೆಯಲ್ಲಿ ದೃಢಪಟ್ಟಿತ್ತು. ಮೂಗಿನಲ್ಲಿ ರಕ್ತಸ್ರಾವ ಆಗಿದ್ದರಿಂದ ಜೂನ್ 12ರಂದು ಅವರು ಆಸ್ಪತ್ರೆಗೆ ದಾಖಲಾಗಿದ್ದರು.

ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಗೆ ಜೂನ್ 8ರಂದು ಹಾಜರಾಗುವಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಸೋನಿಯಾ ಅವರಿಗೆ ನೋಟಿಸ್ ನೀಡಿತ್ತು.

ಅನಾರೋಗ್ಯ ಕಾರಣ ಮತ್ತಷ್ಟು ಕಾಲಾವಕಾಶ ನೀಡುವಂತೆ ಸೋನಿಯಾ ಅವರು ಇ.ಡಿಗೆ ಮನವಿ ಮಾಡಿದ್ದರು.

ಜೂನ್ 23ರಂದು ವಿಚಾರಣೆಗೆ ಹಾಜರಾಗುವಂತೆ ಇ.ಡಿ ಸಮನ್ಸ್ ಜಾರಿ ಮಾಡಿದೆ.

ಶೇಕಡ 4 ದಾಟಿದ ದೈನಂದಿನ ಕೋವಿಡ್ ದೃಢ ಪ್ರಮಾಣ

ನವದೆಹಲಿ: ದೇಶದಲ್ಲಿ ಸೋಮವಾರ ಬೆಳಿಗ್ಗೆ ಕೊನೆಗೊಂಡಂತೆ 24 ಗಂಟೆ ಅವಧಿಯಲ್ಲಿ 12,781 ಕೋವಿಡ್–19 ಪ್ರಕರಣಗಳು ದೃಢಪಟ್ಟಿವೆ. 18 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ. ಕೇರಳದಲ್ಲಿ 11, ದೆಹಲಿಯಲ್ಲಿ ಮೂವರು ಮತ್ತು ಕರ್ನಾಟಕ, ಮಹಾರಾಷ್ಟ್ರ, ಪಂಜಾಬ್ ಹಾಗೂ ಪಶ್ಚಿಮ ಬಂಗಾಳದಲ್ಲಿ ತಲಾ ಒಬ್ಬರು ಸೋಂಕಿನಿಂದ ಮೃತಪಟ್ಟಿದ್ದಾರೆ.

ಕೇಂದ್ರ ಆರೋಗ್ಯ ಸಚಿವಾಲಯದ ಮಾಹಿತಿ ಪ್ರಕಾರ, 130 ದಿನಗಳ ಬಳಿಕ ದೇಶದಲ್ಲಿ ದೈನಂದಿನ ಸೋಂಕು ದೃಢ ಪ್ರಮಾಣ ಶೇ 4ಕ್ಕಿಂತ ಹೆಚ್ಚಾಗಿದೆ. ಸದ್ಯ ದೈನಂದಿನ ದೃಢ ಪ್ರಮಾಣ ಶೇ 4.32ರಷ್ಟಿದ್ದರೆ, ವಾರದ ದೃಢ ಪ್ರಮಾಣ ಶೇ 2.63ರಷ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 76,700ಕ್ಕೆ ಏರಿಕೆಯಾಗಿದೆ. ಇದು ಒಟ್ಟು ಪ್ರಕರಣಗಳ ಶೇ 0.18 ರಷ್ಟಿದೆ. ದೇಶದಲ್ಲಿ ಈವರೆಗೆ ಸೋಂಕಿತ ಪ್ರಕರಣಗಳ ಒಟ್ಟು ಸಂಖ್ಯೆ 4,33,09,473 ಏರಿದೆ. ಮರಣ ಪ್ರಮಾಣ ಶೇ 1.21 ರಷ್ಟಿದೆ.

ಅವ್ಯವಹಾರ: ನಿವೃತ್ತ ಪ್ರಾಂಶುಪಾಲ ಸೇರಿ 6 ಮಂದಿ ವಿರುದ್ಧ ಎಫ್‌ಐಆರ್

ವರದಿ ಪರಿಣಾಮ

ಹಾವೇರಿ: ತಾಲ್ಲೂಕಿನ ದೇವಗಿರಿ ಸಮೀಪದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದಿರುವ ಅವ್ಯವಹಾರ ಪ್ರಕರಣದ ಸಂಬಂಧ ನಿವೃತ್ತ ಪ್ರಾಂಶುಪಾಲ ಸೇರಿ 6 ಮಂದಿ ವಿರುದ್ಧ ನಗರದ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

ನಿವೃತ್ತ ಪ್ರಾಂಶುಪಾಲ ಡಾ.ಕೆ.ಬಿ.ಪ್ರಕಾಶ್, ಕಚೇರಿ ಅಧೀಕ್ಷಕರಾದ ಎಚ್. ವಾಸುದೇವ, ಗುರಪ್ಪ ಸುಂಕದವರ, ಪ್ರಥಮದರ್ಜೆ ಸಹಾಯಕಿ ಜಯಮ್ಮ ಕಾಚೇರ, ದ್ವಿತೀಯ ದರ್ಜೆ ಸಹಾಯಕರಾದ ರವೀಂದ್ರಕುಮಾರ ಮತ್ತು ಅನಿಲಕುಮಾರ ಕಟಿಗಾರ ವಿರುದ್ಧ ಕಾಲೇಜಿನ ಹಾಲಿ ಪ್ರಾಂಶುಪಾಲ ಡಾ.ಜಗದೀಶ ಕೋರಿ ದೂರು ನೀಡಿದ್ದಾರೆ.

‘2007 ಅ.1ರಿಂದ 2022 ಏಪ್ರಿಲ್ 30ರ ಅವಧಿಯಲ್ಲಿ ಅಧಿಕಾರ ದುರ್ಬಳಕೆ ಮಾಡಿಕೊಂಡು, ಕಾಲೇಜಿನ ಸರ್ಕಾರಿ ದಾಖಲೆಗಳನ್ನು ತಿದ್ದುಪಡಿ ಮಾಡಿದ್ದಾರೆ. ಪ್ರವೇಶ ಶುಲ್ಕ, ಪರೀಕ್ಷಾ ಶುಲ್ಕ, ಸಿಸಿಟೆಕ್, ಸ್ಕಾಲರ್‌ಶಿಪ್, ವಿದ್ಯಾರ್ಥಿ ಶೈಕ್ಷಣಿಕ ಸಾಲದ ಹಣ ಸೇರಿ ದಂತೆ ಒಟ್ಟು ₹ 3.14 ಕೋಟಿಯನ್ನು ದುರುಪಯೋಗಪಡಿಸಿಕೊಂಡು ಸರ್ಕಾರಕ್ಕೆ ಮೋಸ ಮಾಡಿದ್ದಾರೆ’ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಅವ್ಯವಹಾರ ಕುರಿತು ‘ವಿದ್ಯಾಸಿರಿ ಸ್ಕಾಲರ್‌ಶಿಪ್‌ಗೆ ಕನ್ನ!’ ಶೀರ್ಷಿಕೆ ಯಡಿ ‘ಪ್ರಜಾವಾಣಿ’ಯಲ್ಲಿ ವರದಿ ಪ್ರಕಟವಾದ ನಂತರ ತಾಂತ್ರಿಕ ಶಿಕ್ಷಣ ಇಲಾಖೆ ಐವರು ಸರ್ಕಾರಿ ನೌಕರರನ್ನು ಅಮಾನತು ಮಾಡಿತ್ತು.

ಮಂಗಳವಾರವೂ ವಿಚಾರಣೆಗೆ ಹಾಜರಾಗುವಂತೆ ಇ.ಡಿ ಸೂಚನೆ

ರಾಹುಲ್ ಗಾಂಧಿ ಮತ್ತೆ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳ ಎದುರು ಸೋಮವಾರ ಹಾಜರಾದರು. ಈ ಮೂಲಕ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಅವರು ನಾಲ್ಕನೇ ದಿನ ವಿಚಾರಣೆ ಎದುರಿಸಿದಂತಾಗಿದೆ. ಮಂಗಳವಾರವೂ ಹಾಜರಾಗುವಂತೆ ಇ.ಡಿ. ಸೂಚಿಸಿದೆ.

ಇ.ಡಿ ಸತತ ಮೂರು ದಿನ 30 ಗಂಟೆಗಳ ಕಾಲ ವಿಚಾರಣೆ ನಡೆ ಸಿತ್ತು. ಶುಕ್ರವಾರವೂ ವಿಚಾರಣೆಗೆ ಹಾಜರಾಗುವಂತೆ ಕಾಂಗ್ರೆಸ್ ನಾಯಕನಿಗೆ ಸೂಚಿಸಿತ್ತು. ಜನ್ಮದಿನಾಚರಣೆ ಇರುವುದರಿಂದ ಶುಕ್ರವಾರದ ಬದಲು ಸೋಮವಾರ ವಿಚಾರಣೆಗೆ ಹಾಜರಾಗುವುದಾಗಿ ರಾಹುಲ್ ಹೇಳಿದ್ದರು.

ರಾಮನಾಥ ಕೋವಿಂದ್‌ಗೆ ಮನವಿ

ರಾಹುಲ್ ಗಾಂಧಿ ವಿಚಾರಣೆ ವಿರೋಧಿಸಿ ಪ್ರತಿಭಟನೆ ನಡೆಸಿದ ಪಕ್ಷದ ಸಂಸದರ ಮೇಲೆ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ನಿಯೋಗವು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಸೋಮವಾರ ಮನವಿ ಸಲ್ಲಿಸಿತು. ಅಗ್ನಿಪಥ ಯೋಜನೆಯನ್ನು ಕೈಬಿಡಬೇಕು ಎಂದೂ ಆಗ್ರಹಿಸಿದರು.

ಅಶೋಕ ಗೆಹಲೋತ್, ಛತ್ತೀಸಗಡದ ಮುಖ್ಯಮಂತ್ರಿ ಭೂಪೇಶ್ ಬಘೇಲ್, ಹಿರಿಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಅಧೀರ್ ರಂಜನ್ ಚೌಧರಿ, ಪಿ.ಚಿದಂಬರಂ, ಜೈರಾಮ್ ರಮೇಶ್, ಕೆ.ಸಿ.ವೇಣುಗೋಪಾಲ್ ನಿಯೋಗದಲ್ಲಿ ಇದ್ದರು.

ಸೋಮವಾರ ಒಟ್ಟು 8 ಗಂಟೆಗಳ ಕಾಲ ವಿಚಾರಣೆ ಎದುರಿಸಿದರು.

ಯಂಗ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ರಾಹುಲ್ ಗಾಂಧಿ ಪ್ರಮುಖ ಪಾಲುದಾರರಾಗಿದ್ದು, 2011 ರಲ್ಲಿ ಸಂಸ್ಥೆಯು ಪಡೆದ ₹ 1 ಕೋಟಿ ಸಾಲದ ಬಗ್ಗೆ ಅಧಿಕಾರಿಗಳು ವಿವರಣೆಗಳನ್ನು ಪಡೆದರು ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್ ಧರಣಿ: ಕೇಂದ್ರ ಸರ್ಕಾರವು ದ್ವೇಷದ ರಾಜಕಾರಣ ನಡೆಸುತ್ತಿದೆ ಎಂದು ಆರೋಪಿಸಿ ಹಾಗೂ ಅಗ್ನಿಪಥ ಯೋಜನೆಯನ್ನು ವಿರೋಧಿಸಿ ಕಾಂಗ್ರೆಸ್ ನಾಯಕರು ಜಂತರ್ ಮಂತರ್‌ನಲ್ಲಿ ಧರಣಿ ನಡೆಸಿದರು.

ಧರಣಿಯಲ್ಲಿ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ ಗೆಹಲೋತ್, ಪಕ್ಷದ ಮುಖಂಡರಾದ ಮಲ್ಲಿಕಾರ್ಜುನ ಖರ್ಗೆ, ಅಧೀರ್ ರಂಜನ್ ಚೌಧರಿ, ಸಚಿನ್ ಪೈಲಟ್, ಸಲ್ಮಾನ್ ಖುರ್ಷಿದ್, ಕೆ.ಸಿ.ವೇಣುಗೋಪಾಲ್ ಸೇರಿದಂತೆ ಪ್ರಮುಖ ನಾಯಕರು ಪಾಲ್ಗೊಂಡಿದ್ದರು.

ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅಶೋಕ ಗೆಹಲೋತ್, ‘ದೇಶದ ಎಲ್ಲ ಆಸ್ತಿಗಳನ್ನು ಬಿಜೆಪಿ ಸರ್ಕಾರ ಮಾರಾಟ ಮಾಡುತ್ತಿದೆ. ಸಿಬಿಐ, ಇ.ಡಿ ಹಾಗೂ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ಕಾಂಗ್ರೆಸ್ ಹಾಗೂ ರಾಹುಲ್ ಗಾಂಧಿ ಅವರನ್ನು ಬೆದರಿಸಲು ನೋಡುತ್ತಿದೆ’ ಎಂದರು.

ರಾಹುಲ್ ಗಾಂಧಿ ಅವರು ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ, ರಫೇಲ್ ಹಗರಣದ ವಿರುದ್ಧ ಧ್ವನಿ ಎತ್ತಿದ್ದರು. ಹೀಗಾಗಿ, ನಮ್ಮ ನಾಯಕನ ಧ್ವನಿಯನ್ನು ಅಡಗಿಸಲು ಕೇಂದ್ರ ನೋಡುತ್ತಿದೆ ಎಂದು ದೂರಿದರು.

ಈಡಿಗ ಸಮುದಾಯಕ್ಕೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಲು ಒತ್ತಾಯ

ಪ್ರಣವಾನಂದ ಸ್ವಾಮೀಜಿ ನಿರಶನ ಆರಂಭ

ಪ್ರಜಾವಾಣಿ ವಾರ್ತೆ

ಕಲಬುರಗಿ: ಆರ್ಯ ಈಡಿಗ ಸಮುದಾಯಕ್ಕೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆ, ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಸೇಂದಿ ಇಳಿಸಲು ಅನುಮತಿ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಆರ್ಯ ಈಡಿಗ ರಾಷ್ಟ್ರೀಯ ಮಹಾ ಮಂಡಳ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ಸೋಮವಾರ ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಎದುರು ಆಮರಣಾಂತ ಉಪವಾಸ ಆರಂಭಿಸಿದರು.

‘ಸೇಂದಿ ಇಳಿಸಲು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಅನುಮತಿಯಿದೆ ಹೊರತು ಕಲ್ಯಾಣ ಕರ್ನಾಟಕದಲ್ಲಿ ಇಲ್ಲ. ಇದರ ಪರಿಣಾಮ ಸಹಸ್ರಾರು ಮೂರ್ತೆದಾರ ಕುಟುಂಬಗಳು ಬೀದಿಗೆ ಬಿದ್ದಿವೆ. ಬೇರೆ ಉದ್ಯೋಗವೂ ಅವರಿಗೆ ಗೊತ್ತಿಲ್ಲ. ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು’ ಎಂದು ಪ್ರಣಾವನಂದ ಸ್ವಾಮೀಜಿ ಒತ್ತಾಯಿಸಿದರು.

‘ಬ್ರಹ್ಮಶ್ರೀ ನಾರಾಯಣ ಗುರುಗಳ ಹೆಸರಿನಲ್ಲಿ ಪ್ರತ್ಯೇಕ ಅಭಿವೃದ್ಧಿ ನಿಗಮ ಆರಂಭಿಸಿ ₹ 500 ಕೋಟಿ ಅನುದಾನ ಮೀಸಲಿಡಬೇಕು. ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ನಾರಾಯಣ ಗುರುಗಳ ಹೆಸರಿನಲ್ಲಿ ಅಧ್ಯಯನ ಪೀಠ ಆರಂಭಿಸಬೇಕು. ಎಂಎಸ್‌ಐಎಲ್ ಮಳಿಗೆಗಳಲ್ಲಿ ಈಡಿಗ ಸಮುದಾಯದ ಯುವಕರಿಗೆ ಉದ್ಯೋಗ ನೀಡಬೇಕು. ವೈನ್ ಶಾಪ್ ಲೈಸೆನ್ಸ್ ನೀಡುವಾಲೂ ಅದ್ಯತೆ ನೀಡಬೇಕು’ ಎಂದರು.



ಈಡಿಗ ರಾಷ್ಟ್ರೀಯ ಮಹಾ ಮಂಡಳ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ಸೋಮವಾರ ಕಲಬುರಗಿ ಜಿಲ್ಲಾಧಿಕಾರಿ ಕಚೇರಿ ಎದುರು ಆಮರಣ ಉಪವಾಸ ಆರಂಭಿಸಿದರು. ಶಾಸಕ ಪ್ರಿಯಾಂಕ್ ಖರ್ಗೆ,ಈಡಿಗ ಸಮುದಾಯದ ಮುಖಂಡರು ಇದ್ದರು

ಕಲಬುರಗಿ, ಯಾದಗಿರಿ, ರಾಯಚೂರು, ಬೀದರ್ ಮತ್ತು ವಿಜಯಪುರ ಜಿಲ್ಲೆಗಳ ಈಡಿಗ ಸಮುದಾಯದ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಪವಾಸ ಕೈಬಿಡಲು ಮನವಿ: ಸ್ಥಳಕ್ಕೆ ಭೇಟಿ ನೀಡಿದ ಸಂಸದ ಡಾ.ಉಮೇಶ ಜಾಧವ, ‘ಈಡಿಗ ಸಮುದಾಯದ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಹಾನುಭೂತಿ ಇದೆ. ಬೇಡಿಕೆ ಈಡೇರಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಜೊತೆ ಚರ್ಚಿಸುವೆ’ ಎಂದು ತಿಳಿಸಿದರು.

‘ಸ್ವಾಮೀಜಿ ಅವರು ಉಪವಾಸ ಕೈಬಿಡಬೇಕು. ಜುಲೈ ಮೊದಲ ವಾರದಲ್ಲಿ ಸ್ವಾಮೀಜಿ, ಸಮಾಜದ ಮುಖಂಡರನ್ನು ಮುಖ್ಯಮಂತ್ರಿ ಅವರ ಜೊತೆಗೆ ಭೇಟಿ ಮಾಡಿಸಲಾಗುವುದು’ ಎಂದು ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ವಿಡಿಯೊ ಸಂದೇಶದಲ್ಲಿ ಮನವಿ ಮಾಡಿದ್ದಾರೆ.

ವಿವೇಕ ರೈಗೆ ರಾಷ್ಟ್ರಕವಿ ಗೋವಿಂದ ಪೈ ಪ್ರಶಸ್ತಿ



ಉಡುಪಿ: ವಿದ್ವಾಂಸ ಬಿ.ಎ. ವಿವೇಕ ರೈ ಅವರನ್ನು 2022ನೇ ಸಾಲಿನ ರಾಷ್ಟ್ರಕವಿ ಗೋವಿಂದ ಪೈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದಿಂದ ಕೊಡಮಾಡುವ ಟಿ.ವಿಮಲಾ ವಿ.ಪೈ ಪ್ರಾಯೋಜಿತ ಪ್ರಶಸ್ತಿಯನ್ನು ಟಿ.ವಿ. ಮೋಹನ್‌ದಾಸ್ ಪೈ ಸ್ಥಾಪಿಸಿದ್ದಾರೆ. ಪ್ರಶಸ್ತಿಯು ₹ 1 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ. ಸೆಪ್ಟೆಂಬರ್‌ನಲ್ಲಿ ಉಡುಪಿಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಶೋಧನಾ ಕೇಂದ್ರದ ಆಡಳಿತಾಧಿಕಾರಿ ಡಾ.ಬಿ.ಜಗದೀಶ್ ಶೆಟ್ಟಿ ತಿಳಿಸಿದ್ದಾರೆ.

ರಾಮಮಂದಿರ ನಿರ್ಮಾಣ: ₹ 22 ಕೋಟಿ ಮೌಲ್ಯದ ಚೆಕ್‌ಗಳು ಬೌನ್ಸ್

ಪ್ರಜಾವಾಣಿ ವಾರ್ತೆ

ಲಖನೌ: ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣಕ್ಕೆ ದೇಣಿಗೆಯಾಗಿ ನೀಡಿದ್ದ ₹22 ಕೋಟಿ ಮೌಲ್ಯದ ಚೆಕ್‌ಗಳು ಬೌನ್ಸ್ ಅಗಿದ್ದು, ನಿರ್ಮಾಣ ಕಾಮಗಾರಿಯ ಉಸ್ತುವಾರಿ ನೋಡಿಕೊಳ್ಳುತ್ತಿರುವ ರಾಮ ಜನ್ಮಭೂಮಿ ತೀರ್ಥ ಟ್ರಸ್ಟ್‌ಗೆ ಇದುವರೆಗೆ ₹5,400 ಕೋಟಿಗೂ ಹೆಚ್ಚು ದೇಣಿಗೆ ಬಂದಿದೆ.

‘ಕಳೆದ ವರ್ಷ ಜನವರಿ ಮತ್ತು ಮಾರ್ಚ್ ನಡುವೆ ಆರಂಭವಾದ ಮೂರು ತಿಂಗಳ ದೇಣಿಗೆಯ ಅಭಿಯಾನದಲ್ಲಿಯೇ ₹ 3,500 ಕೋಟಿ ಮೊತ್ತದ ದೇಣಿಗೆಯನ್ನು ಸ್ವೀಕರಿಸಲಾಗಿದೆ’ ಎಂದು ಟ್ರಸ್ಟ್‌ನ ಪದಾಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

‘ಸುಮಾರು 1,500 ಚೆಕ್‌ಗಳು ತಾಂತ್ರಿಕ ಕಾರಣಗಳಿಂದಾಗಿ ಬೌನ್ಸ್ ಆಗಿವೆ. ಈ ಚೆಕ್‌ಗಳನ್ನು ನೀಡಿದ್ದವರಲ್ಲಿ ಬಹುತೇಕರು ನಮ್ಮನ್ನು ಸಂಪರ್ಕಿಸಿದ್ದು, ಹೊಸದಾಗಿ ದೇಣಿಗೆ ನೀಡುವುದಾಗಿ ಹೇಳಿದ್ದಾರೆ’ ಎಂದೂ ಅವರು ತಿಳಿಸಿದ್ದಾರೆ.

ಪಿಎಸ್‌ಐ ಅಕ್ರಮ ಮಾಜಿ ಸೈನಿಕ ಸೆರೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಮಾಜಿ ಸೈನಿಕ, ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸರೂರ ಗ್ರಾಮದ ವಿಶ್ವನಾಥ ತಿಮ್ಮಪ್ಪ ಮಾನೆ ಎಂಬ ಆರೋಪಿಗೆ ಸಿಐಡಿ ಅಧಿಕಾರಿಗಳು ಸೋಮವಾರ ಬಂಧಿಸಿದ್ದಾರೆ.

‘ಕಲಬುರಗಿಯ ನೊಬೆಲ್ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ ಬ್ಲೂಟೂತ್ ಬಳಸಿದ್ದ ಬಗ್ಗೆ ಸಿಐಡಿ ಅಧಿಕಾರಿಗಳು ಮಾಹಿತಿ ಪಡೆದಿದ್ದರು. ಪ್ರಕರಣಕ್ಕೆ ಸಂಬಂಧಿಸಿ ಬಂಧನದಲ್ಲಿರುವ ಆರ್. ಡಿ.ಪಾಟೀಲಗೆ ಅಕ್ರಮ ಎಸಗಲು ಆರೋಪಿ ನೆರವಾಗಿದ್ದ. ಪಿಎಸ್‌ಐ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಮಾಜಿ ಸೈನಿಕರ ಕೋಟಾದಡಿ ಪರೀಕ್ಷೆ ಬರೆದಿದ್ದ ವಿಶ್ವನಾಥ ಮಾನೆ ಮೊದಲ ರ್‍ಯಾಂಕ್‌ನಲ್ಲಿ ಉತ್ತೀರ್ಣಗೊಂಡಿದ್ದ’ ಎಂದು ಮೂಲಗಳು ತಿಳಿಸಿವೆ.

ತಮಿಳುನಾಡು: ₹400 ಕೋಟಿ ತೆರಿಗೆ ವಂಚನೆ ಪತ್ತೆ

ಚೆನ್ನೈ: ಮದ್ಯ ತಯಾರಿಕೆ ಹಾಗೂ ವಿವಿಧ ಸೇವೆಗಳನ್ನು ನೀಡುವ ತಮಿಳುನಾಡು ಮೂಲದ ಎಂಜಿಎಂ ಸಮೂಹದ ಸಂಸ್ಥೆಯು ₹400 ಕೋಟಿ ತೆರಿಗೆ ವಂಚನೆ ಮಾಡಿರುವುದನ್ನು ಪತ್ತೆ ಹಚ್ಚಲಾಗಿದೆ ಎಂದು ಆದಾಯ ತೆರಿಗೆ ಇಲಾಖೆಯ ಅಧಿಕಾರಿ ಹೇಳಿದ್ದಾರೆ.

ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಜೂನ್ 15ರಂದು ತಮಿಳುನಾಡು, ಪುದುಚೇರಿ ಮತ್ತು ತೆಲಂಗಾಣದಲ್ಲಿರುವ ಸಂಸ್ಥೆಗೆ ಸೇರಿದ 40 ಕಡೆಗಳಲ್ಲಿ ದಾಳಿ ನಡೆಸಿ, ಸಂಸ್ಥೆಯ ಅಕ್ರಮದ ಕುರಿತ ಕಡತಗಳು ಮತ್ತು ಡಿಜಿಟಲ್ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಗಿದೆ. ಹಣದ ಮೂಲದ ಬಗ್ಗೆ ಮಾಹಿತಿ ನೀಡದ ಕಾರಣ ₹3 ಕೋಟಿ ನಗದು, ₹2.5 ಕೋಟಿ ಮೌಲ್ಯದ ಚಿನ್ನಾಭರಣ ಗಳನ್ನು ವಶಕ್ಕೆ ಪಡೆಯಲಾಗಿದೆ. ಈ ಕಂಪನಿಯು ಸುಳ್ಳು ಲೆಕ್ಕ ನಮೂದಿಸಿ ₹400 ಕೋಟಿ ತೆರಿಗೆ ವಂಚಿಸಿರುವುದು ಗೊತ್ತಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಆದರೆ, ಆದಾಯ ತೆರಿಗೆ ಇಲಾಖೆ ದಾಳಿಗೆ ಗುರಿಯಾದ ಸರಕು ಸಾಗಣೆ, ಮನರಂಜನೆ, ಆತಿಥ್ಯ ರೀತಿಯ ಸೇವೆ ಹಾಗೂ ಮದ್ಯ ತಯಾರಿಕೆ ಕಂನಿಯ ಹೆಸರನ್ನು ಸಿಬಿಡಿಟಿ ಬಹಿರಂಗಪಡಿಸಿಲ್ಲ. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೋಟೆಲ್‌ಗಳನ್ನು ಹೊಂದಿದೆ ಎಂದು ಹೇಳಲಾಗಿದೆ. ಆದಾಗ್ಯೂ, ಐಟಿ ಅಧಿಕಾರಿಗಳ ದಾಳಿಯು ಎಂಜಿಎಂ ಸಮೂಹ ಸಂಸ್ಥೆಯ ಮೇಲೆ ನಡೆದಿದೆ ಎಂದು ಮೂಲಗಳು ’ಪ್ರಜಾವಾಣಿ‘ಗೆ ತಿಳಿಸಿವೆ.

‘ಕಾಲಮೇಲೆ ಕಾಲು ಹಾಕಿ ಕೂರಲು ನಿರ್ಬಂಧವಿಲ್ಲ’

ಬೆಂಗಳೂರು: ‘ಕೋರ್ಟ್ ಕಲಾಪ ನಡೆಯುವ ವೇಳೆ ಹಾಲ್‌ನಲ್ಲಿ ಕಾಲಮೇಲೆ ಕಾಲು ಹಾಕಿ ಕುಳಿತುಕೊಳ್ಳುವುದನ್ನು ನಿರ್ಬಂಧಿಸಲಾದ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶಗಳಿಲ್ಲ' ಎಂದು ಹೈಕೋರ್ಟ್ ಜಂಟಿ ರಿಜಿಸ್ಟ್ರಾರ್ ತಿಳಿಸಿದ್ದಾರೆ.

ಈ ಕುರಿತಂತೆ ಮಾಹಿತಿ ಹಕ್ಕು ಕಾರ್ಯಕರ್ತ ಟಿ.ನರಸಿಂಹ ಮೂರ್ತಿ ಕೇಳಿದ್ದ ಪ್ರಶ್ನೆಗೆ ಹೈಕೋರ್ಟ್ ಜಂಟಿ ರಿಜಿಸ್ಟ್ರಾರ್ ಲಿಖಿತ ಉತ್ತರ ನೀಡಿದ್ದಾರೆ.

‘ಕೋರ್ಟ್ ಕಲಾಪ ನಡೆಯುವಾಗ ಹಾಲ್‌ನಲ್ಲಿ ನಾಗರಿಕರು ತಮ್ಮ ಕಾಲಮೇಲೆ ಕಾಲು ಹಾಕಿ ಕುಳಿತುಕೊಳ್ಳುವುದರ ಕುರಿತಾಗಿ ಹೈಕೋರ್ಟ್ ಆದೇಶ, ತೀರ್ಪು, ಮಾರ್ಗದರ್ಶಿ ಸೂತ್ರ, ಅಧಿಸೂಚನೆ ಅಥವಾ ರಾಜ್ಯ ನಿರ್ದೇಶನಗಳೇನಾದರೂ ಇವೆಯೇ’ ಎಂದು ವಿವರ ಕೋರಿ ನರಸಿಂಹಮೂರ್ತಿ ಮಾಹಿತಿ ಹಕ್ಕು ಕಾಯ್ದೆಯಡಿ 2022ರ ಮೇ 27ರಂದು ಅರ್ಜಿ ಸಲ್ಲಿಸಿದ್ದರು. ಇದಕ್ಕೆ ಜಂಟಿ ರಿಜಿಸ್ಟ್ರಾರ್; ‘ಸಂಬಂಧಿತ ಕಚೇರಿ, ಧಾರವಾಡ, ಕಲಬುರ್ಗಿ ಪೀಠಗಳಿಂದ ಮಾಹಿತಿ ಪಡೆಯಲಾಗಿದ್ದು, ಅಂತಹ ಯಾವುದೇ ಆದೇಶಗಳಿಲ್ಲ’ ಎಂದು ಇದೇ 9ರಂದು ಪ್ರತ್ಯುತ್ತರ ನೀಡಿದ್ದಾರೆ.

ದಕ್ಷಿಣ ಕನ್ನಡ: ಧಾರಾಕಾರ ಮಳೆ

ಕರಾವಳಿಯಲ್ಲಿ ಜೂನ್ 25ರವರೆಗೆ ‘ಯೆಲ್ಲೋ ಅಲರ್ಟ್’ ಘೋಷಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದಲ್ಲಿ ಸೋಮವಾರ ಸಂಜೆ ಧಾರಾಕಾರ ಮಳೆ ಸುರಿಯಿತು. ಎರಡು ದಿನಗಳಿಂದ ಬಿಸಿಲಿನಿಂದ ಕೂಡಿದ ವಾತಾವರಣ ವಿತ್ತು. ಸೆಖೆಯಿಂದ ಬಳಲುತ್ತಿದ್ದ ಜನರು, ಸಂಜೆ ಸುರಿದ ಮಳೆಯಿಂದಾಗಿ ನಿಟ್ಟುಸಿರು ಬಿಟ್ಟರು.

ಸೋಮವಾರ ಮಧ್ಯಾಹ್ನ ನಂತರ ಮೋಡ ಕವಿದ ವಾತಾವರಣವಿತ್ತು. ಸಂಜೆ ವೇಳೆ ಒಂದೇ ಸಮನೆ ಮಳೆ ಸುರಿಯಿತು. ತಗ್ಗುಪ್ರದೇಶದ ರಸ್ತೆಗಳಲ್ಲಿ ಮಳೆನೀರು ನಿಂತು ವಾಹನ ಸವಾರರು ಸಮಸ್ಯೆ ಎದುರಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಬಂಟ್ವಾಳ, ಸುಳ್ಯ ತಾಲ್ಲೂಕುಗಳಲ್ಲಿ ಸಾಧಾರಣ ಮಳೆಯಾಗಿದೆ. ಉಡುಪಿ ಜಿಲ್ಲೆಯಾದ್ಯಂತ ಸಂಜೆ ವೇಳೆ ಉತ್ತಮ ಮಳೆಯಾಗಿದೆ. ಜಿಲ್ಲೆಯ ಕೆಲವೆಡೆ ತಗ್ಗು-ಪ್ರದೇಶಗಳು ಜಲಾವೃತವಾಗಿದ್ದವು.

ವಾಡಿಕೆಗಿಂತ ಕಡಿಮೆ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂಗಾರು ಪ್ರವೇಶದ ಬಳಿಕ ವಾಡಿಕೆಯಷ್ಟು ಮಳೆಯಾಗಿಲ್ಲ.

ಜೂನ್‌14–20ರ ಅವಧಿಯಲ್ಲಿ ಸರಾಸರಿ 539.5 ಮಿ.ಮೀ. ಮಳೆ ಆಗುವುದು ವಾಡಿಕೆ. ಈ ಬಾರಿ ವಾಡಿಕೆಗಿಂತ ಶೇ 59ರಷ್ಟು ಕಡಿಮೆ (221.8 ಮಿ.ಮೀ) ಮಳೆಯಾಗಿದೆ.

ಪ್ರತಿವರ್ಷ ಜನವರಿಯಿಂದ ಜೂನ್ 20ರವರೆಗೆ ಜಿಲ್ಲೆಯಲ್ಲಿ ಸರಾಸರಿ 782 ಮಿ.ಮೀ ಮಳೆಯಾಗುತ್ತದೆ. ಆದರೆ ಈ ಬಾರಿ 717 ಮಿ.ಮೀ ಮಳೆಯಾಗಿದೆ. ಇದು ವಾಡಿಕೆಗಿಂತ ಶೇ 8ರಷ್ಟು ಕಡಿಮೆಯಾಗಿದೆ.


ಮಂಗಳೂರಿನಲ್ಲಿ ಸೋಮವಾರ ರಾತ್ರಿ ಧಾರಾಕಾರ ಮಳೆ ಸುರಿಯಿತು –ಪ್ರಜಾವಾಣಿ ಚಿತ್ರ

ಕರಾವಳಿಯಲ್ಲಿ 25ರವರೆಗೆ ‘ಯೆಲ್ಲೋ ಅಲರ್ಟ್’ ಕಾರವಾರ(ವರದಿ): ಉತ್ತರ ಕನ್ನಡ ಸೇರಿದಂತೆ ರಾಜ್ಯದ ಕರಾವಳಿಯ ಮೂರೂ ಜಿಲ್ಲೆಗಳಲ್ಲಿ ಜೂನ್ 25ರ ತನಕ ‘ಯೆಲ್ಲೋ ಅಲರ್ಟ್’ ಘೋಷಿಸಲಾಗಿದೆ. ಗುಡುಗು ಸಹಿತ ಜೋರಾಗಿ ಮಳೆಯಾಗಬಹುದು ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಾರವಾರ, ಕುಮಟಾ, ಹೊನ್ನಾವರ ಹಾಗೂ ಭಟ್ಕಳ ಭಾಗದಲ್ಲಿ ಸೋಮವಾರ ಮಧ್ಯಾಹ್ನದ ನಂತರ ಆಗಾಗ ಕೆಲ ಸಮಯ ಜೋರಾಗಿ ಮಳೆಯಾಯಿತು. ಬೆಳಿಗ್ಗೆಯಿಂದ ಮೋಡ, ಬಿಸಿಲಿನ ವಾತಾವರಣವಿತ್ತು.

ಮಲೆನಾಡಿನ ತಾಲ್ಲೂಕುಗಳಲ್ಲಿ ಮೋಡ ಕವಿದ ವಾತಾವರಣವಿತ್ತು.

ಎರಡು ದಿನದಿಂದ ಮಳೆಯ ಸುಳಿವಿಲ್ಲದೇ ಚಿಂತೆಗೀಡಾಗಿದ್ದ ರೈತರು, ಮತ್ತೆ ಮಳೆಯ ವಾತಾವರಣ ಕಂಡಿದ್ದರಿಂದ ಸಂತಸಗೊಂಡಿದ್ದಾರೆ. ಹಳಿಯಾಳ, ಮುಂಡಗೋಡ ತಾಲ್ಲೂಕುಗಳಲ್ಲಿ ಗೋವಿನ ಜೋಳ ಬಿತ್ತನೆ ಮಾಡಿರುವ ರೈತರು ಉತ್ತಮ ಮಳೆಯ ನಿರೀಕ್ಷೆಯಲ್ಲಿದ್ದಾರೆ.

ಉಡುಪಿ ವರದಿ: ಕರಾವಳಿ ಭಾಗದ ಜಿಲ್ಲೆಗಳಲ್ಲಿ ಜೂನ್ 23 ಹಾಗೂ 24ರಂದು ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉಡುಪಿ ಜಿಲ್ಲೆಯಾದ್ಯಂತ ಸೋಮವಾರ ಬಿರುಸಿನ ಮಳೆಯಾಗಿದೆ. ಮಂಗಳೂರು ನಗರದಲ್ಲಿ ಬೆಳಿಗ್ಗೆ ಸಾಧಾರಣ ಮಳೆ ಸುರಿಯಿತು.

ಗೋಡೆ ಕುಸಿದು ವೃದ್ಧೆ ಸಾವು

ನಾಗಮಂಗಲ (ಮಂಡ್ಯ): ಭಾನುವಾರ ಸಂಜೆ ಸುರಿದ ಮಳೆಗೆ ತಾಲ್ಲೂಕಿನ ಕನ್ನೇನಹಳ್ಳಿಯಲ್ಲಿ ಮನೆ ಗೋಡೆ ಕುಸಿದು ವೃದ್ಧೆ, ಗ್ರಾಮದ ನಿವಾಸಿ ಪುಟ್ಟಸ್ವಾಮಿ ಅವರ ಪತ್ನಿ ಗಂಗಮ್ಮ (65) ಮೃತಪಟ್ಟರು.

ಗೋಡೆ ಕುಸಿದು ಗಾಯಗೊಂಡಿದ್ದ ಗಂಗಮ್ಮ ಅವರನ್ನು ತಾಲ್ಲೂಕಿನ ಆದಿಚುಂಚನಗಿರಿ ವೈದ್ಯಕೀಯ ಆಸ್ಪತ್ರೆಗೆ ಸೇರಿಸಲಾಗಿತ್ತು. ಅಲ್ಲಿ ಅವರು ಮೃತಪಟ್ಟರು. ಮೃತರ ಕುಟುಂಬಕ್ಕೆ ತಾಲ್ಲೂಕು ಆಡಳಿತ ವತಿಯಿಂದ ವಿಪತ್ತು ನಿರ್ವಹಣೆಯ ನಿಧಿಯಿಂದ ₹ 5 ಲಕ್ಷ ಪರಿಹಾರ ನೀಡಲಾಗಿದೆ.

‘ಅಂಗವಿಕಲ ಕಲಾವಿದೆಗೆ ಪ್ರಯಾಣ ನಿರಾಕರಿಸಿದ ಅಲಯನ್ಸ್ ಏರ್‌ಲೈನ್ಸ್’

ಕೊಚ್ಚಿ (ಪಿಟಿಐ): ಬೆಂಗಳೂರಿನಿಂದ ಕೊಚ್ಚಿಗೆ ಹೊರಟಿದ್ದ ಅಲಯನ್ಸ್ ಏರ್ ವಿಮಾನದಲ್ಲಿ ಬ್ಯಾಟರಿ ಚಾಲಿತ ತನ್ನ ಗಾಲಿಕುರ್ಚಿಯೊಂದಿಗೆ ಪ್ರಯಾಣಿಸಲು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶನಿವಾರ ಅವಕಾಶ ನಿರಾಕರಿಸಲಾಯಿತು ಎಂದು ಪ್ರಶಸ್ತಿ ಪುರಸ್ಕೃತ ಕಲಾವಿದೆಯೊಬ್ಬರು ದೂರಿದ್ದಾರೆ.

‘ನನ್ನ ಸ್ನೇಹಿತನ ಜತೆಗೆ ಕೊಚ್ಚಿ ತಲುಪಲು ₹ 8 ಸಾವಿರ ಮೊತ್ತದ ಟಿಕೆಟ್ ಕಾಯ್ದಿರಿಸಿದ್ದೆ. ಆದರೆ, ವಿಮಾನದಲ್ಲಿ ಗಾಲಿಕುರ್ಚಿ ಕೊಂಡೊಯ್ಯಲು ನನಗೆ ಅವಕಾಶ ನಿರಾಕರಿಸಲಾಯಿತು. ಗಾಲಿ ಕುರ್ಚಿ ಬಿಡಬೇಕು ಇಲ್ಲವೇ ಬೇರೆ ವಿಮಾನ ಹತ್ತಬೇಕು ಎನ್ನುವ ಏಕೈಕ ಆಯ್ಕೆಯನ್ನು ಅಲಯನ್ಸ್ ಏರ್‌ಲೈನ್ಸ್ ಸಂಸ್ಥೆ ಸಿಬ್ಬಂದಿ ನನಗೆ ನೀಡಿದರು. ಸಿಬ್ಬಂದಿ ನನ್ನೊಂದಿಗೆ ದ್ವೇಷಪೂರಿತ ವರ್ತನೆ ತೋರಿದರು’ ಎಂದು ಕಲಾವಿದೆ ಸರಿತಾ ದ್ವಿವೇದಿ ಸೋಮವಾರ ದೂರಿದ್ದಾರೆ.

ಈ ಕುರಿತು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧ್ಯಾ ಅವರಿಗೂ ಟ್ವೀಟ್ ಮಾಡಿರುವ ಸರಿತಾ, ‘ಕೊಚ್ಚಿ ತಲುಪಲು ಮತ್ತೊಂದು ಖಾಸಗಿ ವಿಮಾನದಲ್ಲಿ ಗಾಲಿಕುರ್ಚಿಯೊಂದಿಗೆ ಪ್ರಯಾಣಿಸಲು ಸುಮಾರು ₹ 14,000 ಖರ್ಚು ಮಾಡ ಬೇಕಾಯಿತು. ಅಲಯನ್ಸ್ ಏರ್ ವಿಮಾನ ಸಂಸ್ಥೆಯು ಟಿಕೆಟ್ ಮೊತ್ತವನ್ನು ಹಿಂತಿರುಗಿಸಲಿಲ್ಲ. ಶನಿವಾರ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಲಯನ್ಸ್ ಏರ್ ಕೌಂಟರ್‌ನಲ್ಲಿ ತುಂಬಾ ಕೆಟ್ಟ ಅನುಭವ ಆಯಿತು’ ಎಂದು ಅಳಲು ತೋಡಿಕೊಂಡಿದ್ದಾರೆ.

ನಿಧನ ವಾರ್ತೆ

ಖಾಸಿಮ್ ಉಳ್ಳಾಲ



ಮಂಗಳೂರು: ಸಾಹಿತಿ ಯು.ಎ. ಖಾಸಿಮ್ ಉಳ್ಳಾಲ (74) ಸೋಮವಾರ ಇಲ್ಲಿ ನಿಧನರಾದರು. ಅವರಿಗೆ ಪತ್ನಿ, ನಾಲ್ವರು ಪುತ್ರರು, ಮೂವರು ಪುತ್ರಿ ಯರು ಇದ್ದಾರೆ. ಬ್ಯಾರಿ ಮತ್ತು ಕನ್ನಡ ಭಾಷೆಯಲ್ಲಿ ಅನೇಕ ಕೃತಿಗಳನ್ನು ರಚಿಸಿ ದ್ದಾರೆ. ಬ್ಯಾರಿ ಸಾಹಿತ್ಯ ಚಳವಳಿಯ ರೂವಾರಿಗಳಲ್ಲಿ ಒಬ್ಬರಾಗಿದ್ದು ಉಳ್ಳಾಲ, ಬ್ಯಾರಿ ಆಂದೋಲನದ ಮುಂಚೂಣಿಯಲ್ಲಿದ್ದರು.

ಬ್ಯಾರಿ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ, ಕೇಂದ್ರ ಬ್ಯಾರಿ ಪರಿಷತ್, ಬ್ಯಾರಿ ಸಾಹಿತ್ಯ, ಸಾಂಸ್ಕೃತಿಕ ಸಂಘದ ಪದಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ಸೋಮವಾರ ಅಂತ್ಯಕ್ರಿಯೆ ನೆರವೇರಿತು.

ಮಂಗಳವಾರ, ಜೂನ್ 21, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 171 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಯೋಗ ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ಆಧ್ಯಾತ್ಮಿಕ–ಧಾರ್ಮಿಕ ಸಾಧನೆಯ ಭಾಗವಾಗಿದೆ. ಶಾಶ್ವತವೂ ಸುಖಕರವೂ ಆದ ನೆಮ್ಮದಿಯ ಸ್ಥಿತಿಯನ್ನು ಒದಗಿಸುವುದು ಯೋಗದ ಗುರಿ.



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
51,598 ▲	15,350 ▲	₹52,920 (ಬೆಂಗಳೂರು)	₹62,800 (ಬೆಂಗಳೂರು)	77.98 ▲

40 ವರ್ಷಗಳಲ್ಲಿ ಆಗದ ಕೆಲಸ 40 ತಿಂಗಳಿನಲ್ಲಿ ಪೂರ್ಣ: ಪ್ರಧಾನಿ ಮೋದಿ ಘೋಷಣೆ

‘ನಾಡ ಪ್ರಗತಿಗೆ ಕೇಂದ್ರದ ಹೆಗಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಸಂಪೂರ್ಣ ಹೆಗಲಿಗೆ ಹೆಗಲು ಕೊಡಲಿದೆ. ಕರ್ನಾಟಕದ ಅಭಿವೃದ್ಧಿಗೆ ವೇಗ ತುಂಬುವುದೇ ‘ಡಬಲ್ ಎಂಜಿನ್’ ಸರ್ಕಾರದ ಗುರಿ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು.

ನಗರದ ಕೊಮ್ಮಘಟ್ಟದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ₹ 33,000 ಕೋಟಿ ವೆಚ್ಚದ ರೈಲ್ವೆ, ರಸ್ತೆ ಮತ್ತು ಇತರ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಕಾಮಗಾರಿ ಪೂರ್ಣಗೊಂಡಿರುವ ಯೋಜನೆಗಳನ್ನು ಸಾರ್ವಜನಿಕ ಬಳಕೆಗೆ ಅರ್ಪಿಸಿ ಅವರು ಮಾತನಾಡಿದರು.

ರಾಜ್ಯದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರಕ್ಕೆ ಕೇಂದ್ರ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ. ಈ ವಿಚಾರದಲ್ಲಿ ತಮ್ಮ ಸರ್ಕಾರ ನುಡಿದಂತೆ ನಡೆಯಲಿದೆ ಎಂದು ಭರವಸೆ ನೀಡಿದರು.

‘ಡಬಲ್ ಎಂಜಿನ್ ಸರ್ಕಾರ (ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಕಡೆ ಬಿಜೆಪಿ ಆಡಳಿತ) ಇದ್ದರೆ ಪ್ರಗತಿ ಕೆಲಸಗಳಿಗೆ ವೇಗ ದೊರೆಯುತ್ತದೆ ಎಂದು ನಾನು ಈ ಹಿಂದೆ ಕರ್ನಾಟಕದ ಜನರಿಗೆ ಭರವಸೆ ನೀಡಿದ್ದೆ. ಅದು ಸಾಕಾರಗೊಳ್ಳುತ್ತಿರುವುದಕ್ಕೆ ಇಲ್ಲಿ ಮೊದಲ ಸಾಕ್ಷ್ಯ ಕಣ್ಣ ಮುಂದಿದೆ’ ಎಂದರು.


ಬೆಂಗಳೂರಿನ ಕೊಮ್ಮಘಟ್ಟದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸನ್ಮಾನಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ —ಪ್ರಜಾವಾಣಿ ಚಿತ್ರ

₹ 15,767 ಕೋಟಿ ವೆಚ್ಚದ ಬೆಂಗಳೂರು ಉಪನಗರ ರೈಲು ಯೋಜನೆಗೆ (ಬಿಎಸ್‌ಆರ್‌ಪಿ) ಶಂಕುಸ್ಥಾಪನೆ ನೆರವೇರಿಸಿದ ಪ್ರಧಾನಿ, ‘40 ವರ್ಷಗಳಿಂದ ಚರ್ಚೆಯಲ್ಲೇ ಇದ್ದ ಈ ಯೋಜನೆಗೆ ನಮ್ಮ ಸರ್ಕಾರ ಚಾಲನೆ ನೀಡಿದೆ. 40 ತಿಂಗಳಲ್ಲೇ ಕಾಮಗಾರಿಯನ್ನು ಪೂರ್ಣಗೊಳಿಸಿ, ಇಲ್ಲಿನ ಜನರ ಬಹುದಿನದ ಕನಸನ್ನು ಸಾಕಾರಗೊಳಿಸುತ್ತೇವೆ’ ಎಂದು ಘೋಷಿಸಿದರು.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 3, 6

> **ಇಂದು ಚಾಲನೆ ಪಡೆದ ಯೋಜನೆಗಳೂ ರಾಜ್ಯದ ಹಲವು ಜಿಲ್ಲೆಗಳ ರೈತರು, ಉದ್ಯಮಿಗಳು, ಕಾರ್ಮಿಕರು, ಮಧ್ಯಮವರ್ಗದ ಜನರು ಮತ್ತು ಯುವಜನರಿಗೆ ವರದಾನವಾಗಲಿವೆ**
> **ನರೇಂದ್ರ ಮೋದಿ,** ಪ್ರಧಾನಿ

ಮೋದಿಯಂಥ ಮುತ್ಸದ್ದಿ ಕಂಡಿಲ್ಲ: ಬೊಮ್ಮಾಯಿ

ಬೆಂಗಳೂರು: ‘ದೇಶದ ಸಮಗ್ರ ಅಭಿವೃದ್ಧಿಯ ದೂರದೃಷ್ಟಿ ಹೊಂದಿರುವ ಪ್ರಧಾನಿ ನರೇಂದ್ರ ಮೋದಿ ಅವರಂಥಹ ಮತ್ತೊಬ್ಬ ಮುತ್ಸದ್ದಿಯನ್ನು ನನ್ನ ಜೀವನದಲ್ಲಿ ಕಂಡಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಕೊಮ್ಮಘಟ್ಟದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಒಬ್ಬ ರಾಜಕಾರಣಿಯ ಕಣ್ಣು ಮುಂದಿನ ಚುನಾವಣೆಯ ಮೇಲಿರುತ್ತದೆ. ಒಬ್ಬ ಮುತ್ಸದ್ದಿಯ ಕಣ್ಣು ಮುಂದಿನ ತಲೆಮಾರಿನ ಮೇಲಿರುತ್ತದೆ. ಮೋದಿ ಎರಡನೇ ಸಾಲಿಗೆ ಸೇರಿದ ನಾಯಕ’ ಎಂದರು.

6ನೇ ಪುಟ ನೋಡಿ

ಭೂಸೇನೆ ಅಧಿಸೂಚನೆ

‘ಅಗ್ನಿಪಥ’ ಅಡಿಯಲ್ಲಿ ಅಲ್ಪಾವಧಿ ಕರ್ತವ್ಯಕ್ಕೆ ನೇಮಕಾತಿ

ನವದೆಹಲಿ (ಪಿಟಿಐ): ರಕ್ಷಣಾ ಪಡೆಗಳಲ್ಲಿ ಅಲ್ಪಾವಧಿ ಕರ್ತವ್ಯದ ನೇಮಕಾತಿ ಯೋಜನೆ ‘ಅಗ್ನಿಪಥ’ ಅಡಿಯಲ್ಲಿ ನೇಮಕಕ್ಕಾಗಿ ಭೂಸೇನೆಯು ಸೋಮವಾರ ಅಧಿಸೂಚನೆ ಹೊರಡಿಸಿದೆ. ಅಭ್ಯರ್ಥಿಗಳ ಆನ್‌ಲೈನ್ ನೋಂದಣಿಯು ಜುಲೈಯಲ್ಲಿ ಆರಂಭವಾಗಲಿದೆ. ಆನ್‌ಲೈನ್ ನೋಂದಣಿಯನ್ನು ಕಡ್ಡಾಯ ಮಾಡಲಾಗಿದೆ.

ಅಗ್ನಿಪಥ ಯೋಜನೆ ಅಡಿಯಲ್ಲಿ ನೇಮಕಗೊಳ್ಳುವ ಅಗ್ನಿವೀರರಿಗೆ ಭೂಸೇನೆಯಲ್ಲಿ ಭಿನ್ನವಾದ ಶ್ರೇಣಿ ನೀಡಲಾಗುವುದು. ಈಗ ಇರುವ ಯಾವುದೇ ಶ್ರೇಣಿ ಅವರಿಗೆ ಅನ್ವಯ ಆಗುವುದಿಲ್ಲ.

ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆ ಬರೆಯಬೇಕಾಗುತ್ತದೆ. ಸೇನೆಯಲ್ಲಿ ಇರುವವರ ಮಕ್ಕಳು, ಮಾಜಿ ಸೈನಿಕರ ಮಕ್ಕಳು, ಯುದ್ಧದಲ್ಲಿ ಗಂಡನನ್ನು ಕಳೆದುಕೊಂಡ ವಿಧವೆಯರ ಮಕ್ಕಳು, ಮಾಜಿ ಸೈನಿಕರ ವಿಧವೆಯರ ಮಕ್ಕಳಿಗೆ ಈ ಪರೀಕ್ಷೆಯಲ್ಲಿ 20 ಕೃಪಾಂಕ ನೀಡಲಾಗುವುದು. ಹಾಗೆಯೇ ಎನ್‌ಸಿಸಿಯ ‘ಎ’ ಮತ್ತು ‘ಬಿ’ ಪ್ರಮಾಣಪತ್ರ ಹೊಂದಿರುವವರಿಗೂ ಕೃಪಾಂಕ ದೊರೆಯಲಿದೆ.

ಅತ್ಯಂತ ಅಸಾಧಾರಣ ಪ್ರಕರಣಗಳಲ್ಲಿ ಮಾತ್ರ ಸಂಬಂಧಪಟ್ಟ ಪ್ರಾಧಿಕಾರದ ಅನುಮತಿಯೊಂದಿಗೆ ಸೇನೆಯನ್ನು ಅಗ್ನಿವೀರರು ಬಿಟ್ಟು ಹೋಗಲು ಅವಕಾಶ ಇದೆ.

ನಾಲ್ಕು ವರ್ಷಗಳ ಅವಧಿ ಪೂರ್ಣಗೊಂಡ ಬಳಿಕ ತಮ್ಮನ್ನು ಸೇನೆಗೆ ಸೇರಿಸಿಕೊಳ್ಳಲೇಬೇಕು ಎಂಬ ಬೇಡಿಕೆ ಮುಂದಿರಿಸುವ ಹಕ್ಕು ಅಗ್ನಿವೀರರಿಗೆ ಇಲ್ಲ. 18 ವರ್ಷದೊಳಗಿನ ಅಭ್ಯರ್ಥಿಗಳ ಅರ್ಜಿಗೆ ಹೆತ್ತವರು ಅಥವಾ ಪೋಷಕರ ಸಹಿ ಕಡ್ಡಾಯ ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

ಇನ್ನಷ್ಟು ಸುದ್ದಿಗಳು 10

ಕಿಸಾನ್ ಮೋರ್ಚಾ ಪ್ರತಿಭಟನೆ 24ರಂದು

ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ಭಾರಿ ಪ್ರತಿಭಟನೆ ಸಂಘಟಿಸಿದ್ದ ಸಂಯುಕ್ತ ಕಿಸಾನ್ ಮೋರ್ಚಾವು (ಎಸ್‌ಕೆಎಂ) ಅಗ್ನಿಪಥ ಯೋಜನೆಯ ವಿರುದ್ಧ ಇದೇ 24ರಂದು ಪ್ರತಿಭಟನೆ ನಡೆಸಲಿದೆ. ಶುಕ್ರವಾರ ನಡೆಯಲಿರುವ ಪ್ರತಿಭಟನೆಯಲ್ಲಿ ಯುವಜನರು, ರಾಜಕೀಯ ಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಭಾಗಿಯಾಗಬೇಕು ಎಂದು ಕೋರಲಾಗಿದೆ. ಪ್ರತಿಭಟನೆಯು ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ನಡೆಯಲಿದೆ. ಅಗ್ನಿಪಥ ಯೋಜನೆಯ ವಿರುದ್ಧ ಇದೇ 30ರಂದು ಪ್ರತಿಭಟನೆ ನಡೆಸಲು ಭಾರತೀಯ ಕಿಸಾನ್ ಯೂನಿಯನ್ ನಿರ್ಧರಿಸಿತ್ತು. ಆ ಪ್ರತಿಭಟನೆ ಕೂಡ 24ರಂದೇ ನಡೆಯಲಿದೆ.

600ಕ್ಕೂ ಹೆಚ್ಚು ರೈಲು ರದ್ದು

‘ಅಗ್ನಿಪಥ’ ವಿರುದ್ಧದ ಪ್ರತಿಭಟನೆ ಕಾರಣದಿಂದ 612 ರೈಲುಗಳ ಸಂಚಾರವನ್ನು ರೈಲ್ವೆ ಇಲಾಖೆಯು ಸೋಮವಾರ ರದ್ದುಪಡಿಸಿದೆ. ಅದರಲ್ಲಿ 223 ಎಕ್ಸ್‌ಪ್ರೆಸ್ ರೈಲುಗಳು ಮತ್ತು 379 ಪ್ಯಾಸೆಂಜರ್ ರೈಲುಗಳು ಸೇರಿವೆ.

ನಾಲ್ಕು ಎಕ್ಸ್‌ಪ್ರೆಸ್ ರೈಲುಗಳನ್ನು ಭಾಗಶಃ ರದ್ದುಪಡಿಸಲಾಗಿದೆ. ಬಿಹಾರ, ಜಾರ್ಖಂಡ್, ಉತ್ತರ ಪ್ರದೇಶ ಮತ್ತು ಹರಿಯಾಣದಲ್ಲಿ ಪ್ರತಿಭಟನೆ ಆರಂಭಗೊಂಡ ಬಳಿಕ ಅಂದರೆ, ಇದೇ 15ರಿಂದಲೇ ರೈಲು ಸಂಚಾರ ವ್ಯತ್ಯಯವಾಗಿದೆ.

ಕಳೆದ ನಾಲ್ಕು ದಿನಗಳಿಗೆ ಹೋಲಿಸಿದರೆ ಸೋಮವಾರ ಪ್ರತಿಭಟನೆಯ ಬಿರುಸು ಅಲ್ಪ ಕಡಿಮೆಯಾಗಿತ್ತು. ಆದರೆ, ಮುನ್ನೆಚ್ಚರಿಕೆ ಕ್ರಮವಾಗಿ ರೈಲುಗಳ ಸಂಚಾರ ರದ್ದುಪಡಿಸಲಾಗಿತ್ತು.

ಚುನಾವಣೆ ತಾಲೀಮಿಗೆ ಮೋದಿ ಮುನ್ನುಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನೂ ಸುಮಾರು 10 ತಿಂಗಳು ಬಾಕಿ ಇರುವಂತೆಯೇ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಬೆಂಗಳೂರು– ಮೈಸೂರಿನ ಎರಡು ದಿನಗಳ ಭೇಟಿಯ ಮೂಲಕ ಪಕ್ಷದ ಕಾರ್ಯಕರ್ತರನ್ನು ಚುನಾವಣೆಗೆ ಸಜ್ಜುಗೊಳಿಸುವ ಮತ್ತು ಮತದಾರರ ಮನಸ್ಸಿಗೆ ಲಗ್ಗೆ ಇಡುವತ್ತ ಹೆಜ್ಜೆ ಇಟ್ಟಿದ್ದಾರೆ.

ಎರಡೂ ನಗರಗಳಲ್ಲಿ ನಡೆದ ಸರ್ಕಾರಿ ಕಾರ್ಯಕ್ರಮಗಳಲ್ಲಿ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಮತದಾರರಿಗೆ ಬಿಜೆಪಿ ಪರವಾಗಿ ಪರೋಕ್ಷ ಸಂದೇಶಗಳನ್ನು ನೀಡಿದರು. ‘40 ವರ್ಷಗಳಲ್ಲಿ ಮಾತಿನಲ್ಲೇ ಉಳಿದಿದ್ದ ಕೆಲಸಗಳನ್ನು 40 ತಿಂಗಳಲ್ಲಿ ಬಿಜೆಪಿ ಸರ್ಕಾರ ಮಾಡಿ ತೋರಿಸಲಿದೆ’ ಎಂದು ಜನರಿಗೆ ಭರವಸೆ ನೀಡಿದರು. ಡಬಲ್ ಎಂಜಿನ್ ಸರ್ಕಾರ ಕರ್ನಾಟಕದ ಅಭಿವೃದ್ಧಿಗೆ ಹೆಗಲು ಕೊಡಲಿದೆ ಎಂದೂ ಪ್ರತಿಪಾದಿಸಿದರು.

6ನೇ ಪುಟ ನೋಡಿ

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



18 ವರ್ಷ ಮೇಲ್ಪಟ್ಟವರಿಗೆ ಕೊವೊವ್ಯಾಕ್ಸ್ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿ

ಕೇಂದ್ರ, ರಾಜ್ಯಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ರಾಜ್ಯದಲ್ಲಿ 18 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಕೊವೊವ್ಯಾಕ್ಸ್ ನೀಡಲು ಆದೇಶಿಸಬೇಕು' ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತು ಅರುಣ್ ಕುಮಾರ್ ಅಗರ್‌ವಾಲ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ. ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳಿಗೆ ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿದೆ.

ಕೇಂದ್ರ ಔಷಧ ಮಾನದಂಡ ನಿಯಂತ್ರಣ ಸಂಸ್ಥೆ (ಸಿಡಿಎಸ್‌ಸಿಒ) ಮತ್ತು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ತುರ್ತು ಪರಿಸ್ಥಿತಿಯಲ್ಲಿ ನಿರ್ಬಂಧಿತ ಬಳಕೆಯಂತೆ ವಯಸ್ಕರಿಗೆ ಮತ್ತು ಮಕ್ಕಳಿಗೆ ಕೊವೊವ್ಯಾಕ್ ಲಸಿಕೆ ಬಳಸಲು ಕೇಂದ್ರ ಸರ್ಕಾರವು 2021ರ ಮಾರ್ಚ್ 8ರಂದು ಮತ್ತು 2021ರ ಡಿಸೆಂಬರ್ 27ರಂದು ಅನುಮತಿ ನೀಡಿದೆ.

ನೂಪುರ್ ಶರ್ಮ ವಿರುದ್ಧ ಕ್ರಮ ಕೋರಿ ಹೈಕೋರ್ಟ್ ಅರ್ಜಿ

ಬೆಂಗಳೂರು: 'ಪ್ರವಾದಿ ಮೊಹಮ್ಮದ್ ವಿರುದ್ಧ ಅವಹೇಳನಕಾರಿ ಮಾತುಗಳನ್ನಾಡಿದ್ದಾರೆ ಎಂಬ ಆರೋಪದಡಿ ಬಿಜೆಪಿ ರಾಷ್ಟ್ರೀಯ ವಕ್ತಾರೆ ನೂಪುರ್ ಶರ್ಮಾ ವಿರುದ್ಧ ಕಾನೂನು ಕ್ರಮ ಜರುಗಿಸಲು ಸರ್ಕಾರ ಮತ್ತು ಪೊಲೀಸರಿಗೆ ನಿರ್ದೇಶಿಸಬೇಕು' ಎಂದು ಕೋರಿ ಹೈಕೋರ್ಟ್‌ಗೆ ಅರ್ಜಿ ದಾಖಲಿಸಲಾಗಿದೆ.

ಈ ಸಂಬಂಧ ಅಕೋಶ ನಗರದ ನಿವಾಸಿ ಕೆ.ಕೆ. ಶರೀಫುದ್ದೀನ್ ರಿಟ್ ಅರ್ಜಿಯೊಂದನ್ನು ಸಲ್ಲಿಸಿದ್ದಾರೆ.

ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದ್ದು, ರಾಜ್ಯ ಗೃಹ ಇಲಾಖೆ ಕಾರ್ಯದರ್ಶಿ, ನಗರ ಪೊಲೀಸ್ ಆಯುಕ್ತರು ಮತ್ತು ಅಶೋಕ ನಗರ ಠಾಣಾ ಇನ್‌ಸ್ಪೆಕ್ಟರ್ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಸಾಹಿತ್ಯ ಅಕಾಡೆಮಿ 2013ರ ಲಲಿತ ಪ್ರಬಂಧ ಪ್ರಶಸ್ತಿ ರದ್ದು

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯ 2013ನೇ ಸಾಲಿನ ಲಲಿತ ಪ್ರಬಂಧ ಪ್ರಶಸ್ತಿಗೆ ಹುಬ್ಬಳ್ಳಿಯ ಎಂ.ಡಿ. ಗೋಗೇರಿ ವಿರಚಿತ 'ಮಹಾಮಾತೆ ಮಲ್ಲಮ್ಮ ಮತ್ತು ಇತರೆ ಪ್ರಬಂಧಗಳು' ಪುಸ್ತಕವನ್ನು ಆಯ್ಕೆ ಮಾಡಿರುವುದನ್ನು ಹೈಕೋರ್ಟ್ ರದ್ದುಪಡಿಸಿದೆ.

'ಗೋಗೇರಿ ಅವರ ಪುಸ್ತಕವನ್ನು ಪ್ರಶಸ್ತಿಗೆ ಆಯ್ಕೆ ಮಾಡುವಾಗ ಸಮಿತಿಯು ನಿಯಮ ಪಾಲನೆ ಮಾಡಿಲ್ಲ' ಎಂದು ಆಕ್ಷೇಪಿಸಿ ಕೊಡಗಿನ ಭಾರದ್ವಾಜ ಅವರು ರಿಟ್ ಅರ್ಜಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅಕಾಡೆಮಿಯು 2013ನೇ ಸಾಲಿನ ಲಲಿತ ಪ್ರಬಂಧ ಪ್ರಕಾರದ ಪ್ರಶಸ್ತಿಗೆ ಹೊಸದಾಗಿ ಪುಸ್ತಕ ಆಯ್ಕೆ ಮಾಡಬೇಕು. ಅದಕ್ಕಾಗಿ ಅಕಾಡೆಮಿಯ ಬೈ-ಲಾ 93 (ಉ) 12ನೇ ಷರತ್ತಿನ ಅನ್ವಯ ಉಪ ಸಮಿತಿಯನ್ನು ಪುನರ್ ರಚಿಸಬೇಕು. ಉಪ ಸಮಿತಿ ಭಾರದ್ವಾಜ ಮತ್ತು ಗೋಗೇರಿ ಅವರ ಪುಸ್ತಕಗಳನ್ನು ಮೌಲ್ಯಮಾಪನ ಮಾಡಿ ಪ್ರಶಸ್ತಿಗೆ ಶಿಫಾರಸು ಮಾಡಬಹುದು. ಈ ಪ್ರಕ್ರಿಯೆಯನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಬೇಕು' ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣವೇನು?: ಅಕಾಡೆಮಿಯು 2013ನೇ ಸಾಲಿನಲ್ಲಿ ಲಲಿತ ಪ್ರಬಂಧ ಪ್ರಕಾರದ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿತ್ತು. ಸಾಹಿತಿ ಭಾರದ್ವಾಜ ಅವರ 'ಕೌತುಕವಲ್ಲದ ಕ್ಷಣಗಳು' ಮತ್ತು ಗೋಗೇರಿ ಅವರ 'ಮಹಾಮಾತೆ ಮಲ್ಲಮ್ಮ ಮತ್ತು ಇತರೆ ಪ್ರಬಂಧಗಳು' ಸ್ಪರ್ಧೆಯಲ್ಲಿದ್ದವು.

ಎರಡೂ ಪುಸ್ತಕಗಳಿಗೆ ತಲಾ 57 ಅಂಕಗಳು ಬಂದಿದ್ದವು. ಅದರನ್ವಯ ಪುಸ್ತಕಗಳನ್ನು ಅಕಾಡೆಮಿ ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರನ್ನು ಒಳಗೊಂಡ ಉಪ ಸಮಿತಿಗೆ ಪುಸ್ತಕ ಕಳುಹಿಸಿಕೊಡಲಾಗಿತ್ತು. ಉಪ ಸಮಿತಿಯು ಮೌಲ್ಯಮಾಪನ ಮಾಡಿ ಗೋಗೇರಿ ಅವರ 'ಮಲ್ಲಮ್ಮ ಮತ್ತು ಇತರೆ ಪ್ರಬಂಧಗಳು' ಪುಸ್ತಕವನ್ನು ಆಯ್ಕೆ ಮಾಡಿತ್ತು.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಗಳು: ಉದ್ಘಾಟನೆ: ವಿ.ಸೋಮಣ್ಣ, ಉಪಸ್ಥಿತಿ: ಪ್ರಿಯಾಂಕಾ ಉಪೇಂದ್ರ, ಶೈಲಜಾ.ವಿ.ಸೋಮಣ್ಣ, ಡಾ.ಭಾಗೀರಥಿ ಕನ್ನಡತಿ, ಆಯೋಜಕರು: ವಿ.ಸೋಮಣ್ಣ ಪ್ರತಿಷ್ಠಾನ, ಸ್ಥಳ: ಬಾಲಗಂಗಾಧರನಾಥ ಸ್ವಾಮೀಜಿ ಆಟದ ಮೈದಾನ(ಬಿ.ಜಿ.ಎಸ್. ಗ್ರೌಂಡ್), ಎ.ಸಿ. ಬಡಾವಣೆ, ವಿಜಯನಗರ, ಬೆಳಿಗ್ಗೆ: 6

ಉಪಸ್ಥಿತಿ: ವಿನಯ ಕುಮಾರ್ ಕತ್ಯಾಲ್, ಆಯೋಜಕರು: ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಸ್ಥಳ: ಫ್ಯಾಕ್ಟರಿಯ ಮುಖ್ಯ ಪ್ರವೇಶ ದ್ವಾರ(ಬಿಇಎಲ್), ಜಾಲಹಳ್ಳಿ, ಬೆಳಿಗ್ಗೆ: 6

ಪ್ರಾರ್ಥನೆ: ಸಂಗೀತಾ ಕಟ್ಟಿ, ಉಪಸ್ಥಿತಿ: ವಿ.ಚೈತ್ರ, ಅತಿಥಿಗಳು: ಡಾ.ವಿ. ರಾಮ್‌ಪ್ರಸಾದ್ ಮನೋಹರ, ಡಾ.ಎನ್.ರಮೇಶ್‌ರಾವ್, ಡಾ.ಬಿ. ಎನ್.ಬ್ರಹ್ಮಾಚಾರ್ಯ, ಬಿ.ಸಿ. ಭಾಗ್ಯ, ಆಯೋಜಕರು: ಆರೋಗ್ಯ ಮಂದಿರ, ಸ್ಥಳ: ಆರೋಗ್ಯ ಮಂದಿರ ಟ್ರಸ್ಟ್, ಇಸ್ಕಾನ್ ಸಮೀಪ, ರಾಜಾಜಿನಗರ, ಬೆಳಿಗ್ಗೆ: 6

ಅತಿಥಿಗಳು: ಡಿ.ವಿ. ಸದಾನಂದಗೌಡ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಎಚ್. ಮಂಜುನಾಥ, ಡಾ. ಆಡ್ರಿಯನ್, ಮಲ್ಲಪ್ಪ. ಎಸ್. ಸುಲದಾಳ, ಸುಮಂಗಲಾ ಕೇಶವ್, ಸುಭಾಷ್.ಎಸ್, ರಂಗನಾಥ ಪಟಮಕ್ಕಿ, ಆಯೋಜಕರು: ಸರಳ ಯೋಗ ವೇದಿಕೆ, ಸ್ಯಾಂಕಿ ಉದ್ಯಾನವನ ನಡಿಗೆಗಾರರ ಸಂಘ, ಸ್ಥಳ: ಆರೋಗ್ಯಧಾಮ ಸ್ಯಾಂಕಿ ಪಾರ್ಕ್, ಮಲ್ಲೇಶ್ವರಂ, ಬೆಳಿಗ್ಗೆ: 6

ಅಧ್ಯಕ್ಷತೆ: ಶ್ರೀನಿವಾಸ.ಟಿ, ಪ್ರಮೋದ.ಆರ್. ಹೆಗ್ಡೆ, ಆಯೋಜಕರು: ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಮತ್ತು ಆಯುಷ್ ಇಲಾಖೆ, ಸ್ಥಳ: ಅರಮನೆ ಮೈದಾನ, ಬೆಳಿಗ್ಗೆ: 6.15



ಡಾ.ಸಿ.ಎನ್ ಮಂಜುನಾಥ್

ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಎನ್.ತಿಪ್ಪೇಸ್ವಾಮಿ, ನಾ.ದಿನೇಶ್ ಹೆಗ್ಡೆ, ಆಯೋಜಕರು: ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಸ್ಥಳ: ಶಾಲಿನಿ ಮೈದಾನ, ಜಯನಗರ, ಬೆಳಿಗ್ಗೆ: 6.15

ಉದ್ಘಾಟನೆ: ಋತುರಾಜ್ ಅವಸ್ಥಿ, ಅಧ್ಯಕ್ಷತೆ: ವೀರಪ್ಪ, ಉಪಸ್ಥಿತಿ: ಆಲೋಕ್ ಅರಾಧೆ, ನರೇಂದರ್, ಪಿ.ಎಸ್. ದಿನೇಶ್ ಕುಮಾರ್, ಯೋಗಗುರು ಪ್ರಸಾದ್, ಟಿ.ಜಿ.ಶಿವಶಂಕರೇ ಗೌಡ, ವಿವೇಕ್ ಸುಬ್ಬಾರೆಡ್ಡಿ, ಟಿ.ಜಿ. ರವಿ, ಹರೀಶ್.ಎಂ.ಟಿ, ಆಯೋಜಕರು: ಪರಿವರ್ತನಾ ಫೌಂಡೇಶನ್, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ವಕೀಲರ ಸಂಘ, ಸ್ಥಳ: ಸೆಂಟ್ರಲ್ ಪೋರ್ಟಿಕೋ ಹತ್ತಿರ, ಹೈಕೋರ್ಟ್, ಬೆಳಿಗ್ಗೆ: 6.45

ಉಪಸ್ಥಿತಿ: ಕೆ.ಜಿ. ಶಾಂತಿ, ಲೀನಾ ದಯಾನಂದ್, ವಿವೇಕ್ ಸುಬ್ಬಾರೆಡ್ಡಿ, ಟಿ.ಜಿ. ರವಿ, ಹರೀಶ.ಎಂ.ಟಿ, ಆಯೋಜಕರು: ನಗರ ಸಿವಿಲ್ ನ್ಯಾಯಾಲಯ, ಸ್ಥಳ: ಮೆಯೋಹಾಲ್ ಘಟಕದ ನ್ಯಾಯಾಲಯದಲ್ಲಿ, ಬೆಳಿಗ್ಗೆ: 6.45

ಉದ್ಘಾಟನೆ: ಪಲ್ಲವಿ ಬದ್ರಿನಾಥ, ಉಪಸ್ಥಿತಿ: ಹಯಗ್ರೀವಾಚಾರ್, ಜಯಾ. ಜೆ, ಆಯೋಜಕರು: ದಕ್ಷಿಣ ಮಧ್ಯ ವಲಯ ಸಾಂಸ್ಕೃತಿಕ ಕೇಂದ್ರ, ನಾಗಪುರ, ಕೇಂದ್ರ ಸಾಂಸ್ಕೃತಿಕ ಸಚಿವಾಲಯ ಮತ್ತು ಕಲಾ ಸಂಪದ, ಸ್ಥಳ: ಜ್ಞಾನಕಾಶಿ ವಿದ್ಯಾನಿಕೇತನ, ರಾಜರಾಜೇಶ್ವರಿ ನಗರ, ಬೆಳಿಗ್ಗೆ: 8

ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಧ್ಯಾನ ಚಿನ್ನಪ್ಪ, ಡಾ.ಪ್ರಸಾದ್ ಶಂಕರ, ಡಾ.ಲತಾ ಸತೀಶ್, ಆಯೋಜಕರು: ಡಾ.ಸಿ.ಎನ್. ಅಶ್ವತ್ಥನಾರಾಯಣ ಫೌಂಡೇಶನ್, ಶ್ರೀಕೃಷ್ಣ ವೆಲ್‌ನೆಸ್ ಯೋಗಾ ಆ್ಯಂಡ್ ಕಲ್ಚರಲ್ ಸೆಂಟರ್, ಸ್ಥಳ: ಮಲ್ಲೇಶ್ವರಂ ಮೈದಾನ, ಬೆಳಿಗ್ಗೆ: 8

ಉದ್ಘಾಟನೆ: ಪ್ರೊ.ಸಿಂಥಿಯಾ ಮಿನೇಜಸ್, ಅತಿಥಿಗಳು: ಎಂ.ಕೊಟ್ರೇಶ್, ಪ್ರಕಾಶ್ ಯೋಗಿ ಗುರೂಜಿ, ಕೆ.ರಾಮಕೃಷ್ಣಯ್ಯ, ಅಧ್ಯಕ್ಷತೆ: ಎಸ್.ಎನ್.ಸುಶೀಲ, ಆಯೋಜಕರು: ಬೆಂಗಳೂರು ವಿಶ್ವವಿದ್ಯಾಲಯ ಯೋಗ ಕೇಂದ್ರ, ಸ್ಥಳ: ಕಲಾಭವನ, ಪ್ರದರ್ಶನ ಕಲಾ ವಿಭಾಗ, ಬಯಲು ರಂಗಮಂದಿರ, ಬೆಳಿಗ್ಗೆ: 7

ಯಕ್ಷಗಾನ ತಾಳಮದ್ದಳೆ ಪರ್ವ: ವಿಷ್ಣುಲೀಲೆ: ಮುಮ್ಮೇಳ: ರವಿಚಂದ್ರ ಕನ್ನಡಿಕಟ್ಟೆ, ಶ್ರೀಶ ರಾವ್ ನಿಡ್ಲೆ, ಅಕ್ಷಯ ರಾವ್ ವಿಟ್ಲ, ಹಿಮ್ಮೇಳ: ಉಜಿರೆ ಅಶೋಕ ಭಟ್, ಹರೀಶ ಬಳಂತಿಮೊಗರು, ಶೇಣಿ ವೇಣುಗೋಪಾಲ ಭಟ್, ಸುಧನ್ವಾ ದೇರಾಜೆ, ಅವಿನಾಶ ಶೆಟ್ಟಿ ಉಬರಡ್ಕ, ಆಯೋಜಕರು: ಕುರಿಯ ವಿಠಲ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ, ಸಂಜೆ: 4.45

ಕರ್ನಾಟಕ ವಿಧಾನಸಭೆಯಿಂದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಉಪನ್ಯಾಸ ಕಾರ್ಯಕ್ರಮ: ಉದ್ಘಾಟನೆ: ವಿಶ್ವೇಶ್ವರ ಹೆಗಡೆ ಕಾಗೇರಿ, ಸ್ಥಳ: ಸಮ್ಮೇಳನ ಸಭಾಂಗಣ, 3ನೇ ಮಹಡಿ, ವಿಧಾನಸೌಧ, ಮಧ್ಯಾಹ್ನ: 12

ಸಂಗೀತ ಭೂಷಣ: ಗಾಯನ: ಸಂಪಗೋಡು ವಿ. ವಿಷ್ಣುರಾಜ, ಪಿಟೀಲು: ನಳಿನಾ ಮೋಹನ, ಮೃದಂಗ: ನಿಕ್ಷಿತ್ ಪುತ್ತೂರ್, ಖಂಜೀರಾ: ಸಿ.ಪಿ. ವ್ಯಾಸ ವಿಠಲ, ಆಯೋಜಕರು: ಎಂ.ಎ.ನರಸಿಂಹಾಚಾರ್ ಮ್ಯೂಸಿಕ್ ಫೌಂಡೇಷನ್, ಸ್ಥಳ: ದಿ ಬೆಂಗಳೂರು ಗಾಯನ ಸಮಾಜ ಸಭಾಂಗಣ, ಕೆ.ಆರ್. ರಸ್ತೆ, ಸಂಜೆ: 5.30

ಭಜನೆ-ಪ್ರವಚನ-ಹರಿನಾಮ ಸಂಕೀರ್ತನೆ: ಭಜನೆ: ಸುಧಾ ಮಹಿಳಾ ವೃಂದ, ಧಾರ್ಮಿಕ ಪ್ರವಚನ: ವಾದಿರಾಜಾಚಾರ್ ಅಗ್ನಿಹೋತ್ರಿ, ಆಯೋಜಕರು: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂ ಧರ್ಮ ಪ್ರಚಾರ ಪರಿಷತ್ ಮತ್ತು ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸೇವಾ ಸಮಿತಿ, 13ನೇ ಮುಖ್ಯ ರಸ್ತೆ, ಜಯನಗರ, 4ನೇ ಟಿ ಬ್ಲಾಕ್, ಸಂಜೆ: 6

ವಸತಿನಿಲಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಮಡಿವಾಳ ಮಾಚಿದೇವ ಟ್ರಸ್ಟ್‌ನ 2022–23ನೇ ಸಾಲಿನ ಶೈಕ್ಷಣಿಕ ಸಾಲಿನ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಅರ್ಜಿ ಆಹ್ವಾನಿಸಿದೆ. ಟ್ರಸ್ಟ್ ಆಶ್ರಯದಲ್ಲಿ ಪಿಯುಸಿ, ಪದವಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಭೋಜನ ಸಹಿತ ವಸತಿ ಕಲ್ಪಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. 9900944456, 9480404856ಗೆ ಸಂಪರ್ಕಿಸಬಹುದು.

'ಯುಪಿಎಸ್‌ಸಿ ಪರೀಕ್ಷೆ ಕನ್ನಡದಲ್ಲಿ ನಡೆಸಿ'

ಪ್ರಜಾವಾಣಿ ವಾರ್ತೆ



ರಕ್ಷಾ ರಾಮಯ್ಯ

ಬೆಂಗಳೂರು: 'ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಪೂರ್ವಭಾವಿ ಪರೀಕ್ಷೆಯನ್ನು ಕನ್ನಡದಲ್ಲಿ ನಡೆಸುವ ಮೂಲಕ ಯುವ ಜನಾಂಗ ಉದ್ಯೋಗ ಪಡೆಯಲು ಪ್ರಧಾನಿ ನರೇಂದ್ರ ಮೋದಿ ಸೂಕ್ತ ರೀತಿಯಲ್ಲಿ ಸ್ಪಂದಿಸಬೇಕು' ಎಂದು ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಂ.ಎಸ್. ರಕ್ಷಾ ರಾಮಯ್ಯ ಅವರು ಆಗ್ರಹಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಅಗ್ನಿಪಥ ಯೋಜನೆಗೆ ದೇಶದಾದ್ಯಂತ ಯುವ ಸಮೂಹ ಆಕ್ರೋಶಗೊಂಡಿದ್ದು, ಉದ್ಯೋಗದ ಭರವಸೆಗಳನ್ನು ಈಡೇರಿಸಿಕೊಳ್ಳಲು ಕೇಂದ್ರ ಸರ್ಕಾರ ಸ್ಪಂದಿಸಬೇಕಾಗಿದೆ. ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆಯನ್ನು ಸ್ಥಳೀಯ ಭಾಷೆಯಲ್ಲಿ ಬರೆಯಲು ಅವಕಾಶ ನೀಡಬೇಕು. ಹಿಂದಿ ಹೇರಿಕೆ ಬಗ್ಗೆ ಕನ್ನಡಿಗರು ಎತ್ತಿರುವ ಪ್ರಶ್ನೆ ವಿಷಯದಲ್ಲಿ ಪ್ರಧಾನಿ ಮೋದಿ ಅವರು ಮೌನ ವಹಿಸಿದ್ದರೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹಿಂದಿ ಪರ ಮಾತನಾಡುತ್ತಿದ್ದಾರೆ. ಹೀಗಾಗಿ, ಗೊಂದಲದಲ್ಲಿರುವ ಕನ್ನಡಿಗರ ಪ್ರಶ್ನೆಗೆ ಸೂಕ್ತ ರೀತಿಯಲ್ಲಿ ಸ್ಪಂದಿಸಬೇಕು' ಎಂದು ಒತ್ತಾಯಿಸಿದ್ದಾರೆ.

ರಾಜ್ಯದ ಜನರಿಗೆ ಪ್ರಧಾನಿ ನರೇಂದ್ರ ಮೋದಿ ಭರವಸೆ • ಸಂಚಾರ ದಟ್ಟಣೆ ನಿವಾರಣೆ ವಿಶ್ವಾಸ

ಉಪನಗರ ರೈಲು 40 ತಿಂಗಳಲ್ಲೇ ಸಾಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: '40 ವರ್ಷಗಳಿಂದ ಚರ್ಚೆಯಲ್ಲೇ ಉಳಿದಿದ್ದ ಬೆಂಗಳೂರು ಉಪನಗರ ರೈಲು ಯೋಜನೆಯನ್ನು ನಮ್ಮ 'ಡಬ್ಬಲ್ ಎಂಜಿನ್' ಸರ್ಕಾರಗಳು 40 ತಿಂಗಳಲ್ಲೇ ಪೂರ್ಣಗೊಳಿಸಿ, ಇಲ್ಲಿನ ಜನರ ಕನಸನ್ನು ಸಾಕಾರಗೊಳಿಸಲಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ವಾಗ್ದಾನ ನೀಡಿದರು.

ನಗರದ ಕೊಮ್ಮಘಟ್ಟದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ₹15,767 ಕೋಟಿ ವೆಚ್ಚದಲ್ಲಿ 148 ಕಿ.ಮೀ. ಉದ್ದದ ಮಾರ್ಗದಲ್ಲಿ ಬೆಂಗಳೂರು ನಗರ, ಸುತ್ತಲಿನ ಉಪನಗರಗಳು ಮತ್ತು ಸಮೀಪದ ಪಟ್ಟಣಗಳಿಗೆ ಸ್ಥಳೀಯ ರೈಲು ಸಾರಿಗೆ ಸೌಲಭ್ಯ ಕಲ್ಪಿಸುವ 'ಬೆಂಗಳೂರು ಉಪನಗರ ರೈಲು ಯೋಜನೆ' ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

'ಸಂಚಾರ ದಟ್ಟಣೆ ತಗ್ಗಿಸುವುದು, ಪ್ರಯಾಣದ ಸಮಯ ಉಳಿತಾಯಕ್ಕೆ ಕಾರಣವಾಗುವ ಬೆಂಗಳೂರು ಉಪನಗರ ರೈಲು ಯೋಜನೆ ಕುರಿತು 40 ವರ್ಷಗಳ ಹಿಂದೆ ಚರ್ಚೆ ಆರಂಭವಾಗಿತ್ತು. 16 ವರ್ಷಗಳಿಂದ ಈ ಯೋಜನೆ ಕಡತದಲ್ಲೇ ಓಡಾಡಿದೆ, ಒದ್ದಾಡಿದೆ. ಈಗ ನಮ್ಮ 'ಡಬ್ಬಲ್ ಎಂಜಿನ್' ಸರ್ಕಾರಗಳು ಬೆಂಗಳೂರು ನಗರದ ಜನರ ಬಹುದಿನದ ಕನಸನ್ನು ಸಾಕಾರಗೊಳಿಸುವ ಕೆಲಸ ಆರಂಭಿಸಿವೆ' ಎಂದರು.

'ಉಪನಗರ ರೈಲು ಯೋಜನೆ ಅನುಷ್ಠಾನದಿಂದ ಬೆಂಗಳೂರಿನ ಸಾಮರ್ಥ್ಯ ವಿಸ್ತಾರವಾಗಲಿದೆ. 40 ವರ್ಷಗಳ ಹಿಂದೆಯೇ ಈ ಯೋಜನೆ ಅನುಷ್ಠಾನಕ್ಕೆ ಬಂದಿದ್ದರೆ ನಗರದ ಮೇಲಿನ ಒತ್ತಡ ತಗ್ಗುತ್ತಿತ್ತು. ಆದರೆ, ಈ ಯೋಜನೆಗೆ ಚಾಲನೆ ನೀಡುವ ಅದೃಷ್ಟ ನನ್ನ ನಸೀಬಿನಲ್ಲಿತ್ತು. ನೀವು ನನಗೆ ಅವಕಾಶ ನೀಡಿದ್ದೀರಿ. ನಾನು ಕಾಲಹರಣ ಮಾಡುವುದಿಲ್ಲ. ನಿಗದಿತ ಮಿತಿಯೊಳಗೆ ಯೋಜನೆ ಪೂರ್ಣಗೊಳಿಸಲು ಕ್ರಮ ವಹಿಸುತ್ತೇನೆ' ಎಂದು ಭರವಸೆ ನೀಡಿದರು.

ಸಂಚಾರ ದಟ್ಟಣೆಗೆ ಪರಿಹಾರ: ಉಪನಗರ ವರ್ತುಲ ರಸ್ತೆ ನಿರ್ಮಾಣ ಬೆಂಗಳೂರಿನ ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರ ದೊರಕಿಸಲಿರುವ ಮತ್ತೊಂದು ಯೋಜನೆ. ಹೊರ ಊರುಗಳಿಂದ ಬರುವವರು ಉಪನಗರಗಳ ಮಾರ್ಗವಾಗಿಯೇ ನೆರೆಯ ಜಿಲ್ಲೆಗಳು ಮತ್ತು ರಾಜ್ಯಗಳನ್ನು ಸಂಪರ್ಕಿಸಲು ಉಪನಗರ ವರ್ತುಲ ರಸ್ತೆ ನೆರವಾಗಲಿದೆ ಎಂದು ಮೋದಿ ಹೇಳಿದರು.

ರೈಲ್ವೆ ಮೂಲಸೌಕರ್ಯ ಅಭಿವೃದ್ಧಿಯಲ್ಲೂ ಬೆಂಗಳೂರಿನಲ್ಲಿ ದೊಡ್ಡ ಬದಲಾವಣೆ ಆಗುತ್ತಿದೆ. ದೇಶದ ಮೂರನೇ ಸಂಪೂರ್ಣ ಹವಾನಿಯಂತ್ರಿತ ರೈಲ್ವೆ ನಿಲ್ದಾಣ ಈಗ ಜನರ ಸೇವೆಗೆ ಸಮರ್ಪಣೆಯಾಗಿದೆ. ಇದೊಂದು ಪ್ರವಾಸಿ ತಾಣದಂತೆ ರೂಪುಗೊಂಡಿದೆ. ದಂಡು ರೈಲು ನಿಲ್ದಾಣ ಮತ್ತು ಯಶವಂತಪುರ ರೈಲು ನಿಲ್ದಾಣಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೇರಿಸಲಾಗುತ್ತಿದೆ. ಇವೆಲ್ಲವೂ ತಮ್ಮ ಸರ್ಕಾರ ನಗರದ ಜನರಿಗೆ ನೀಡುತ್ತಿರುವ ಕೊಡುಗೆಗಳು ಎಂದರು.

ಯುವಜನರ ಕನಸಿನ ನಗರ: 'ದೇಶದ ಲಕ್ಷಾಂತರ ಜನರ ಕನಸಿನ ನಗರ ಬೆಂಗಳೂರು. ಇಲ್ಲಿ ಬಂದು ಕೆಲಸ ಮಾಡಬೇಕು ಎಂದು ಬಯಸುವವರ ಸಂಖ್ಯೆ ದೊಡ್ಡದು. ಈ ನಗರದ ಅಭಿವೃದ್ಧಿಯಿಂದ ಲಕ್ಷಾಂತರ ಜನರ ಕನಸಿನ ವಿಕಾಸವಾಗುತ್ತದೆ' ಎಂದರು.

ನವೋದ್ಯಮ ಕ್ಷೇತ್ರದಲ್ಲಿ ದೇಶವು ದೊಡ್ಡ ಪ್ರಮಾಣದ ಯಶಸ್ಸು ಸಾಧಿಸುತ್ತಿರುವುದಕ್ಕೆ ಬೆಂಗಳೂರಿನ ಕೊಡುಗೆ ದೊಡ್ಡದು. ಕೋವಿಡ್ ಸಂಕಷ್ಟದ ಅವಧಿಯಲ್ಲಿ ಇಲ್ಲಿ ನಡೆದ ಆವಿಷ್ಕಾರ, ಸಂಶೋಧನೆ ಮತ್ತು ನವೋದ್ಯಮಗಳಲ್ಲಿನ ಯಶಸ್ವಿ ಪ್ರಯೋಗಗಳೇ ಆತ್ಮನಿರ್ಭರ ಯೋಜನೆಯ ಹಿಂದಿನ ಪ್ರೇರಣೆ ಎಂದು ಪ್ರಧಾನಿ ಶ್ಲಾಘಿಸಿದರು.



ಕೊಮ್ಮಘಟ್ಟದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ —ಪ್ರಜಾವಾಣಿ ಚಿತ್ರ

ಸರ್ ಎಂ. ವಿಶೇಶ್ವರಯ್ಯ ಟರ್ಮಿನಲ್ ಲೋಕಾರ್ಪಣೆ

ಬೈಯಪ್ಪನಹಳ್ಳಿ ಬಳಿ ನಿರ್ಮಾಣಗೊಂಡಿರುವ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್, ಒಂದೂವರೆ ವರ್ಷಗಳ ಬಳಿಕ ಅಧಿಕೃವಾಗಿ ಲೋಕಾರ್ಪಣೆಗೊಂಡಿದೆ.

ಬೈಯಪ್ಪನಹಳ್ಳಿ ಹಳೇ ರೈಲು ನಿಲ್ದಾಣ ಮತ್ತು ಬಾಣಸವಾಡಿ ರೈಲು ನಿಲ್ದಾಣಗಳ ನಡುವೆ ಈ ರೈಲು ನಿಲ್ದಾಣ ಚಿಟ್ಟೆಯಾಕಾರದಲ್ಲಿ ನಿರ್ಮಾಣವಾಗಿದೆ.

ನೈರುತ್ಯ ರೈಲ್ವೆ ಇತಿಹಾಸದಲ್ಲಿ ಹಲವು ಪ್ರಥಮಗಳನ್ನು ದಾಖಲಿಸುತ್ತಿರುವ ಈ ಟರ್ಮಿನಲ್, ವಿಮಾನ ನಿಲ್ದಾಣವನ್ನು ಹೋಲುವಂತೆ ವಿನ್ಯಾಸಗೊಳಿಸಲಾದ ಮೊದಲ ರೈಲು ನಿಲ್ದಾಣ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

ಬೆಂಗಳೂರಿನ ರೈಲ್ವೆ ಇತಿಹಾಸದಲ್ಲೇ ಇದು ಹೊಸ ಮೈಲಿಗಲ್ಲು. ಸುಸಜ್ಜಿತ ಸೌಲಭ್ಯಗಳೊಂದಿಗೆ ನಿರ್ಮಾಣಗೊಂಡಿರುವ ಈ ನಿಲ್ದಾಣ ಸುತ್ತಮುತ್ತಲ ಜನರ ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ. 2015–16ನೇ ಸಾಲಿನಲ್ಲಿ ಈ ನಿಲ್ದಾಣದ ಕಾಮಗಾರಿಗೆ ರೈಲ್ವೆ ಮಂಡಳಿ ಮಂಜೂರಾತಿ ನೀಡಿತ್ತು. 2017ರಿಂದ ಕಾಮಗಾರಿ ಆರಂಭವಾಗಿತ್ತು.

ಕಾಮಗಾರಿ ಪೂರ್ಣಗೊಂಡರೂ ಸಂಪರ್ಕ ರಸ್ತೆ ಇಲ್ಲದೆ ರೈಲು ನಿಲ್ದಾಣ ಕಾರ್ಯಾರಂಭಗೊಳ್ಳಲು ತೊಡಕಾಗಿತ್ತು. ರಸ್ತೆ ನಿರ್ಮಾಣವಾದರೂ ಪ್ರಧಾನಿ ಅವರಿಂದ ಚಾಲನೆ ನೀಡಿಸಲು ಅಧಿಕಾರಿಗಳ ಕೆಲ ದಿನ ಕಾದಿದ್ದರು.

ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಲೋಕಾರ್ಪಣೆ ಮಾಡಿದರು. ಅದಕ್ಕೂ ಮುನ್ನ ಇದೇ 6ರಿಂದ ರೈಲುಗಳ ಸಂಚಾರ ಆರಂಭವಾಗಿತ್ತು.



ಹಲವು ರೈಲ್ವೆ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಹಸಿರು ನಿಶಾನೆ ತೋರಿಸಿದರು —ಪ್ರಜಾವಾಣಿ ಚಿತ್ರ

ಮೈಸೂರು ಪೇಟ ತೊಡಿಸಿ ಸನ್ಮಾನ

ಕೊಮ್ಮಘಟ್ಟದ ಸಾರ್ವಜನಿಕ ಸಮಾರಂಭದ ವೇದಿಕೆಯಲ್ಲಿ ಪ್ರಧಾನಿ ಮೋದಿ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೈಸೂರು ಪೇಟ, ಕೇಸರಿ ಬಣ್ಣ ರೇಷ್ಮೆ ಶಾಲು, ಬಿಳಿ ಬಣ್ಣದ ಶಲ್ಯ, ಏಲಕ್ಕಿಹಾರ ತೊಡಿಸಿ ಸನ್ಮಾನಿಸಿದರು. ಪ್ರಧಾನಿಯವರು ಸಮಾರಂಭದ ಕೊನೆಯವರೆಗೂ ಮೈಸೂರು ಪೇಟಧಾರಿಯಾಗಿಯೇ ಇದ್ದರು.

ತೇಜಸ್ವಿನಿ, ಮೋಹನ್ ದಾಸ್ ಪೈ ಭೇಟಿ

ಅದಮ್ಯ ಚೇತನ ಪ್ರತಿಷ್ಠಾನದ ಮುಖ್ಯಸ್ಥರಾದ ತೇಜಸ್ವಿನಿ ಅನಂತ ಕುಮಾರ್ ಮತ್ತು ಉದ್ಯಮಿ ಟಿ.ವಿ. ಮೋಹನ್ ದಾಸ್ ಪೈ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

'ತೇಜಸ್ವಿನಿ ಅವರು ಪಕ್ಷದ ಹಿರಿಯ ನಾಯಕರಾಗಿದ್ದ ಅನಂತಕುಮಾರ್ ಅವರ ಪತ್ನಿ. ಅವರು ಪ್ರಧಾನಿ ಅವರೊಂದಿಗೆ ಯಾವ ವಿಷಯದ ಕುರಿತು ಚರ್ಚಿಸಿದ್ದಾರೆ ಎಂಬುದು ತಿಳಿದಿಲ್ಲ. ಮೋಹನ್ ದಾಸ್ ಪೈ ಅವರು ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ರಾಜ್ಯದ ಜಿಡಿಪಿ ಶೇ 2ರಷ್ಟು ಏರಲಿದೆ ಬಸವರಾಜ ಬೊಮ್ಮಾಯಿ ವಿಶ್ವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಯವರು ಸೋಮವಾರ ಚಾಲನೆ ನೀಡಿರುವ ಎಲ್ಲ ಯೋಜನೆಗಳು ಅನುಷ್ಠಾನಗೊಂಡ ಬಳಿಕ ರಾಜ್ಯದ ನಿವ್ವಳ ಆಂತರಿಕ ಉತ್ಪನ್ನ (ಜಿಡಿಪಿ) ಶೇಕಡ 2ರಷ್ಟು ಹೆಚ್ಚಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

ಕೊಮ್ಮಘಟ್ಟದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, 'ಪ್ರಧಾನಿಯವರು ಉದ್ಘಾಟಿಸಿರುವ ಮತ್ತು ಶಂಕುಸ್ಥಾಪನೆ ನೆರವೇರಿಸಿರುವ ಯೋಜನೆಗಳು ಸಂಚಾರ ದಟ್ಟಣೆ ತಗ್ಗಿಸುವುದು, ಪ್ರಯಾಣದ ಅವಧಿ ಉಳಿತಾಯ, ಸಾರಿಗೆ ವೆಚ್ಚ ಇಳಿಸುವುದಕ್ಕೆ ಪೂರಕವಾಗಿವೆ. ದೊಡ್ಡ ಪ್ರಮಾಣದ ಉದ್ಯೋಗ ಸೃಜನೆಯೂ ಆಗಲಿದೆ. ಈ ಎಲ್ಲವೂ ರಾಜ್ಯದ ಜಿಡಿಪಿ ಏರಿಕೆಗೆ ಕಾರಣವಾಗಲಿವೆ' ಎಂದರು.


ಕೇಂದ್ರ ಸರ್ಕಾರ ರಾಜ್ಯದ ಅಭಿವೃದ್ಧಿಗೆ ಬೆಂಗಾವಲಾಗಿ ನಿಂತಿದೆ. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ 53.84 ಲಕ್ಷ ರೈತರು ನೆರವು ಪಡೆದಿದ್ದಾರೆ. ಜಲ ಜೀವನ್ ಮಿಷನ್ ಯೋಜನೆಯಡಿ 48 ಲಕ್ಷ ಮನೆಗಳಿಗೆ ನಲ್ಲಿ ಮೂಲಕ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ನವ ಭಾರತ ನಿರ್ಮಾಣದ ಪ್ರಧಾನಿಯವರ ಕನಸಿಗೆ ಪೂರಕವಾಗಿ ನವ ಕರ್ನಾಟಕವೂ ಹೆಜ್ಜೆ ಹಾಕಲಿದೆ ಎಂದು ಹೇಳಿದರು.

ಹೊಸ ವಿಮಾನ ನಿಲ್ದಾಣಗಳ ನಿರ್ಮಾಣ, ವೈದ್ಯಕೀಯ ಕಾಲೇಜುಗಳ ಆರಂಭ, ರೈಲು ಮಾರ್ಗಗಳ ನಿರ್ಮಾಣ, ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಸೇರಿದಂತೆ ಅನೇಕ ವಿಚಾರಗಳಲ್ಲಿ ರಾಜ್ಯಕ್ಕೆ ಕೇಂದ್ರವು ಬೆಂಬಲವಾಗಿ ನಿಂತಿದೆ. ರಾಜ್ಯದಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲದ ಸದ್ಬಳಕೆ ವಿಚಾರದಲ್ಲಿ ಮೋದಿಯವರ ಮಾರ್ಗದರ್ಶನದಲ್ಲಿ ರಾಜ್ಯ ಸರ್ಕಾರ ಮುನ್ನಡೆಯಲಿದೆ ಎಂದರು.

ಕೋವಿಡ್ ಪ್ರಕರಣ ಸಂಖ್ಯೆ: ತುಸು ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಸೋಮವಾರ ತುಸು ಕಡಿಮೆಯಾಗಿದ್ದು, ಬೆಂಗಳೂರಿನಲ್ಲಿ 494 ಸೇರಿದಂತೆ ರಾಜ್ಯದಲ್ಲಿ 530 ಮಂದಿ ಹೊಸದಾಗಿ ಕೋವಿಡ್ ಪೀಡಿತರಾಗಿದ್ದಾರೆ. ಭಾನುವಾರ 623 ಪ್ರಕರಣಗಳು ದೃಢಪಟ್ಟದ್ದವು.

ಸಕ್ರಿಯ ಪ್ರಕರಣಗಳ ಸಂಖ್ಯೆಯು 4,928ಕ್ಕೆ ತಲುಪಿದೆ. ಆದರೆ, ಸೋಂಕು ದೃಢ ಪ್ರಮಾಣದಲ್ಲಿ ಏರಿಕೆಯಾಗಿದ್ದು, ಶೇ 3.59ರಷ್ಟು ವರದಿಯಾಗಿದೆ. ಮೈಸೂರಿನಲ್ಲಿ 6, ದಕ್ಷಿಣ ಕನ್ನಡ ಮತ್ತು ಕಲಬುರಗಿಯಲ್ಲಿ ತಲಾ 5, ಬಳ್ಳಾರಿ, ಬೆಳಗಾವಿ, ರಾಮನಗರ, ಉತ್ತರ ಕನ್ನಡದಲ್ಲಿ ತಲಾ 3, ಉಡುಪಿಯಲ್ಲಿ 2 ಮತ್ತು ಬಾಗಲಕೋಟೆ, ಧಾರವಾಡ, ಗದಗ, ಶಿವಮೊಗ್ಗ, ತುಮಕೂರು, ವಿಜಯಪುರದಲ್ಲಿ ತಲಾ ಒಂದು ಪ್ರಕರಣಗಳು ವರದಿಯಾಗಿವೆ. ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.61 ಲಕ್ಷ ದಾಟಿದೆ.



ನಗರದ ಎಂ.ಜಿ. ರಸ್ತೆಯಲ್ಲಿರುವ ಜೋಯಾಲುಕ್ಕಾಸ್‌ನ ನವೀಕೃತ ಮಳಿಗೆಯನ್ನು ನಟಿ ಹರ್ಷಿಕಾ ಪೂಣಚ್ಚ ಉದ್ಘಾಟಿಸಿದರು. ಬೆಂಗಳೂರು ರೋಟರಿ ಕ್ಲಬ್‌ನ ಉಪಾಧ್ಯಕ್ಷೆ ನಳಿನಿ ನಂಜುಂಡಯ್ಯ, ಇಜಿಕೆ ಸಮೂಹದ ನಿರ್ದೇಶಕರಾದ ಇ.ಜಿ. ಚಂದನ್, ಇ.ಜಿ. ಅಮಲ್ ಕುಮಾರ್, ಕಾರ್ತಿಕ್ ಸಿ. ಎಲ್ಲೋರ್, ಜೋಯಾಲುಕ್ಕಾಸ್‌ನ ಮಾರುಕಟ್ಟೆ ವಿಭಾಗದ ಡಿಜಿಎಂ ಅನೀಶ್ ವರ್ಗೀಸ್, ರಿಟೇಲ್ ಮ್ಯಾನೇಜರ್ ರಾಜೇಶ್ ಕೃಷ್ಣನ್, ಪ್ರಾದೇಶಿಕ ಮ್ಯಾನೇಜರ್ ಜಿನೇಶ್, ಶಾಖೆಯ ಉಸ್ತುವಾರಿ ಶಿಬಿನ್ ಮತ್ತು ಇತರರು ಚಿತ್ರದಲ್ಲಿದ್ದಾರೆ.

ಪ್ರಧಾನಿ ಸಂಚಾರ: ನಗರದ ಪರ್ಯಾಯ ರಸ್ತೆಗಳಲ್ಲಿ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಸಂಚಾರಕ್ಕಾಗಿ ನಗರದ ಪ್ರಮುಖ ರಸ್ತೆಗಳಲ್ಲಿ ವಾಹನಗಳ ಸಂಚಾರ ನಿರ್ಬಂಧಿಸಿದ್ದರಿಂದ ಪರ್ಯಾಯ ರಸ್ತೆಗಳಲ್ಲಿ ದಟ್ಟಣೆ ಕಂಡುಬಂತು.

ಯಲಹಂಕ ವಾಯುನೆಲೆಗೆ ಬಂದಿಳಿದ ಮೋದಿ, ರಸ್ತೆ ಮಾರ್ಗವಾಗಿ ಸಂಚರಿಸಿ ಐಐಎಸ್ಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಮೋದಿ ಸಂಚಾರಕ್ಕಾಗಿ, ವಿಮಾನ ನಿಲ್ದಾಣ ರಸ್ತೆಯಲ್ಲಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿತ್ತು.

ವಿಮಾನ ನಿಲ್ದಾಣದಿಂದ ನಗರಕ್ಕೆ ಬರುತ್ತಿದ್ದ ಸಾರ್ವಜನಿಕರ ವಾಹನಗಳು, ಹೆಬ್ಬಾಳ ಮೇಲ್ಸೇತುವೆ ಬದಲು ಹೊರವರ್ತುಲ ರಸ್ತೆ ಮೂಲಕ ಪರ್ಯಾಯ ಮಾರ್ಗದಲ್ಲಿ ಸಂಚರಿಸಿದವು. ಇದರಿಂದಾಗಿ ಕೋಲಾರ ರಸ್ತೆ, ನ್ಯೂ ಬಿಇಎಲ್ ವೃತ್ತ ರಸ್ತೆ, ಜಾಲಹಳ್ಳಿ ರಸ್ತೆಯಲ್ಲಿ ವಾಹನಗಳು ನಿಧಾನಗತಿಯಲ್ಲಿ ಸಂಚರಿಸಿದವು.

ಹೆಬ್ಬಾಳ ಮೇಲ್ಸೇತುವೆ, ಮೇಖ್ರಿ ವೃತ್ತ ಹಾಗೂ ಕಾವೇರಿ ವೃತ್ತ ರಸ್ತೆಯನ್ನು ಸಿಗ್ನಲ್ ಮುಕ್ತಗೊಳಿಸಿ ಪ್ರಧಾನಿ ಕಾರು ಸಂಚಾರಕ್ಕೆ ಮೀಸಲಿಡಲಾಗಿತ್ತು. ಇದರಿಂದಾಗಿ ಆರ್.ಟಿ.ನಗರ, ವಸಂತನಗರ, ಹೆಬ್ಬಾಳ, ಸದಾಶಿವನಗರ, ಮಲ್ಲೇಶ್ವರ ಹಾಗೂ ಸುತ್ತಮುತ್ತ ಪ್ರದೇಶಗಳ ಒಳ ರಸ್ತೆಗಳಲ್ಲಿ ವಾಹನಗಳು ನಿಧಾನವಾಗಿ ಸಂಚರಿಸಿದ್ದರಿಂದ ದಟ್ಟಣೆ ಉಂಟಾಯಿತು.

ಬಂದ್: ಕೆಂಗೇರಿಯಿಂದ ಕೊಮ್ಮಘಟ್ಟಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಅಂಗಡಿ, ಹೋಟೆಲ್ ಹಾಗೂ ಇತರೆ ಮಳಿಗೆಗಳನ್ನು ಸಂಪೂರ್ಣವಾಗಿ ಬಂದ್ ಮಾಡಿಸಲಾಗಿತ್ತು. ಪ್ರಧಾನಿ ಮೋದಿ ಅವರು ಹೆಲಿ ಕಾಪ್ಟರ್ ಮೂಲಕ ಕೊಮ್ಮಘಟ್ಟಕ್ಕೆ ಬಂದಿದ್ದರು. ಆದರೆ, ಅವರ ಭದ್ರತೆ ಉದ್ದೇಶದಿಂದ ಕೊಮ್ಮಘಟ್ಟ–ಕೆಂಗೇರಿ ರಸ್ತೆಯಲ್ಲಿ ಸ್ಥಳೀಯ ನಿವಾಸಿಗಳ ಓಡಾಟಕ್ಕೂ ನಿರ್ಬಂಧ ವಿಧಿಸಲಾಗಿತ್ತು. ರಸ್ತೆಯ ಎರಡೂ ಬದಿಯಲ್ಲಿ ಪೊಲೀಸರು ಕಾವಲು ಕಂಡುಬಂತು.

ಮೈಸೂರು ರಸ್ತೆಯಲ್ಲೂ ಕೆಲ ನಿಮಿಷ ವಾಹನಗಳ ಸಂಚಾರ ನಿರ್ಬಂಧಿಸಲಾಗಿತ್ತು. ಇದರಿಂದಾಗಿ ನಗರದ ಹೊರವಲಯದಲ್ಲಿ ದಟ್ಟಣೆ ಕಂಡುಬಂತು.

ರಸ್ತೆಗೆ ಇಳಿಯದ ವಿದ್ಯಾರ್ಥಿಗಳು: ಪ್ರಧಾನಿ ಅವರ ನಿಗದಿತ ಸಂಚಾರಕ್ಕೆ ಹಾಗೂ ಅವರ ತುರ್ತು ಸಂಚಾರಕ್ಕೆ ನಗರದ ಹಲವು ರಸ್ತೆಗಳಲ್ಲಿ ಸಾರ್ವಜನಿಕರ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಜೊತೆಗೆ, ಅವರು ಸಂಚರಿಸುವ ರಸ್ತೆಯುದ್ದಕ್ಕೂ ಇರುವ ಶಾಲಾ–ಕಾಲೇಜು ಹಾಗೂ ವಿಶ್ವವಿದ್ಯಾಲಯಕ್ಕೆ ರಜೆ ಘೋಷಿಸಲಾಗಿತ್ತು. ಹೀಗಾಗಿ, ಬಹುತೇಕ ಕಡೆ ವಿದ್ಯಾರ್ಥಿಗಳು ಹಾಗೂ ಬೋಧಕ ಸಿಬ್ಬಂದಿ ರಸ್ತೆಗೆ ಇಳಿಯಲಿಲ್ಲ.

ಬೇಸ್ ನೂತನ ಕ್ಯಾಂಪಸ್ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜ್ಞಾನಭಾರತಿ ಕ್ಯಾಂಪಸ್ ಆವರಣದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ (ಬೇಸ್) ನೂತನ ಕ್ಯಾಂಪಸ್ ಅನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಉದ್ಘಾಟಿಸಿದರು.

ಆ ಬಳಿಕ ಅವರು 22 ಅಡಿ ಎತ್ತರದ ಅಂಬೇಡ್ಕರ್ ಅವರ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಿ, ನಮನ ಸಲ್ಲಿಸಿದರು. ಬೇಸ್ ಕ್ಯಾಂಪಸ್‌ನ ಆಡಳಿತ ವಿಭಾಗದಲ್ಲಿ ₹250 ಕೋಟಿ ವೆಚ್ಚದಲ್ಲಿ ನಿರ್ಮಿಸಿದ 13 ಬ್ಲಾಕ್‌ಗಳನ್ನೂ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಉನ್ನತಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಬೇಸ್ ಪರವಾಗಿ ಅಂಬೇಡ್ಕರ್ ಅವರ ಚಿಕ್ಕ ಪ್ರತಿಮೆಯನ್ನು ಉಡುಗೊರೆಯಾಗಿ ನೀಡಿದರು.

ಅರ್ಥಶಾಸ್ತ್ರ ಮತ್ತು ಸಮಾಜ ವಿಜ್ಞಾನಗಳ ಉನ್ನತಾಧ್ಯಯನಕ್ಕೆ ಮೀಸಲಾಗಿರುವ ಬೇಸ್ ವಿ.ವಿಯಲ್ಲಿ ಇನ್ನು ಮೂರು ವರ್ಷಗಳಲ್ಲಿ 1,100 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಸಿಗಲಿದೆ. ಬೇಸ್ ಕ್ಯಾಂಪಸ್ 43.35 ಎಕರೆ ಪ್ರದೇಶದಲ್ಲಿದ್ದು, ಕ್ಯಾಂಪಸ್ ಕಟ್ಟಡ ನಿರ್ಮಾಣಕ್ಕಾಗಿ ಮೊದಲ ಹಂತದಲ್ಲಿ ರಾಜ್ಯ ಸರ್ಕಾರ ₹201 ಕೋಟಿ ಅನುದಾನ ಬಿಡುಗಡೆ ಮಾಡಿದೆ.

ಬೇಸ್ ಐದು ವರ್ಷಗಳ ಇಂಟಿಗ್ರೇಟೆಡ್ ಎಕನಾಮಿಕ್ಸ್ ಕೋರ್ಸ್ ಹೊಂದಿದೆ.

ಅತಿ ಶೀಘ್ರವಾಗಿ ಇಲ್ಲಿ ಸಂಶೋಧನಾ ವಿಭಾಗವೂ ಆರಂಭಗೊಳ್ಳಲಿದೆ. ಇಲ್ಲಿ ಪ್ರವೇಶ ಪಡೆಯಲು ಅಖಿಲ ಭಾರತ ಮಟ್ಟದ ಕಾಮನ್ ಯೂನಿವರ್ಸಿಟಿ ಎಂಟ್ರೆನ್ಸ್ ಟೆಸ್ಟ್ (ಸಿಯುಇಟಿ) ಅನ್ನು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ ಪ್ರವೇಶ ಪರೀಕ್ಷೆ ನಡೆಸಲಿದೆ. 60:40 ಅನುಪಾತದಲ್ಲಿ ರಾಜ್ಯ ಮತ್ತು ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ನಡೆಯಲಿದೆ.

ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಹೈದರಾಬಾದ್ ಕರ್ನಾಟಕದ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಮೀಸಲಾತಿ ನೀಡಲಾಗುವುದು.



ಬೇಸ್ ಕ್ಯಾಂಪಸ್ ಉದ್ಘಾಟನೆ ಬಳಿಕ ಪ್ರಧಾನಿ ನರೇಂದ್ರ ಮೋದಿ ಅಂಬೇಡ್ಕರ್ ಪ್ರತಿಮೆ ಅನಾವರಣಗೊಳಿಸಿದರು. ಈ ಸಂದರ್ಭ ಸಚಿವರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ, ಕೋಟ ಶ್ರೀನಿವಾಸ ಪೂಜಾರಿ, ವಿ.ಸೋಮಣ್ಣ, ಬಿ.ಶ್ರೀರಾಮುಲು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವ ವಿ.ಸುನಿಲ್ ಕುಮಾರ್ ಇದ್ದರು.(ಎಡದಿಂದ)

ನಿಧನ ವಾರ್ತೆ

ಅಂಬುಜಾ ರಾಜಣ್ಣ



ಬೆಂಗಳೂರು: ದಿವಂಗತ ಪ್ರೊ. ಬಿ.ಸಿ.ರಾಜಣ್ಣ ಅವರ ಪತ್ನಿ ಅಂಬುಜಾ ರಾಜಣ್ಣ(86) ಅವರು ಆರ್‌ಎಂವಿ ಬಡಾವಣೆಯ ಎರಡನೇ ಹಂತದ ತಮ್ಮ ನಿವಾಸದಲ್ಲಿ ಸೋಮವಾರ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪುತ್ರ, ಪುತ್ರಿ ಇದ್ದಾರೆ. ಹೆಬ್ಬಾಳದ ಚಿತಾಗಾರದಲ್ಲಿ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ. ಸಂಪರ್ಕ: 9900249721.

ಪ್ರೆಸಿಡೆನ್ಸಿ ಶಾಲೆಯ ಎಂ.ಎ.ಶಾಹ



ಬೆಂಗಳೂರು: ನಂದಿನಿ ಲೇಔಟ್‌ನ ಪ್ರೆಸಿಡೆನ್ಸಿ ಶಾಲೆಯ 'ಕರೆಸ್ಪಾಂಡೆಂಟ್' (ಮುಖ್ಯಸ್ಥರು) ಆಗಿದ್ದ ಎಂ.ಎ. ಶಾಹ (79) ಅವರು ಭಾನುವಾರ ರಾತ್ರಿ ಮಂಗಳೂರಿನಲ್ಲಿ ಮೃತರಾದರು

ತಲಪಾಡಿ ಬಳಿ ನಡೆದ ಅಪಘಾತವೊಂದರಲ್ಲಿ ಗಾಯಗೊಂಡಿದ್ದ ಅವರನ್ನು ಮಂಗಳೂರಿನ ಆಸ್ಪತ್ರೆಗೆ ಸೇರಿಸಲಾಗಿತ್ತು.

ಮೃತರಿಗೆ ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯರು ಇದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ನಾಲ್ಕು ದಶಕಗಳ ಕಾಲ ಸಲ್ಲಿಸಿದ ಸೇವೆಯಿಂದಾಗಿ ಅವರು ಜನಪ್ರಿಯರಾಗಿದ್ದರು. ಸೋಮವಾರ ರಾತ್ರಿ ರಾಜಾಜಿನಗರದ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು.

'ಕೈ ತಪ್ಪಿದ ಪರಿಷತ್ ಟಿಕೆಟ್: 24ಕ್ಕೆ ಬೆಂಬಲಿಗರ ಸಭೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಟಿಕೆಟ್ ಕೈ ತಪ್ಪಿದ ಕಾರಣಕ್ಕೆ ಮುನಿಸಿಕೊಂಡಿರುವ ಕೆಪಿಸಿಸಿ ಉಪಾಧ್ಯಕ್ಷ ಎಂ.ಆರ್. ಸೀತಾರಾಮ್, ಇದೇ 24ರಂದು ತಮ್ಮ ಬೆಂಬಲಿಗರ ಜೊತೆ ಸಮಾಲೋಚಿಸಿ ಮುಂದಿನ ರಾಜಕೀಯ ನಡೆ ತೀರ್ಮಾನಿಸಲು ನಿರ್ಧರಿಸಿದ್ದಾರೆ.

ಅರಮನೆ ಮೈದಾನದ 'ವೈಟ್ ಪೆಟಲ್ಸ್ ಗಾರ್ಡೆನಿಯಾ' ಆವರಣದಲ್ಲಿ ಅಂದು ಬೆಳಿಗ್ಗೆ 11 ಗಂಟೆಗೆ ಸಭೆ ನಡೆಯಲಿದೆ. ಈ ಸಭೆಯಲ್ಲಿ ಪ್ರಸ್ತುತ ರಾಜಕೀಯ ಬೆಳವಣಿಗೆಗಳ ಬಗ್ಗೆ ಬೆಂಬಲಿಗರಿಂದ ಸಲಹೆ ಪಡೆಯಲು ಅವರು ತೀರ್ಮಾನಿಸಿದ್ದಾರೆ.

ಈ ಬಗ್ಗೆ ಬೆಂಬಲಿಗರನ್ನು ಉದ್ದೇಶಿಸಿ ಪತ್ರ ಬರೆದಿರುವ ಅವರು, 'ಪಕ್ಷಕ್ಕಾಗಿ ದುಡಿದ ನನ್ನ ಸೇವೆಯನ್ನು ಪರಿಗಣಿಸದೆ ಕೆಲವು ಸ್ವಾರ್ಥ, ಪಟ್ಟಭದ್ರ ಶಕ್ತಿಗಳು ಮಾಡುತ್ತಿರುವ ಕುಟಿಲ ರಾಜಕೀಯದ ಕುರಿತು ತಮ್ಮೊಂದಿಗೆ ಚರ್ಚಿಸಲು ಉದ್ದೇಶಿಸಿದ್ದೇನೆ' ಎಂದಿದ್ದಾರೆ.

ಅಲ್ಲದೆ ಪತ್ರದಲ್ಲಿ, '1996ರಿಂದ 2002ರವರೆಗೆ ಕೆಪಿಸಿಸಿ ಖಜಾಂಚಿಯಾಗಿ, ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದೇನೆ. 1999 ಮತ್ತು 2002ರಲ್ಲಿ ಮಲ್ಲೇಶ್ವರ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದೆ. ಆದರೆ, 2008ರಲ್ಲಿ ಸ್ವಪಕ್ಷೀಯರ ಒಳಸಂಚಿನಿಂದ ಟಿಕೆಟ್ ತಪ್ಪಿತ್ತು. ಕೆಲವು ನಾಯಕರ ಚಿತಾವಣೆಯಿಂದಾಗಿ ಲೋಕಸಭೆ ಚುನಾವಣೆಯಲ್ಲಿ (2009) ಚಿಕ್ಕಬಳ್ಳಾಪುರ ಕ್ಷೇತ್ರದ ಟಿಕೆಟ್ ನಿರಾಕರಿಸಲಾಗಿತ್ತು. ವಿಧಾನಸಭೆಯಿಂದ ವಿಧಾನಪರಿಷತ್‌ಗೆ 2012ರಲ್ಲಿ ನಡೆದ ಚುನಾವಣೆಯಲ್ಲಿ ಪಕ್ಷದ ಮತಗಳು ಕಡಿಮೆ ಇದ್ದರೂ ನಾಲ್ಕನೇ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅವಕಾಶ ನೀಡಲಾಗಿತ್ತು. ಆದರೆ, ಪ್ರಜ್ಞಾವಂತ ಶಾಸಕರು ಕೈಹಿಡಿದ ಕಾರಣ, ಪರಿಷತ್‌ಗೆ ಆಯ್ಕೆಯಾಗಿ ಸಚಿವನೂ ಆದೆ. 2017ರಲ್ಲಿ ಪರಿಷತ್ ಸಭಾ ನಾಯಕನಾಗಿದ್ದೆ. 2018 ಮತ್ತು 2020ರಲ್ಲಿ ವಿಧಾನ ಪರಿಷತ್ ಟಿಕೆಟ್ ನಿರಾಕರಿಸಲಾಗಿತ್ತು. ಇದೇ ಮೇ ತಿಂಗಳಲ್ಲಿ ಪಕ್ಷದ ರಾಜ್ಯ ನಾಯಕತ್ವ ನನ್ನ ಹೆಸರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡಲು ಶಿಫಾರಸು ಮಾಡಿದ್ದರೂ ಪಿತೂರಿ ನಡೆಸಿ ಕೊನೆಕ್ಷಣದಲ್ಲಿ ಮತ್ತೆ ಟಿಕೆಟ್ ನಿರಾಕರಿಸಲಾಗಿದೆ' ಎಂದೂ ಉಲ್ಲೇಖಿಸಿದ್ದಾರೆ.

ತಮಿಳುನಾಡು: ₹ 400 ಕೋಟಿ ತೆರಿಗೆ ವಂಚನೆ ಪತ್ತೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಮದ್ಯ ತಯಾರಿಕೆ ಹಾಗೂ ವಿವಿಧ ಸೇವೆಗಳನ್ನು ನೀಡುವ ತಮಿಳುನಾಡು ಮೂಲದ ಎಂಜಿಎಂ ಸಮೂಹದ ಸಂಸ್ಥೆಯು ₹400 ಕೋಟಿ ತೆರಿಗೆ ವಂಚನೆ ಮಾಡಿರುವುದನ್ನು ಪತ್ತೆ ಹಚ್ಚಲಾಗಿದೆ ಎಂದು ಆದಾಯ ತೆರಿಗೆ ಇಲಾಖೆಯ ಅಧಿಕಾರಿ ಹೇಳಿದ್ದಾರೆ.

ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಜೂನ್ 15ರಂದು ತಮಿಳುನಾಡು, ಪುದುಚೇರಿ ಮತ್ತು ತೆಲಂಗಾಣದಲ್ಲಿರುವ ಸಂಸ್ಥೆಗೆ ಸೇರಿದ 40 ಕಡೆಗಳಲ್ಲಿ ದಾಳಿ ನಡೆಸಿ, ಸಂಸ್ಥೆಯ ಅಕ್ರಮದ ಕುರಿತ ಕಡತಗಳು ಮತ್ತು ಡಿಜಿಟಲ್ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಗಿದೆ. ಹಣದ ಮೂಲದ ಬಗ್ಗೆ ಮಾಹಿತಿ ನೀಡದ ಕಾರಣ ₹3 ಕೋಟಿ ನಗದು, ₹2.5 ಕೋಟಿ ಮೌಲ್ಯದ ಚಿನ್ನಾಭರಣ ಗಳನ್ನು ವಶಕ್ಕೆ ಪಡೆಯಲಾಗಿದೆ. ಈ ಕಂಪನಿಯು ಸುಳ್ಳು ಲೆಕ್ಕ ನಮೂದಿಸಿ ₹400 ಕೋಟಿ ತೆರಿಗೆ ವಂಚಿಸಿರುವುದು ಗೊತ್ತಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಆದರೆ, ಆದಾಯ ತೆರಿಗೆ ಇಲಾಖೆ ದಾಳಿಗೆ ಗುರಿಯಾದ ಸರಕು ಸಾಗಣೆ, ಮನರಂಜನೆ, ಆತಿಥ್ಯ ರೀತಿಯ ಸೇವೆ ಹಾಗೂ ಮದ್ಯ ತಯಾರಿಕೆ ಕಂಪನಿಯ ಹೆಸರನ್ನು ಸಿಬಿಡಿಟಿ ಬಹಿರಂಗಪಡಿಸಿಲ್ಲ. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೋಟೆಲ್‌ಗಳನ್ನು ಹೊಂದಿದೆ ಎಂದು ಹೇಳಲಾಗಿದೆ. ಆದಾಗ್ಯೂ, ಐಟಿ ಅಧಿಕಾರಿಗಳ ದಾಳಿಯು ಎಂಜಿಎಂ ಸಮೂಹ ಸಂಸ್ಥೆಯ ಮೇಲೆ ನಡೆದಿದೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಕಾಂಗ್ರೆಸ್ ಸಾಮಾಜಿಕ ಮಾಧ್ಯಮ ಮುಖ್ಯಸ್ಥರಾಗಿ ಸುಪ್ರಿಯಾ ಶ್ರೀನೆತ್

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷ ತನ್ನ ಸಂವಹನ ವಿಭಾಗದ ಸಾಮಾಜಿಕ ಮಾಧ್ಯಮ ಮತ್ತು ಡಿಜಿಟಲ್ ವೇದಿಕೆಗಳ ಅಧ್ಯಕ್ಷರನ್ನಾಗಿ ಸುಪ್ರಿಯಾ ಶ್ರೀನೆತ್ ಅವರನ್ನು ಸೋಮವಾರ ನೇಮಕ ಮಾಡಿದೆ.

ಸಾಮಾಜಿಕ ಮಾಧ್ಯಮ ವಿಭಾಗದ ನಿರ್ಗಮಿತ ಅಧ್ಯಕ್ಷ ರೋಹನ್ ಗುಪ್ತಾ ಅವರ ಕೊಡುಗೆಯನ್ನು ಪಕ್ಷ ಶ್ಲಾಘಿಸುತ್ತದೆ. ತಕ್ಷಣದಿಂದ ಜಾರಿಗೆ ಬರುವಂತೆ ರೋಹನ್ ಗುಪ್ತಾ ಅವರನ್ನು ಎಐಸಿಸಿ ವಕ್ತಾರರನ್ನಾಗಿ ನೇಮಿಸಲಾಗಿದೆ ಎಂದು ಪಕ್ಷ ಹೇಳಿಕೆಯಲ್ಲಿ ತಿಳಿಸಿದೆ.

ಉದಯಪುರದ ಚಿಂತನ ಶಿಬಿರದಲ್ಲಿ ಜನರೊಂದಿಗೆ ಪಕ್ಷದ ಸಂಪರ್ಕ ಸುಧಾರಿಸಲು ತನ್ನ ಸಂವಹನ ವಿಭಾಗ ಬಲಪಡಿಸಲು ಕಾಂಗ್ರೆಸ್ ನಿರ್ಧರಿಸಿತ್ತು.



ಉಕ್ರೇನ್‌ಲ್ಲಿ ರಷ್ಯಾ ನಡೆಸಿದ ದಾಳಿಯಲ್ಲಿ ಮೃತಪಟ್ಟಿದ್ದ ವೈದ್ಯಕೀಯ ವಿದ್ಯಾರ್ಥಿ ನವೀನ ಗ್ಯಾನಗೌಡರ್ ಅವರ ತಂದೆ ಶೇಖರ ಗೌಡ, ತಾಯಿ ಜಯಲಕ್ಷ್ಮಿ, ಸಹೋದರ ಹರ್ಷ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಮವಾರ ಭೇಟಿಮಾಡಿ ತಮ್ಮ ಅಹವಾಲು ಹೇಳಿಕೊಂಡರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದರು.

111 ನಿಷ್ಕ್ರಿಯ ಪಕ್ಷಗಳ ಕೈಬಿಡಲು ಚುನಾವಣಾ ಆಯೋಗ ನಿರ್ಧಾರ

ನವದೆಹಲಿ (ಪಿಟಿಐ): ವ್ಯವಸ್ಥೆಯ ಶುದ್ಧೀಕರಣದ ಉದ್ದೇಶದಿಂದ ಚುನಾವಣಾ ಆಯೋಗವು) ಅಸ್ತಿತ್ವದಲ್ಲಿಲ್ಲದ 111 ರಾಜಕೀಯ ಪಕ್ಷಗಳನ್ನು ತನ್ನ ರಿಜಿಸ್ಟರ್‌ನಿಂದ ತೆಗೆದುಹಾಕಲು ಸೋಮವಾರ ನಿರ್ಧರಿಸಿದೆ.

ಚುನಾವಣಾ ಸಮಿತಿಯ ಪ್ರಕಾರ, ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳು ಪರಿಶೀಲನೆ ವೇಳೆ 111 ನೋಂದಾಯಿತ, ಗುರುತಿಸಲ್ಪಡದ ರಾಜಕೀಯ ಪಕ್ಷಗಳು 'ಅಸ್ತಿತ್ವದಲ್ಲಿಲ್ಲ' ಎಂದು ವರದಿ ನೀಡಿದ ನಂತರ ಈ ನಿರ್ಧಾರ ಕೈಗೊಳ್ಳಲಾಗಿದೆ. ಸಾಮಾನ್ಯ ಚುನಾವಣಾ ಚಿಹ್ನೆಯ ಹಂಚಿಕೆ ಸೇರಿ ಈ ಪಕ್ಷಗಳಿಗೆ ನೀಡಲಾದ ವಿವಿಧ ಸೌಲಭ್ಯಗಳನ್ನು ಹಿಂಪಡೆಯಲು ಇಸಿ ನಿರ್ಧರಿಸಿದೆ. ಈ ತಿಂಗಳ ಆರಂಭದಲ್ಲಿ, ಇಸಿ ತನ್ನ ರಿಜಿಸ್ಟರ್‌ನಿಂದ ಅಸ್ತಿತ್ವದಲ್ಲಿಲ್ಲದ 87 ರಾಜಕೀಯ ಪಕ್ಷಗಳನ್ನು ತೆಗೆದುಹಾಕಿತ್ತು.

ಯಾವುದೇ ನೋಂದಾಯಿತ ಗುರುತಿಸದ ರಾಜಕೀಯ ಪಕ್ಷವು (ಆರ್‌ಯುಪಿಪಿ) ಅಸ್ತಿತ್ವದ ಸಾಕ್ಷ್ಯಗಳು, ವಾರ್ಷಿಕ ಲೆಕ್ಕಪರಿಶೋಧನೆ ವರದಿಗಳು, ಖಾತೆಗಳು, ದೇಣಿಗೆ ವರದಿ, ವೆಚ್ಚದ ವರದಿ ಮತ್ತು ನವೀಕರಿಸಿದ ಪಟ್ಟಿಯೊಂದಿಗೆ ಸಂಬಂಧಿಸಿದ ಸಿಇಒ ಅವರನ್ನು 30 ದಿನಗಳೊಳಗೆ ಸಂಪರ್ಕಿಸಬಹುದು ಎಂದು ಚುನಾವಣಾ ಸಮಿತಿ ತಿಳಿಸಿದೆ.

ಕುಂದಲಹಳ್ಳಿ ಅಂಡರ್‌ಪಾಸ್ ಪ್ರಾಯೋಗಿಕ ಸಂಚಾರಕ್ಕೆ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಂದಲಹಳ್ಳಿ ಜಂಕ್ಷನ್‌ನ ಅಂಡರ್‌ಪಾಸ್ ಸೋಮವಾರ ಕೊನೆಗೂ ಸಂಚಾರಕ್ಕೆ ತೆರೆದುಕೊಂಡಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇನ್ನು ಒಂದು ಅಥವಾ ಎರಡು ವಾರಗಳಲ್ಲಿ ಅಧಿಕೃತವಾಗಿ ಇದನ್ನು ಉದ್ಘಾಟಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಾಲ್ಕು ಪಥಗಳ ಈ ಅಂಡರ್‌ಪಾಸ್ ಐಟಿ ನೌಕರರ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಿದೆ. ಒಂದು ದಶಕದ ಹಿಂದೆಯೇ ರೂಪಿಸಲಾಗಿದ್ದ ಯೋಜನೆಯು 2019ರಲ್ಲಿ ಪ್ರಾರಂಭಗೊಂಡಿತ್ತು. ಹಳೆಯ ವಿಮಾನ ನಿಲ್ದಾಣದ ಈ ರಸ್ತೆಯು ಐಟಿ ಕಂಪನಿಗಳ ಸಂಪರ್ಕ ಸೇತುವಾಗಿದೆ.

ಒಟ್ಟು 281 ಮೀಟರ್ ಉದ್ದದ ಈ ಅಂಡರ್‌ಪಾಸ್ ನಿರ್ಮಿಸಲು ಬಿಬಿಎಂಪಿ ₹ 19.5 ಕೋಟಿ ರೂಪಾಯಿ ವ್ಯಯಿಸಿದೆ. ಎರಡೂ ಬದಿಗಳಲ್ಲೂ 7.5 ಮೀಟರ್‌ನಷ್ಟು ಸರ್ವಿಸ್ ರಸ್ತೆಗಳಿವೆ. 28 ಆಸ್ತಿಗಳನ್ನು ಯೋಜನೆಗಾಗಿ ವಶಪಡಿಸಿಕೊಳ್ಳಲು ₹ 45 ಕೋಟಿ ರೂಪಾಯಿ ಖರ್ಚಾಗಿದೆ ಎಂದು ಮೂಲಗಳು ತಿಳಿಸಿವೆ.

ವರ್ತೂರು ಹಾಗೂ ಮಾರತಹಳ್ಳಿ ಕಡೆಗೆ ಸಾಗಿದ ವಾಹನಗಳು ಪ್ರಯೋಗಾರ್ಥವಾಗಿ ಪ್ರಾರಂಭವಾದ ಅಂಡರ್‌ಪಾಸ್ ಹಾಯ್ದು ಹೋದವು. ಕುಂದಲಹಳ್ಳಿ ಅಂಡರ್‌ಪಾಸ್ ಬಳಿ ಸಿಗ್ನಲ್‌ನಲ್ಲಿ ನಿಲ್ಲಬೇಕಾದ ಅವಶ್ಯಕತೆ ಇರಲಿಲ್ಲ.

ಅಣ್ಣ–ತಂಗಿಯ ಸಾಧನೆಗೆ ಅಡ್ಡಿಯಾಗದ ಅಂಧತ್ವ

ಪಿಯುಸಿ, ಎಸ್ಸೆಸ್ಸೆಲ್ಸಿ: ಬೆರಗು ಮೂಡಿಸಿದ ಕಿರಣ್– ದೀಪಾ

• ಬಾಲಕೃಷ್ಣ ಪಿ.ಎಚ್.

ದಾವಣಗೆರೆ: 'ಹುಟ್ಟಿನಿಂದಲೇ ಹೊರಗಣ್ಣು ಕಾಣದಿದ್ದರೂ, ಒಳಗಣ್ಣಿಗೆ ಕತ್ತಲೆ ಕವಿದಿಲ್ಲ' ಎಂಬುದನ್ನು ಈ ಅಣ್ಣ–ತಂಗಿ ಸಾಧಿಸಿ ತೋರಿಸಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅಣ್ಣ ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತಂಗಿ ಶೇ 95ಕ್ಕಿಂತ ಅಧಿಕ ಅಂಕಗಳಿಸಿ ಬೆರಗು ಮೂಡಿಸಿದ್ದಾರೆ.

ಜಿಲ್ಲೆಯ ಜಗಳೂರು ತಾಲ್ಲೂಕಿನ ದೊಣೆಹಳ್ಳಿಯ ತಿಪ್ಪೇಸ್ವಾಮಿ ಮತ್ತು ಪವಿತ್ರಾ ದಂಪತಿಯ ಅಂಧ ಮಕ್ಕಳಾದ ಜಿ.ಟಿ. ಕಿರಣ್ ಮತ್ತು ಜಿ.ಟಿ. ದೀಪಾ ಈ ಸಾಧನೆ ಮಾಡಿದವರು.

ದಾವಣಗೆರೆಯ ಅಥಣಿ ಸಂಯುಕ್ತ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಯಾದ ಜಿ.ಟಿ. ಕಿರಣ್ ಈ ಬಾರಿಯ ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ 573 (ಶೇ 95.5) ಅಂಕ ಗಳಿಸಿದ್ದು, ದಾವಣಗೆರೆ ಅಂಧ ಮಕ್ಕಳ ಶಾಲೆಯ ವಿದ್ಯಾರ್ಥಿನಿಯಾಗಿರುವ ಜಿ.ಟಿ. ದೀಪಾ ಇತ್ತೀಚೆಗೆ ಪ್ರಕಟವಾದ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶದಲ್ಲಿ 601 (ಶೇ 96.16) ಅಂಕ ಗಳಿಸಿದ್ದಾರೆ.

'ತಂದೆ, ತಾಯಿಯ ಕಾಳಜಿ, ಶಿಕ್ಷಕರ ಪ್ರೋತ್ಸಾಹ ಮತ್ತು ಸ್ನೇಹಿತರ ಸಹಕಾರದಿಂದ ಇಷ್ಟು ಅಂಕ ಗಳಿಸಲು ಸಾಧ್ಯವಾಗಿದೆ. ವಿಜ್ಞಾನ ವಿಭಾಗದ ಪ್ರಥಮ ಪಿಯುಸಿ ಓದುತ್ತಿರುವ ಕುಸುಮಾ ಎಂಬ ವಿದ್ಯಾರ್ಥಿನಿ ನನಗೆ ಪರೀಕ್ಷೆ ಬರೆಯಲು ಸಹಕರಿಸಿದರು. ನಾನು ಹೇಳಿದ ಉತ್ತರಗಳನ್ನು ಬರೆಯಲು ಅವರು ಸಹಾಯ ಮಾಡಿದ್ದರು. ನನ್ನ ಸ್ನೇಹಿತರು ಯಾವಾಗಲೂ ಪಠ್ಯದ ಬಗ್ಗೆ ಚರ್ಚಿಸುತ್ತಿದ್ದರು. ಎಲ್ಲ ಪಾಠವನ್ನು ಚೆನ್ನಾಗಿ ಕೇಳಿಸಿಕೊಳ್ಳುತ್ತಿದ್ದೆ. ರಾತ್ರಿ ಮಾತ್ರ ಓದುತ್ತಿದ್ದೆ' ಎಂದು ಕಿರಣ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.



ಜಿ.ಟಿ. ಕಿರಣ್ ಮತ್ತು ಜಿ.ಟಿ. ದೀಪಾ

'ಮುಂದೆ ಬಿ.ಎ. ಓದಬೇಕು. ಬಳಿಕ ಯುಪಿಎಸ್‌ಸಿ ಪರೀಕ್ಷೆ ಪಾಸ್ ಮಾಡಿ ಐಎಎಸ್ ಅಧಿಕಾರಿಯಾಗಿ ಜನರ ಸೇವೆ ಮಾಡಬೇಕು. ಜೀವನದ ಸವಾಲುಗಳನ್ನು ಗೆಲ್ಲಬೇಕು' ಎಂದು ಅವರು ತಮ್ಮ ಕನಸುಗಳನ್ನು ಬಿಚ್ಚಿಟ್ಟರು.

'ಅಪ್ಪ, ಅಮ್ಮ, ಶಿಕ್ಷಕರು ಮಾತ್ರವಲ್ಲದೆ, ಅಣ್ಣನ ಪ್ರೋತ್ಸಾಹದಿಂದ ನನಗೆ ಶೇ 96ರಷ್ಟು ಅಂಕ ಪಡೆಯಲು ಸಾಧ್ಯವಾಗಿದೆ. ಪಾಠದ ಜತೆಗೆ ಹಿಂದೂಸ್ತಾನಿ ಸಂಗೀತವನ್ನೂ ಅಭ್ಯಸಿಸುತ್ತಿದ್ದೇನೆ. ಶೇ 87 ಅಂಕ ಪಡೆದು ಜೂನಿಯರ್ ಪಾಸ್ ಮಾಡಿದ್ದೇನೆ. ಪಿಯುಸಿ ಬಳಿಕ ಬಿ.ಎ. ಪದವಿ ಪಡೆಯಬೇಕು. ಜತೆಗೆ ಸಂಗೀತದಲ್ಲಿ ಸಾಧನೆ ಮಾಡಬೇಕು ಎಂಬ ಆಸೆ ಇಟ್ಟುಕೊಂಡಿದ್ದೇನೆ' ಎಂದು ಸೋದರಿ ದೀಪಾ ತಿಳಿಸಿದರು.

> **ಕಿರಣ್ ಪ್ರತಿಭಾವಂತ. ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ್ದಾನೆ. ಅವನ ತಂಗಿಯೂ ಓದಿನಲ್ಲಿ ಮುಂದಿದ್ದಾಳೆ**
>
> **ಡಯಾನಾ ದಿವ್ಯಾ,** ಪ್ರಾಂಶುಪಾಲರು, ಅಥಣಿ ಸಂಯುಕ್ತ ಪದವಿಪೂರ್ವ ಕಾಲೇಜು, ದಾವಣಗೆರೆ

'ಮಕ್ಕಳು ಮೊದಲು ಬೆಳಗಾವಿಯ ಶಾಲೆಯಲ್ಲಿ ಓದುತ್ತಿದ್ದರು. ನಂತರ ಅವರಿಗಾಗಿಯೇ ದಾವಣಗೆರೆಯಲ್ಲಿ ಮನೆ ಮಾಡಿ, ಅಂಧ ಮಕ್ಕಳ ಶಾಲೆಗೆ ಸೇರಿಸಿದೆವು. ಇಲ್ಲಿ ಬ್ರೈಲ್ ಲಿಪಿಯ ಸಹಾಯದೊಂದಿಗೆ ಅಭ್ಯಾಸ ಮಾಡಿದ್ದಾರೆ. ಕಿರಣ್ ಕಠಿಣ ಪರಿಶ್ರಮಿ. ಪಾಠ ಅರ್ಥ ಆಗುವಲ್ಲಿ ಗೊಂದಲ ಮೂಡಿದಾಗ ಶಿಕ್ಷಕರು ಪರಿಹರಿಸುತ್ತಿದ್ದರು. ಸ್ನೇಹಿತರ ಜತೆಗೂ ಚರ್ಚಿಸುತ್ತಿದ್ದ. ತಂಗಿಗೂ ಹೇಳಿಕೊಡುತ್ತಿದ್ದ. ದೀಪಾ ಕೂಡ ಅಣ್ಣನ ದಾರಿಯಲ್ಲೇ ಸಾಗುತ್ತಿದ್ದಾಳೆ. ಅವರಿಬ್ಬರೂ ಬಯಸಿದ್ದನ್ನು ಸಾಧಿಸಲು ಪ್ರೋತ್ಸಾಹ ನೀಡುತ್ತೇವೆ' ಎಂದು ಭರಮಸಮುದ್ರದಲ್ಲಿ ಶಿಕ್ಷಕರಾಗಿರುವ ತಂದೆ ತಿಪ್ಪೇಸ್ವಾಮಿ, ಗೃಹಿಣಿಯಾಗಿರುವ ತಾಯಿ ಪವಿತ್ರಾ ಹೇಳಿದರು.

ಕೆರೆ ಆವರಣದಲ್ಲಿ ಪೂರ್ಣಗೊಂಡ ಕಾಮಗಾರಿಗಳ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಇಲ್ಲಿನ ಅಮಾನಿ ಕೆರೆಯ ಕರಗಮಂಟಪದ ಆವರಣದಲ್ಲಿ ಶಾಸಕರ ವಿಶೇಷ ಅನುದಾನದ ಅಡಿಯಲ್ಲಿ ಪೂರ್ಣಗೊಂಡಿರುವ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಶಾಸಕ ಎಸ್.ಆರ್. ವಿಶ್ವನಾಥ್ ಲೋಕಾರ್ಪಣೆ ಮಾಡಿದರು.

ನಂತರ ಮಾತನಾಡಿದ ಅವರು, ಕೆರೆಯ ಸಂಪೂರ್ಣ ಚಿತ್ರಣ ಬದಲಾಗಿ, ನಗರದ ಪ್ರಸಿದ್ಧ ಪ್ರವಾಸಿ ತಾಣವಾಗಿ ಪರಿವರ್ತನೆಗೊಂಡಿದೆ ಎಂದರು.

ಜಲಸಿರಿ ಪ್ರತಿಷ್ಠಾನದ ಅಧ್ಯಕ್ಷ ಅ.ಬ. ಶಿವಕುಮಾರ್, ಕಾರ್ಯಾಧ್ಯಕ್ಷ ಮು.ಕೃಷ್ಣಮೂರ್ತಿ, ಪಾಲಿಕೆ ಮಾಜಿ ಸದಸ್ಯರಾದ ಎಂ.ಸತೀಶ್, ಕೆಂಪೇಗೌಡ, ಪದ್ಮಾವತಿ ಅಮರನಾಥ್, ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಸುಧಾಕರರೆಡ್ಡಿ, ರಾಜೇಂದ್ರನಾಯ್ಕ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗಳಾದ ನಂದೀಶ್, ರಾಮಸಂಜೀವಯ್ಯ ಮತ್ತಿತರರು ಉಪಸ್ಥಿತರಿದ್ದರು.



ಶಾಸಕ ಎಸ್‌ಆರ್‌.ವಿಶ್ವನಾಥ್‌, ಯಲಹಂಕ ಕೆರೆಯ ಕರಗಮಂಟಪದ ಆವರಣದಲ್ಲಿ ನಿರ್ಮಿಸಿರುವ ಧ್ಯಾನ ಮಂದಿರವನ್ನು ಉದ್ಘಾಟಿಸಿದರು. ಜಲಸಿರಿ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಮು.ಕೃಷ್ಣಮೂರ್ತಿ, ಬಿಜೆಪಿ ಮುಖಂಡ ವೈ.ಜಿ.ವಸಂತಕುಮಾರ್ ಮತ್ತಿತರರು ಇದ್ದರು

ಈದ್ಗಾ: ಯೋಗ ದಿನಕ್ಕೆ ಅನುಮತಿ ಇಲ್ಲ

ಬೆಂಗಳೂರು: ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಯೋಗ ದಿನ ಆಚರಿಸಲು ಕೋರಿದ್ದ ಮನವಿಯನ್ನು ಬಿಬಿಎಂಪಿ ತಿರಸ್ಕರಿಸಿದೆ.

'1 ಎಕರೆ 10 ಗುಂಟೆ ಜಾಗಕ್ಕೆ ಹಕ್ಕು ಮಂಡಿಸಿ ರಾಜ್ಯ ವಕ್ಫ್ ಮಂಡಳಿ ದಾಖಲೆಗಳನ್ನು ಸಲ್ಲಿಸಿದೆ. ಅದರ ಪರಿಶೀಲನೆಗಾಗಿ ಬಿಬಿಎಂಪಿ ಕಾನೂನು ವಿಭಾಗಕ್ಕೆ ಸಲ್ಲಿಸಲಾಗಿದೆ. ಆಸ್ತಿ ಯಾರದ್ದು ಎಂಬುದು ಖಚಿತವಾದ ಬಳಿಕ ಬೇರೆ ಕಾರ್ಯಕ್ರಮಗಳಿಗೆ ಅವಕಾಶ ನೀಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಪಾಲಿಕೆ ಜಂಟಿ ಆಯುಕ್ತ ಎಸ್.ಎಂ. ಶ್ರೀನಿವಾಸ್ ತಿಳಿಸಿದರು.

ಶ್ರೀರಾಮ ಸೇನೆ, ವಿಶ್ವ ಸನಾತನ ಪರಿಷದ್, ವಂದೇ ಮಾತರಂ ಸಮಾಜ ಸೇವಾ ಸಂಸ್ಥೆಗಳು ಕಾರ್ಯಕ್ರಮ ನಡೆಸಲು ಅನುಮತಿ ಕೋರಿ ಮನವಿ ಸಲ್ಲಿಸಿದ್ದವು. ಅನುಮತಿ ನೀಡದಿದ್ದರೆ ಹೈಕೋರ್ಟ್ ಮೆಟ್ಟಿಲೇರುವುದಾಗಿ ಎಚ್ಚರಿಕೆ ನೀಡಿದ್ದವು.

ಯೋಗ ದಿನ ಆಚರಣೆಗೆ ಅನುಮತಿ ನೀಡದಿರಲು ನಿರ್ಧರಿಸಲಾಗಿದೆ. ಉಳಿದ ಎರಡು ಮನವಿಗಳ ಬಗ್ಗೆ ಮುಂದಿನ ದಿನಗಳಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಶ್ರೀನಿವಾಸ್ ಹೇಳಿದರು.

ಪರಿಷತ್ ಚುನಾವಣೆ: ಬಿಜೆಪಿಗೆ ಐದು ಸ್ಥಾನ, ಕಾಂಗ್ರೆಸ್‌ಗೆ ಹಿನ್ನಡೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನ ಪರಿಷತ್ತಿನ 10 ಸ್ಥಾನಗಳಿಗೆ ಸೋಮವಾರ ನಡೆದ ಚುನಾವಣೆಯಲ್ಲಿ ಆಡಳಿತಾರೂಢ ಮಿತ್ರ ಪಕ್ಷಗಳಿಗೆ ಮತ್ತೊಮ್ಮೆ ಸಡ್ಡು ಹೊಡೆದಿರುವ ಬಿಜೆಪಿ, ಎಲ್ಲಾ ಐದು ಸ್ಥಾನಗಳನ್ನು ಗೆದ್ದುಕೊಂಡಿದೆ.

ಎನ್‌ಸಿಪಿ ಮತ್ತು ಶಿವಸೇನಾಗಳು ತಲಾ ಎರಡು ಸ್ಥಾನಗಳನ್ನು ಗಳಿಸಿದ್ದರೆ, ಕಾಂಗ್ರೆಸ್‌ಗೆ ಒಂದು ಸ್ಥಾನ ಗೆಲ್ಲಲಷ್ಟೇ ಸಾಧ್ಯವಾಗಿದೆ.

ಎಂಟು ಅಭ್ಯರ್ಥಿಗಳು ಗೆಲುವಿಗೆ ಅಗತ್ಯವಾಗಿ ಬೇಕಾಗಿದ್ದ 26 ಮತಗಳನ್ನು ಮೊದಲ ಪ್ರಾಶಸ್ತ್ಯದ ಮತದಲ್ಲೇ ಗಳಿಸಿಕೊಂಡರು. ಆದರೆ ಆಡಳಿತಾರೂಢ ಪಕ್ಷದ ಭಾಗವಾದ ಕಾಂಗ್ರೆಸ್‌ನ ಇಬ್ಬರು ಅಭ್ಯರ್ಥಿಗಳು ಮೊದಲ ಪ್ರಾಶಸ್ತ್ಯದ ಮತಗಳಿಂದ ಗೆಲುವು ಸಾಧಿಸಲು ವಿಫಲರಾದರು. ಎರಡನೇ ಪ್ರಾಶಸ್ತ್ಯದ ಮತ ಎಣಿಕೆ ಬಳಿಕ ಬಿಜೆಪಿಯ ಐದನೇ ಅಭ್ಯರ್ಥಿ ಪ್ರಸಾದ್ ಲಾಡ್ ಮತ್ತು ಕಾಂಗ್ರೆಸ್ ಅಭ್ಯರ್ಥಿ ಭಾಯ್ ಪ್ರತಾಪ್ ಗೆಲುವು ಸಾಧಿಸಿದರು.

ಬಿಜೆಪಿಯ ಲಾಡ್ ಅವರಿಗೆ ಇತರ ಪಕ್ಷಗಳ ಅಡ್ಡ ಮತದಾನದಿಂದ ಲಾಭವಾಗಿದ್ದು, ಮಹಾರಾಷ್ಟ್ರ ವಿಕಾಸ ಅಘಾಡಿ (ಎಂವಿಎ) ಮೈತ್ರಿಕೂಟದಲ್ಲಿ ಮತ್ತೊಮ್ಮೆ ಬಿರುಕು ಕಾಣಿಸಿಕೊಂಡಿದೆ.

ಡಾಂಬರಿನಿಂದ ಹೊಳೆಯುತ್ತಿರುವ ಕೊಮ್ಮಘಟ್ಟ ಸುತ್ತಮುತ್ತಲ ರಸ್ತೆಗಳು

ಪ್ರಧಾನಿ ಬಂದ ಹಾದಿಗಷ್ಟೇ ಹೊಳಪೇಕೆ?

• ವಿಜಯಕುಮಾರ್ ಎಸ್.ಕೆ.



ಕೊಮ್ಮಘಟ್ಟ ರಸ್ತೆ ಅಭಿವೃದ್ಧಿಗೊಂಡು ನಳನಳಿಸುತ್ತಿರುವುದು —ಪ್ರಜಾವಾಣಿ ಚಿತ್ರಗಳು/ರಂಜು ಪಿ.

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಬಂದು ಹೋದ ಬೆಂಗಳೂರಿನ ಹಾದಿಗಳೆಲ್ಲವೂ ಫಳ ಫಳನೆ ಹೊಳೆಯುತ್ತಿವೆ. ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಿ ಬಣ್ಣ ಬಳಿದು ಸಿಂಗರಿಸುವ ಕಾರ್ಯವನ್ನು ವೇಗವಾಗಿ ಮಾಡಲು ಸಾಧ್ಯವಿದೆ ಎಂಬುದನ್ನು ಸರ್ಕಾರ ಅದರಲ್ಲೂ ಬಿಡಿಎ ಸಾಬೀತುಪಡಿಸಿದೆ. ಈ ರೀತಿಯ ಅಭಿವೃದ್ಧಿ ಪ್ರಧಾನಿ ಮೆಚ್ಚಿಸಲಷ್ಟೇ ಸೀಮಿತ ಆಗದೆ, ಇದನ್ನೇ ಮಾದರಿಯಾಗಿ ಪರಿಗಣಿಸುವುದು ಸೂಕ್ತ ಎಂಬ ಅಭಿಪ್ರಾಯ ಬೆಂಗಳೂರಿನ ನಾಗರಿಕರಲ್ಲಿ ವ್ಯಕ್ತವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ನಗರದಲ್ಲಿ ಹಾದು ಹೋದ ರಸ್ತೆಗಳನ್ನು ಕಂಡು ಸ್ಥಳೀಯರೇ ಬೆಕ್ಕಸ ಬೆರಗಾಗಿದ್ದಾರೆ. ಬೆಂಗಳೂರಿನ ಹಲವು ಬಡಾವಣೆಗಳ ಕಸ ಸುರಿಯುವ ತಾಣವಾಗಿದ್ದ ರಸ್ತೆಯ ವಾತಾವರಣ ದಿಢೀರ್ ಬದಲಾಗಿದೆ.

ಜಲ್ಲಿ, ಮರಳು, ಡಾಂಬರ್, ಸಿಮೆಂಟ್ ಹೊತ್ತ ಟಿಪ್ಪರ್‌ಗಳು, ಅವುಗಳನ್ನು ಹರಡಿ ಅರೆಯಲು ಜೆಸಿಬಿ ಮತ್ತು ರೋಲರ್‌ಗಳು ಬಂದು ಏಕಾಏಕಿ ಕಾಮಗಾರಿ ಆರಂಭಿಸಿದವು. ಕಾರ್ಯಕ್ರಮ ನಡೆಯುವ ಜಾಗಕ್ಕೆ ತೆರಳುವ ರಸ್ತೆ, ಅಲ್ಲಿಂದ ಹೆಲಿಪ್ಯಾಡ್‌ಗೆ ಪ್ರಧಾನಿ ಸಾಗುವ ರಸ್ತೆಗಳೆಲ್ಲವೂ ಡಾಂಬರ್ ಕಂಡು, ಬಣ್ಣ ಬಳಿಸಿಕೊಂಡವು. ಅಕ್ಕ–ಪಕ್ಕದಲ್ಲಿ ಪೊದೆಗಳು ಮಾಯವಾಗಿ ಪಾದಚಾರಿ ಮಾರ್ಗಗಳು ಸುಂದರವಾದವು.

ಕಳೆದ ವಾರ ಈ ರಸ್ತೆಯಲ್ಲಿ ಸಾಗಿದವರು ಅದೇ ರಸ್ತೆಯಲ್ಲಿ ಈಗ ಮತ್ತೆ ಹೋದರೆ ಗುರುತಿಸುವುದೇ ಕಷ್ಟವಾಗುವಷ್ಟರ ಮಟ್ಟಿಗೆ ಅಭಿವೃದ್ಧಿ ಕಂಡಿವೆ. ಈ ರೀತಿ ಅಭಿವೃದ್ಧಿಯ ವೇಗವನ್ನು ಕಂಡು ಬೆರಗಾಗಿರುವ ನಗರದ ಜನ, 'ನಮ್ಮ ಬಡಾವಣೆ ಕಡೆಗೂ ಪ್ರಧಾನಿ ಬರಬಾರದಿತ್ತೆ' ಎಂದು ವ್ಯಂಗ್ಯವಾಡುತ್ತಾರೆ.

ರಸ್ತೆ ಅಭಿವೃದ್ಧಿಯನ್ನು ಇಷ್ಟೊಂದು ವೇಗವಾಗಿ ಮಾಡುವ ಸಾಮರ್ಥ್ಯ ಸರ್ಕಾರಕ್ಕೆ ಇದೆ ಎಂಬುದು ಜನರಿಗೆ ಗೊತ್ತಾದಂತೆ ಆಗಿದೆ. 'ರಸ್ತೆ ಗುಂಡಿಗಳ ನಡುವೆ ನರಳುವ ಜನರ ಕಷ್ಟ ದೂರ ಮಾಡಲು ಇದೇ ರೀತಿಯಲ್ಲಿ ವೇಗವಾಗಿ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಬಾರದೇಕೆ' ಎಂದು ಪ್ರಶ್ನಿಸುತ್ತಿದ್ದಾರೆ. 'ಬೆಂಗಳೂರನ್ನು 'ಬ್ರ್ಯಾಂಡ್' ಆಗಿ ಬದಲಿಸುವ ಶಪಥವನ್ನು ಪ್ರಧಾನಿ ಬಂದು ಹೋದ ದಿನವೇ ಸರ್ಕಾರ ಕೈಗೊಳ್ಳಲಿ. ಕೊಮ್ಮಘಟ್ಟ ಸುತ್ತಮುತ್ತಲ ರಸ್ತೆ ಅಭಿವೃದ್ಧಿ ಇಡೀ ಬೆಂಗಳೂರಿಗೆ ಮಾದರಿಯಾಗಲಿ' ಎಂದು ಒತ್ತಾಯಿಸಿದ್ದಾರೆ.

ನಿಮ್ಮ ಪ್ರದೇಶದ ಸಮಸ್ಯೆ ತಿಳಿಸಿ

40 ವರ್ಷಗಳಿಂದ ಆಗದ ಅಭಿವೃದ್ಧಿಯನ್ನು 40 ತಿಂಗಳಲ್ಲಿ ಮಾಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿದ್ದಾರೆ. ಬೆಂಗಳೂರಿನಲ್ಲಿ ನಿಮ್ಮ ಪ್ರದೇಶದ ಏನೆಲ್ಲಾ ಅಭಿವೃದ್ಧಿ ಬಾಕಿ ಇವೆ, ಜ್ವಲಂತ ಸಮಸ್ಯೆಗಳು ಏನೇನಿವೆ ಎಂಬುದನ್ನು ಸಾರ್ವಜನಿಕರು 'ಪ್ರಜಾವಾಣಿ' ಜತೆ ಹಂಚಿಕೊಳ್ಳಿ. 9606038256–ಈ ಸಂಖ್ಯೆಗೆ ವಾಟ್ಸ್‌ಆ್ಯಪ್ ಮೂಲಕ ಸಂಕ್ಷಿಪ್ತವಾಗಿ ವಿವರ ಕಳುಹಿಸಿ. ಸಮಸ್ಯೆ ಬರೆಯುವುದರ ಜತೆಗೆ ನಿಮ್ಮದೊಂದು ಪಾಸ್‌ಪೋರ್ಟ್ ಅಳತೆಯ ಫೋಟೊ ಕೂಡ 'ಅಟ್ಯಾಚ್' ಮಾಡಿ ಕಳುಹಿಸಿ.



ಪ್ರಧಾನಿ ನರೇಂದ್ರ ಮೋದಿ ಹಾದು ಹೋದ ಕೆಂಗೇರಿ ಬಸ್ ನಿಲ್ದಾಣದ ಎದುರಿನ ರಸ್ತೆಯಲ್ಲಿ ಹೊಂಡವೊಂದು ನಿರ್ಮಾಣವಾಗಿ ಸಾರ್ವಜನಿಕರು ಪರದಾಡುತ್ತಿದ್ದ ದೃಶ್ಯ ಸೋಮವಾರ ಕಂಡುಬಂತು

'ಹಲವು ಬಾರಿ ಮನವಿ ಸಲ್ಲಿಸಿದ್ದೆವು'



ಕೊಮ್ಮಘಟ್ಟ ರಸ್ತೆ ಅಭಿವೃದ್ಧಿ ಮಾಡುವಂತೆ ಹಲವು ಬಾರಿ ಮನವಿ ಮಾಡಿದ್ದೆವು. ಬಿಡಿಎ ಆಡಳಿತ ಮಂಡಳಿ ತಲೆ ಕೆಡಿಸಿಕೊಂಡೇ ಇರಲಿಲ್ಲ. ಕಾವೇರಿ 5ನೇ ಹಂತದ ಯೋಜನೆಗಾಗಿ ಅಗೆದು, ರಸ್ತೆಗಳಿಗೆ ಪೈಪ್‌ಲೈನ್ ಅಳವಡಿಸಿದ ಬಳಿಕ ಅಭಿವೃದ್ಧಿಪಡಿಸಿಯೇ ಇರಲಿಲ್ಲ. ಪಕ್ಕದಲ್ಲೇ ಇರುವ ವಿಶ್ವೇಶ್ವರಯ್ಯ ಲೇಔಟ್‌ನ 4ನೇ ಹಂತದಲ್ಲಿ ರಸ್ತೆ ಗುಂಡಿಗೆ ಬಿದ್ದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದರು. ಆ ರಸ್ತೆ ಈಗಲೂ ಅಭಿವೃದ್ಧಿ ಕಂಡಿಲ್ಲ. ನರೇಂದ್ರ ಮೋದಿಯವರು ಬಂದು ಹೋದ ಕಾರಣಕ್ಕೆ ಎರಡೇ ದಿನಗಳಲ್ಲಿ ರಸ್ತೆಯ ಸ್ಥಿತಿ ಬದಲಾಗಿದೆ. ಇದೇ ರೀತಿ ಸುತ್ತಮುತ್ತಲ ರಸ್ತೆಗಳೂ ಅಭಿವೃದ್ಧಿಯಾದರೆ ಈ ಭಾಗದ ಜನರ ಸಮಸ್ಯೆಗೆ ಪರಿಹಾರ ದೊರೆತಂತೆ ಆಗಲಿದೆ.

ಸೂರ್ಯಕಿರಣ್, ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ವಕ್ತಾರ

'ಜನರ ಸಮಸ್ಯೆಗಳು ಸರ್ಕಾರಕ್ಕೆ ಕಾಣಿಸುವುದೇ ಇಲ್ಲ'



ದೇಶದ ಪ್ರಧಾನಿ ಬಂದಾಗ ರಸ್ತೆಗಳನ್ನು ಅಭಿವೃದ್ಧಿಪಡಿಸಿರುವುದು ಸಂತಸದ ವಿಷಯ. ಅದೇ ರೀತಿಯ ಬೇರೆ ರಸ್ತೆಗಳಿಗೂ ಆದ್ಯತೆ ಸಿಗಬೇಕಲ್ಲವೇ? ಮಳೆ ಬಂದಾಗಲೆಲ್ಲಾ ಪ್ರವಾಹ ನೀರು ಸಾವಿರಾರು ಮನೆಗಳಿಗೆ ನುಗ್ಗುತ್ತಿವೆ. ಪೀಣ್ಯ ಕೈಗಾರಿಕಾ ಪ್ರದೇಶ ಇದೆ. ಹತ್ತಾರು ಅಪಾರ್ಟ್‌ಮೆಂಟ್‌ಗಳು, ದೊಡ್ಡ ದೊಡ್ಡ ವ್ಯಾಪಾರ ಮಳಿಗೆಗಳು ತಲೆ ಎತ್ತುತ್ತಿವೆ. ಅತ್ತ ಯಾರೂ ನೋಡುವುದೇ ಇಲ್ಲ. ರಸ್ತೆ ಗುಂಡಿ ಸಂಪೂರ್ಣ ಮುಚ್ಚಲಾಗಿದೆ ಎಂದು ಬಿಬಿಎಂಪಿ ಆಯುಕ್ತರು ಹೇಳುತ್ತಿದ್ದಾರೆ. ಆದರೆ, ವಾಸ್ತವದಲ್ಲಿ ಗುಂಡಿಗಳಲ್ಲಿ ಜನ ಪರದಾಡುತ್ತಿದ್ದಾರೆ. ಬಂಡಿ ಜಾಡಿನ ರೀತಿಯ ರಸ್ತೆಗಳು ನಮ್ಮ ಕ್ಷೇತ್ರದಲ್ಲಿವೆ. ಈ ಎಲ್ಲಾ ಸಮಸ್ಯೆಗಳ ಬಗ್ಗೆ ನಾಲ್ಕು ವರ್ಷಗಳಿಂದ ಹೇಳುತ್ತಿದ್ದೇನೆ. ವಿಧಾನಸಭೆಯಲ್ಲೂ ಪ್ರಸ್ತಾಪಿಸಿ ಮುಖ್ಯಮಂತ್ರಿ ಅವರ ಗಮನಕ್ಕೆ ತಂದಿದ್ದೇನೆ. ಪೀಣ್ಯ ಬಳಿಯ ಶಿವಕುಮಾರಸ್ವಾಮಿ ಮೇಲ್ಸೇತುವೆ 6 ತಿಂಗಳಿಂದ ದುರಸ್ತಿಯಾಗಿಲ್ಲ. ಕೊಮ್ಮಘಟ್ಟ ಸುತ್ತಮುತ್ತ ಎರಡೇ ದಿನಗಳಲ್ಲಿ ರಸ್ತೆ ದುರಸ್ತಿಯಾಗಿವೆ. ಅದಕ್ಕೆ ಬೇಸರವಿಲ್ಲ, ಬೇರೆ ಪ್ರದೇಶದ ಸಮಸ್ಯೆಗಳ ಪರಿಹಾರವೂ ಇಷ್ಟೇ ವೇಗದಲ್ಲಿ ಆಗಬಾರದೇಕೆ?

ಆರ್.ಮಂಜುನಾಥ್, ದಾಸರಹಳ್ಳಿ ಶಾಸಕ (ಜೆಡಿಎಸ್)

'ನಿಜವಾದ ಅಭಿವೃದ್ಧಿ ಬೇಕಿಲ್ಲ'



ಪ್ರಧಾನಿ ಅವರು ಬಂದು ಹೋದ ರಸ್ತೆಗಳು ಅಭಿವೃದ್ಧಿ ಕಂಡಿವೆ. ಬೇರೆ ರಸ್ತೆಗಳ ಅಭಿವೃದ್ಧಿ ಬಿಜೆಪಿ ಸರ್ಕಾರಕ್ಕೆ ಬೇಕಿಲ್ಲ. ಏಕೆಂದರೆ ಅಭಿವೃದ್ಧಿ ಕಾಮಗಾರಿ ನಡೆಸಿ ಜನರಿಂದ ಮತ ಪಡೆಯಬೇಕು ಎಂಬ ಮನಃಸ್ಥಿತಿ ಬಿಜೆಪಿಗೆ ಇಲ್ಲ. ಮತ ಪಡೆಯಲು ಬೇರೆ ದಾರಿಗಳನ್ನು ಹುಡುಕಿಕೊಳ್ಳುತ್ತಿದೆ. ಧರ್ಮದ ಹೆಸರಿನಲ್ಲಿ ಜನರ ಭಾವನೆಗಳನ್ನು ಕೆಣಕಿ ಮತ ಹಾಕಿಸಿಕೊಳ್ಳಬೇಕು ಎಂದುಕೊಂಡಿದ್ದಾರೆ. ನಿಜವಾದ ಅಭಿವೃದ್ಧಿ ಬೇಕು ಎಂಬುದನ್ನು ಜನ ಅರ್ಥ ಮಾಡಿಕೊಳ್ಳಬೇಕು. ಬೆಂಗಳೂರಿನ ಅಭಿವೃದ್ಧಿಗೆ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನು ನಾನು ಬೆಂಗಳೂರು ಉಸ್ತುವಾರಿ ಸಚಿವನಾಗಿದ್ದಾಗ ಮಾಡಿ ತೋರಿಸಿದೆ. ಹಲವು ಗ್ರೇಡ್ ಸಪರೇಟರ್‌ಗಳನ್ನು ನಿರ್ಮಿಸಲಾಯಿತು. ಅದಕ್ಕೆ ಬೇಕಿರುವ ಭೂಸ್ವಾಧೀನ ಪ್ರಕ್ರಿಯೆ ನಡೆಸಿ, ಹಣಕಾಸಿನ ತೊಂದರೆ ಆಗದಂತೆ ಪ್ರತ್ಯೇಕ ಖಾತೆಗಳನ್ನು ತೆರೆದು ಅಭಿವೃದ್ಧಿಪಡಿಸಿದೆವು. ಈ ರೀತಿಯ ಅಭಿವೃದ್ಧಿಪರ ಆಶಯ ಬಿಜೆಪಿಗೆ ಇಲ್ಲ. ಪ್ರಧಾನಿ ಅವರು ಬಂದು ಹೋಗಿರುವ ದಾರಿಗಷ್ಟೇ ಅವರ ಅಭಿವೃದ್ಧಿ ಸೀಮಿತ.

ರಾಮಲಿಂಗಾರೆಡ್ಡಿ, ಬಿಟಿಎಂ ಲೇಔಟ್ ಶಾಸಕ(ಕಾಂಗ್ರೆಸ್)

ವೆಂಕಟೇಶ್ವರ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ


ಅರ್ಬಿನ್ ತಾಜ್


ಸಿಂಚನಾ


ಅಖಿಲಾ


ಸಿರೀಷಾ


ರಕ್ಷಿತಾ

ಕೆ.ಆರ್.ಪುರ: ವೆಂಕಟೇಶ್ವರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಅಖಿಲಾ ಎಂ. ದ್ವಿತೀಯ ಪಿಯು ವಿಜ್ಞಾನ ವಿಭಾಗದಲ್ಲಿ 593 (ಶೇ 98.83) ಅಂಕಗಳನ್ನು ಪಡೆದು ರಾಜ್ಯಕ್ಕೆ ಆರನೇ ಸ್ಥಾನ ಪಡೆದಿದ್ದಾರೆ.

ಸಿ.ಕೆ. ಸಿಂಚನಾ ವಿಜ್ಞಾನ ವಿಭಾಗದಲ್ಲಿ 589 (ಶೇ 98.17) ಅಂಕ, ವಾಣಿಜ್ಯ ವಿಭಾಗದಲ್ಲಿ ಅರ್ಬಿನ್ ತಾಜ್ 582 (ಶೇ 97.83), ಎನ್. ಸಿರೀಷಾ 575 (ಶೇ 95.83), ಬಿ. ರಕ್ಷಿತಾ 573 (ಶೇ 95.50) ಅಂಕ ಪಡೆದಿದ್ದಾರೆ.

ವೆಂಕಟೇಶ್ವರ ಸಮೂಹ ವಿದ್ಯಾಸಂಸ್ಥೆಗಳ ಸಂಸ್ಥಾಪಕ ಡಾ.ಕೆ.ವಿ.ಮುನಿಸ್ವಾಮಿ, ನಿರ್ದೇಶಕ ಪ್ರೊ.ವಿ.ಎಂ.ರವಿ, ಪ್ರಾಂಶುಪಾಲ ಜಿ.ಇ.ಪ್ರಕಾಶ್ ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಪಿಯು: ತ್ರಿಶಾಗೆ 591 ಅಂಕ


ಪ್ರಕೃತಿ


ತ್ರಿಶಾ


ಲೀಲಾ

ಬೆಂಗಳೂರು: ಆರ್‌ವಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ತ್ರಿಶಾ ಚಂದ್ರಮೋಹನ್ ಅವರು ದ್ವಿತೀಯ ಪಿಯುಯಲ್ಲಿ 591 (ಶೇ 98.5) ಅಂಕ ಪಡೆದಿದ್ದಾರೆ.

ಯಲಹಂಕ ನ್ಯೂಟೌನ್ ಚೇತನಾ ಪಿಯು ಕಾಲೇಜಿನ ವಿದ್ಯಾರ್ಥಿನಿ ಎಂ.ಯು.ಪ್ರಕೃತಿ ಅವರು ವಿಜ್ಞಾನ ವಿಭಾಗದಲ್ಲಿ ಶೇ 96.5ರಷ್ಟು (579 ಅಂಕಗಳು) ಅಂಕ ಪಡೆದಿದ್ದಾರೆ.

ರಾಜಾಜಿನಗರದ ಎಸ್.ಜೆ.ಆರ್ ಪಿಯು ಕಾಲೇಜಿನ ಎನ್.ಲೀಲಾ ಅವರು ವಾಣಿಜ್ಯ ವಿಭಾಗದಲ್ಲಿ 588 (ಶೇ 98) ಅಂಕ ಗಳಿಸಿದ್ದಾರೆ.

ಅಸೆಂಟ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಅಪೂರ್ವ ಸಾಧನೆ


ನರೇಂದರ್ (ಶೇ 97.66)


ಸ್ಫೂರ್ತಿ (ಶೇ 95.3)


ವಿನುತಾ (ಶೇ 96.3)


ಆಕಾಶ್ (ಶೇ 96)


ನವೀನ್ (ಶೇ 96.3)


ಸುಷ್ಮಾ (ಶೇ 96)


ಶ್ರೀರಕ್ಷಾ ಎಸ್‌ ಪಿ (ಶೇ 97.3),


ಆನ್ಸಿನಾ ಶಿಬು (ಶೇ 96.6)


ಚೈತನ್ಯ ಎಲ್‌ಆರ್‌ (ಶೇ 97.3)


ಚೇತನ್ (ಶೇ 97.1)


ಕಾವ್ಯ (ಶೇ 96.1)


ಅಬೂಬಕರ್ ಸಿದ್ದಿಕ್ (ಶೇ 95.3)

ಪೀಣ್ಯ ದಾಸರಹಳ್ಳಿ: ಹಾವನೂರು ಬಡಾವಣೆಯ ಅಸೆಂಟ್ ಪದವಿಪೂರ್ವ ಕಾಲೇಜಿನ ಜಿ. ನರೇಂದರ್ ದ್ವಿತೀಯ ಪಿಯು ಪರೀಕ್ಷೆಯ ವಾಣಿಜ್ಯ ವಿಭಾಗದಲ್ಲಿ 586 ಅಂಕ ಪಡೆದಿದ್ದಾರೆ.

ಎಲ್.ಆರ್. ಚೈತನ್ಯ ಮತ್ತು ಎಸ್.ಪಿ. ಶ್ರೀರಕ್ಷಾ ಅವರು ವಿಜ್ಞಾನ ವಿಭಾಗದಲ್ಲಿ 584 ಅಂಕ, ಎಸ್. ಚೇತನ್ (ಶೇ 97.1), ಆನ್ಸಿನಾ ಶಿಬು (ಶೇ 96.6), ಕೆ.ವಿನುತಾ (ಶೇ96.3), ಆರ್. ನವೀನ್ (ಶೇ96.3), ಕೆ.ಕಾವ್ಯ (ಶೇ 96.1), ಜಿ. ಆಕಾಶ್ (ಶೇ 96), ಪಿ.ಆರ್.ಸುಷ್ಮಾ (ಶೇ 96), ಅಬೂಬಕರ್ ಸಿದ್ದಿಕ್ (ಶೇ 95.3), ಬಿ.ಸ್ಫೂರ್ತಿ (ಶೇ 95.3) ಉತ್ತಮ ಅಂಕ ಪಡೆದಿದ್ದಾರೆ.

ಸೆಷನ್ಸ್ ನ್ಯಾಯಾಲಯ ವಿಧಿಸಿದ್ದ ಜೀವಾವಧಿ ಶಿಕ್ಷೆ ಮಾರ್ಪಾಡು ಕೋರಿ ಹೈಕೋರ್ಟ್‌ಗೆ

ಮಹಿಳೆ ಕೊಲೆ: ಅಪರಾಧಿಗೆ ಬಿಡುಗಡೆ ಭಾಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯೊಬ್ಬರನ್ನು ಕೊಲೆ ಮಾಡಿದ ಆರೋಪದಡಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಆಟೊ ರಿಕ್ಷಾ ಚಾಲಕನ ಶಿಕ್ಷೆಯನ್ನು ಮಾರ್ಪಾಡು ಮಾಡಿರುವ ಹೈಕೋರ್ಟ್, ಈಗಾಗಲೇ ಏಳು ವರ್ಷ ಆರು ತಿಂಗಳು ಹದಿನಾರು ದಿನಗಳ ಜೈಲು ಶಿಕ್ಷೆ ಅನುಭವಿಸಿರುವ ಆತನ ಬಿಡುಗಡೆಗೆ ಆದೇಶಿಸಿದೆ.

'ಸೆಷನ್ಸ್ ನ್ಯಾಯಾಲಯ ವಿಧಿಸಿರುವ ಜೀವಾವಧಿ ಶಿಕ್ಷೆ ರದ್ದುಪಡಿಸಬೇಕು' ಎಂದು ಕೋರಿ ಬಿಲವಾರದಹಳ್ಳಿ ನಿವಾಸಿ ವಾಸಿಮ್ (30) ಹೈಕೋರ್ಟ್‌ಗೆ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಿದ್ದರು.

ಈ ಕುರಿತಂತೆ ನ್ಯಾಯಮೂರ್ತಿ ಕೆ.ಸೋಮಶೇಖರ್ ಮತ್ತು ನ್ಯಾಯಮೂರ್ತಿ ಶಿವಶಂಕರ ಅಮರಣ್ಣನವರ ಅವರಿದ್ದ ವಿಭಾಗೀಯ ನ್ಯಾಯಪೀಠ ಅರ್ಜಿದಾರರ ಮನವಿಯನ್ನು ಭಾಗಶಃ ಪುರಸ್ಕರಿಸಿದೆ.

'ಆರೋಪಿಗೆ ಮಹಿಳೆಯನ್ನು ಕೊಲೆ ಮಾಡುವ ಉದ್ದೇಶ ಇರಲಿಲ್ಲ. ಆಕೆಯ ಮಾತುಗಳಿಂದ ದಿಢೀರ್ ಪ್ರಚೋದನೆಗೆ ಒಳಗಾಗಿ ಕೆನ್ನೆಗೆ ಹೊಡೆದು ಕತ್ತು ಹಿಸುಕಿದ್ದಾರೆ. ಈ ವೇಳೆ ಆಕೆ ಮೃತಪಟ್ಟಿದ್ದಾಳೆ. ಹಾಗಾಗಿ, ಇದು ಪೂರ್ವನಿಯೋಜಿತ ಕೊಲೆ ಎಂದು ಹೇಳಲಾಗುವುದಿಲ್ಲ' ಎಂಬ ಅಭಿಪ್ರಾಯವನ್ನು ನ್ಯಾಯಪೀಠ ವ್ಯಕ್ತಪಡಿಸಿದೆ.

ಅಪರಾಧ ಸುದ್ದಿ

ಪ್ರಕರಣವೇನು?: ಫರೀದಾ ಬೀಬಿ ಎಂಬುವರಿಂದ ವಾಸಿಮ್ ₹ 20 ಸಾವಿರ ಸಾಲ ಪಡೆದಿದ್ದರು. ಸಾಲ ಪಡೆಯುವಾಗ ಖಾಲಿ ಪತ್ರಕ್ಕೆ ಸಹಿ ಹಾಕಿದ್ದರು. ನಂತರ ಆ ಪತ್ರವು ನಿಖಾನಾಮಾ (ಮದುವೆ ಒಪ್ಪಂದದ ಪತ್ರ) ಎಂದು ಪ್ರತಿಪಾದಿಸಿದ್ದ ಫರೀದಾ ತನ್ನನ್ನು ಮದುವೆಯಾಗು ಎಂದು ವಾಸಿಮ್‌ಗೆ ಒತ್ತಾಯಿಸಿದ್ದರು.

ಅದಾಗಲೇ ಮದುವೆಯಾಗಿದ್ದ ವಾಸಿಮ್, ಫರೀದಾ ಅವರನ್ನು ವಿವಾಹವಾಗಲು ನಿರಾಕರಿಸಿದ್ದರು.

ಏತನ್ಮಧ್ಯೆ 2014ರ ಏಪ್ರಿಲ್ 17ರಂದು ರಾತ್ರಿ 11 ಗಂಟೆಯಲ್ಲಿ ಮನೆಯಲ್ಲಿ ವಾಸಿಮ್ ಜೊತೆಗೆ ಮದ್ಯ ಸೇವನೆ ಮಾಡುತ್ತಿದ್ದ ಫರೀದಾ, ಮತ್ತೊಬ್ಬ ವ್ಯಕ್ತಿಗೆ ಫೋನ್ ಕರೆ ಮಾಡಿ ವಾಸಿಮ್ ಪತ್ನಿಯನ್ನು ಅತ್ಯಾಚಾರ ಮಾಡುವಂತೆ ಸೂಚಿಸಿದ್ದರು. ಇದರಿಂದ ದಿಢೀರ್ ಪ್ರಚೋದನೆಗೆ ಒಳಗಾದ ವಾಸಿಮ್, ಫರೀದಾ ಕುತ್ತಿಗೆಯನ್ನು ಹಿಸುಕಿ ಕೊಲೆ ಮಾಡಿದ್ದರು. ಅದೇ ದಿನ (2018ರ ಏಪ್ರಿಲ್18) ಬೆಳಗಿನ ಜಾವ 3.45ಕ್ಕೆ ತಲಘಟ್ಟಪುರ ಠಾಣೆಗೆ ತೆರಳಿ ಘಟನೆಯನ್ನು ವಿವರಿಸಿದ್ದರು. ಪೊಲೀಸರು ಕೊಲೆ ಪ್ರಕರಣ ದಾಖಲಿಸಿದ್ದರು.

ಬೆಂಗಳೂರು ಗ್ರಾಮಾಂತರ ಸೆಷನ್ಸ್ ನ್ಯಾಯಾಲಯ ವಾಸಿಮ್‌ಗೆ ಭಾರತೀಯ ದಂಡ ಸಂಹಿತೆ (ಐಪಿಸಿ) ಕಲಂ 302ರ ಅಡಿಯಲ್ಲಿ ಜೀವಾವಧಿ ಶಿಕ್ಷೆ ವಿಧಿಸಿ 2016ರ ಮೇ 26ರಂದು ಆದೇಶಿಸಿತ್ತು. ಜೀವಾವಧಿ ಶಿಕ್ಷೆ ರದ್ದುಪಡಿಸುವಂತೆ ಕೋರಿ ಆರೋಪಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ವಾಸಿಮ್ ಪರ ವಕೀಲ ಎಂ.ಆರ್.ನಂಜುಂಡಗೌಡ ವಾದ ಮಂಡಿಸಿದ್ದರು.

ಮದ್ಯದ ಅಮಲಿನಲ್ಲಿ ಅಪಘಾತ: ಚಾಲಕನ ಥಳಿಸಿದ ಜನ

ಬೆಂಗಳೂರು: ಮದ್ಯದ ಅಮಲಿನಲ್ಲಿ ಅಡ್ಡಾದಿಡ್ಡಿಯಾಗಿ ಟೆಂಪೊ ಟ್ರಾವೆಲರ್ ಚಲಾಯಿಸಿ ಅಪಘಾತ ಉಂಟುಮಾಡಿದ್ದ ಎನ್ನಲಾದ ಚಾಲಕನನ್ನು ಸಾರ್ವಜನಿಕರು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ.

'ವಿಜಯನಗರ ಠಾಣೆ ವ್ಯಾಪ್ತಿಯ ಪಟೇಗಾರಪಾಳ್ಯದಲ್ಲಿ ಸೋಮವಾರ ಬೆಳಿಗ್ಗೆ ಸರಣಿ ಅಪಘಾತ ಸಂಭವಿಸಿದ್ದು, ಮೂರು ದ್ವಿಚಕ್ರ ವಾಹನಗಳು ಜಖಂಗೊಂಡಿವೆ. ಅಪಘಾತಕ್ಕೆ ಕಾರಣನಾದ ಟೆಂಪೊ ಟ್ರಾವೆಲರ್ ಚಾಲಕ ನಾಗರಾಜ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪಾನಮತ್ತನಾಗಿದ್ದ ನಾಗರಾಜ್, ಅತಿ ವೇಗವಾಗಿ ನಿರ್ಲಕ್ಷ್ಯದಿಂದ ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸಿದ್ದ. ರಸ್ತೆಯಲ್ಲಿ ಹೊರಟಿದ್ದ ಮೂರು ದ್ವಿಚಕ್ರ ವಾಹನಕ್ಕೆ ಟೆಂಪೊ ಟ್ರಾವೆಲರ್ ಗುದ್ದಿಸಿದ್ದ. ಅಪಘಾತದ ನಂತರವೂ ವಾಹನ ನಿಲ್ಲಿಸದೇ ಪರಾರಿಯಾಗಲು ಯತ್ನಿಸಿದ್ದ. ಟೆಂಪೊ ಟ್ರಾವೆಲರ್ ಬೆನ್ನಟ್ಟಿ ತಡೆದಿದ್ದ ಸಾರ್ವಜನಿಕರು, ಚಾಲಕ ನಾಗರಾಜ್‌ನನ್ನು ಹಿಡಿದು ಥಳಿಸಿದ್ದರು. ನಂತರ, ಪೊಲೀಸರಿಗೆ ಒಪ್ಪಿಸಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಸವಾರ ಗಾಯ: 'ಅಪಘಾತದಿಂದಾಗಿ ದ್ವಿಚಕ್ರ ವಾಹನಗಳು ಜಖಂಗೊಂಡಿವೆ. ಸವಾರ ಮಲ್ಲಿಕಾರ್ಜುನ ಎಂಬುವವರಿಗೆ ತೀವ್ರ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇನ್ನಿಬ್ಬರಿಗೆ ಗಾಯಗಳಾಗಿವೆ. 'ನಾಗರಾಜ್‌ನನ್ನು ಪರೀಕ್ಷೆಗೆ ಒಳಪಡಿಸಿದಾಗ, ಮದ್ಯದ ಅಂಶ ಕಂಡುಬಂದಿದೆ' ಪೊಲೀಸ್ ಮೂಲಗಳು ಹೇಳಿವೆ.

ಸರ್ಕಾರಿ ಕೆಲಸದ ಆಮಿಷ: ₹ 1.02 ಕೋಟಿ ವಂಚನೆ

ಬೆಂಗಳೂರು: ಸರ್ಕಾರಿ ಕೆಲಸ ಕೊಡಿಸುವ ಆಮಿಷವೊಡ್ಡಿ ನಗರದ ವ್ಯಾಪಾರಿಯೊಬ್ಬರಿಂದ ₹ 1.02 ಕೋಟಿ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ರಾಮಮೂರ್ತಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.'ಸಹಕಾರ ನಗರದ ನಿವಾಸಿಯಾದ ವ್ಯಾಪಾರಿ ನಾಗೇಂದ್ರ ರಾವ್ ಅವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ಬಳ್ಳಾರಿ ಜಿಲ್ಲೆಯ ಜಿ.ಎಸ್. ವೆಂಕಟರೆಡ್ಡಿ ಹಾಗೂ ಧಾರವಾಡ ಜಿಲ್ಲೆಯ ಜಿ.ಎಸ್. ಬಸನಗೌಡ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.'ದೂರುದಾರ ನಾಗೇಂದ್ರ ಅವರು ತಮ್ಮ ಸಂಬಂಧಿಕರಿಬ್ಬರಿಗೆ ಕೆಲಸ ಕೊಡಿಸುವುದಕ್ಕಾಗಿ ಆರೋಪಿಗಳಿಗೆ ಹಣ ನೀಡಿದ್ದರು. ಆದರೆ, ಆರೋಪಿಗಳು ಕೆಲಸ ಕೊಡಿಸಿಲ್ಲ. ಹಣವನ್ನೂ ವಾಪಸು ನೀಡದೇ ನಾಪತ್ತೆಯಾಗಿದ್ದಾರೆ' ಎಂದೂ ತಿಳಿಸಿವೆ.

ನಾಗರತ್ನ ಸೌಹಾರ್ದ ಸೊಸೈಟಿ: ₹ 29.54 ಕೋಟಿ ಅವ್ಯವಹಾರ?

ಬೆಂಗಳೂರು: ವಿದ್ಯಾಪೀಠ ವೃತ್ತ ಬಳಿಯ ಅಶೋಕನಗರಲ್ಲಿರುವ ನಾಗರತ್ನ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿಯಲ್ಲಿ ₹ 29.54 ಕೋಟಿ ಅವ್ಯವಹಾರ ನಡೆದಿರುವ ಈ ಬಗ್ಗೆ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಸೊಸೈಟಿ ಸದಸ್ಯರೂ ಆಗಿರುವ ಠೇವಣಿದಾರ ರಘುನಂದನ್ ಅವರು ಅವ್ಯವಹಾರದ ಬಗ್ಗೆ ದೂರು ನೀಡಿದ್ದಾರೆ. ಅಧ್ಯಕ್ಷೆ ಪರಿಮಳಾ, ಉಪಾಧ್ಯಕ್ಷೆ ರಶ್ಮಿ, ವ್ಯವಸ್ಥಾಪಕ ಆನಂದ್ ತೀರ್ಥ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಾಂಚನಾ ಹಾಗೂ ನಿರ್ದೇಶಕರು, ಲೆಕ್ಕ ಪರಿಶೋಧಕರು ಸೇರಿದಂತೆ 24 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಪರಾಧ ಸಂಚು (ಐಪಿಸಿ 34), ಕ್ರಿಮಿನಲ್ ಪಿತೂರಿ (ಐಪಿಸಿ 120 ಬಿ), ನಂಬಿಕೆ ದ್ರೋಹ (ಐಪಿಸಿ 406) ಹಾಗೂ ವಂಚನೆ (ಐಪಿಸಿ 420) ಆರೋಪದಡಿ ಎಫ್‌ಐಆರ್ ದಾಖಲಾಗಿದೆ. ಅವ್ಯವಹಾರಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದ್ದು, ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ' ಎಂದೂ ತಿಳಿಸಿವೆ.

'ನೂರಾರು ಮಂದಿ ಸೊಸೈಟಿಯಲ್ಲಿ ಹಣ ಠೇವಣಿ ಇರಿಸಿದ್ದಾರೆ. ಅದೇ ಹಣವನ್ನು ಸ್ವರ್ಣ ಭಾರತಿ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಇರಿಸಿರುವ ಆರೋಪಿಗಳು, ಈ ಬಗ್ಗೆ ಠೇವಣಿದಾರರಿಗೆ ಯಾವುದೇ ಮಾಹಿತಿ ನೀಡಿಲ್ಲ. ಬ್ಯಾಲೆನ್ಸ್ ಶೀಟ್‌ನಲ್ಲೂ ಈ ಬಗ್ಗೆ ಪ್ರಸ್ತಾಪಿಸಿಲ್ಲವೆಂದು ದೂರುದಾರ ಆರೋಪಿಸಿದ್ದಾರೆ' ಎಂದೂ ಹೇಳಿವೆ.

'ಠೇವಣಿದಾರರ ಹಣವನ್ನು ಬೇರೆ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಿರುವ ಆರೋಪಿಗಳು ಅಕ್ರಮ ಲಾಭ ಪಡೆದಿದ್ದಾರೆ. ಠೇವಣಿದಾರರಿಗೆ ಹಣ ವಾಪಸು ನೀಡದೇ ನಂಬಿಕೆ ದ್ರೋಹ ಎಸಗಿ ವಂಚಿಸಿದ್ದಾರೆ. ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆಯೂ ದೂರುದಾರ ಆಗ್ರಹಿಸಿದ್ದಾರೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಅವ್ಯವಹಾರ ದೂರಿನ ಬಗ್ಗೆ ಪ್ರತಿಕ್ರಿಯೆ ಪಡೆಯಲು ಸೊಸೈಟಿ ಅಧ್ಯಕ್ಷೆ, ನಿರ್ದೇಶಕರು ಸಂಪರ್ಕಕ್ಕೆ ಸಿಗಲಿಲ್ಲ.

ತಾಂತ್ರಿಕ ತೊಂದರೆ: ಬೆಂಗಳೂರು ವಿಮಾನ ರದ್ದು

ಕಲಬುರಗಿ: ಸ್ಟಾರ್ ಏರ್ ಸಂಸ್ಥೆಯ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಕಾರಣ ಸೋಮವಾರ ಕಲಬುರಗಿಯಿಂದ ಬೆಂಗಳೂರಿಗೆ ಪ್ರಯಾಣವನ್ನು ಸಂಸ್ಥೆಯು ರದ್ದುಪಡಿಸಿತು.

'ಬೆಂಗಳೂರಿನಿಂದ ಕಲಬುರಗಿಗೆ ಮಧ್ಯಾಹ್ನ ಬಂದಿಳಿದ ವಿಮಾನವು ಇಲ್ಲಿಂದ ವಾಪಸ್ ಪ್ರಯಾಣಿಕರನ್ನು ಬೆಂಗಳೂರಿಗೆ ಕರೆದೊಯ್ಯಬೇಕಿತ್ತು. 50 ಪ್ರಯಾಣಿಕರು ಬೋರ್ಡಿಂಗ್ ಪಾಸ್ ಪಡೆದಿದ್ದರು. ವಿಮಾನದ ದ್ವಾರದ ಮೂಲಕ ಗಾಳಿ ಹೋಗುತ್ತಿರುವುದು ಕಂಡಿತು. ಪ್ರಯಾಣಿಕರಿಗೆ ಪರಿಸ್ಥಿತಿ ವಿವರಿಸಿ, ಪ್ರಯಾಣ ರದ್ದುಪಡಿಸಬೇಕಾಯಿತು' ಎಂದು ಸಂಸ್ಥೆಯ ಸಿಬ್ಬಂದಿ ತಿಳಿಸಿದರು.

ಅಲಯನ್ಸ್ ಏರ್ ವಿಮಾನ ರದ್ದು: 'ಬೆಂಗಳೂರಿನಿಂದ ಮಧ್ಯಾಹ್ನ ಕಲಬುರಗಿಗೆ ಬರಬೇಕಿದ್ದ ಅಲಯನ್ಸ್ ಏರ್ ವಿಮಾನ ಸೋಮವಾರ ತಾಂತ್ರಿಕ ಕಾರಣದಿಂದ ರದ್ದುಗೊಂಡಿತು' ಎಂದು ಅಲಯನ್ಸ್ ಏರ್ ಸಂಸ್ಥೆ ಅಧಿಕಾರಿ ಉಪೇಂದ್ರ ಸಿಂಗ್ ಶೆಖಾವತ್ ತಿಳಿಸಿದರು.



ನಾಸಾ ಪ್ರವಾಸಕ್ಕೆ ಆಯ್ಕೆಯಾಗಿರುವ ವಿದ್ಯಾರ್ಥಿ ಅನ್ಶುಲ್‌ಸಾಹ್ ಅವರನ್ನು ಅಭಿನಂದಿಸಲಾಯಿತು

'ನಾಸಾ' ಪ್ರವಾಸಕ್ಕೆ ವಿದ್ಯಾರ್ಥಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ 'ಆಕಾಶ್–ಬೈಜೂಸ್' ಸಂಸ್ಥೆಯ ವಿದ್ಯಾರ್ಥಿ ಅನ್ಶುಲ್‌ಸಾಹ್ 'ನಾಸಾ' ಪ್ರವಾಸಕ್ಕೆ ಆಯ್ಕೆಯಾಗಿದ್ದಾರೆ.

'ನ್ಯಾಷನಲ್ ಟ್ಯಾಲೆಂಟ್ ಹಂಟ್' (ಎಎನ್‌ಟಿಎಚ್‌ಇ) ಪರೀಕ್ಷೆಯ 12ನೇ ಆವೃತ್ತಿಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಈ ವಿದ್ಯಾರ್ಥಿ ನಾಸಾ ಪ್ರವಾಸಕ್ಕೆ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ನಾಸಾಗೆ ಹೋಗಲು ಅವಕಾಶ ಪಡೆಯಲು ನೆರವಾದ ಸಂಸ್ಥೆಗೆ ನಾನು ಧನ್ಯವಾದ ಹೇಳಲು ಬಯಸುತ್ತೇನೆ. ಇದು ನನ್ನ ಕನಸು. ಈ ಕನಸು ಈಗ ನನಸಾಗಿದೆ. ಅವಿಸ್ಮರಣೀಯ ಅನುಭವವನ್ನು ಪಡೆಯಲು ಮತ್ತು ಕಲಿಯಲು ತುಂಬಾ ಉತ್ಸುಕನಾಗಿದ್ದೇನೆ' ಎಂದು ಅನ್ಶುಲ್‌ಸಾಹ್ ಹೇಳಿದ್ದಾರೆ.

'ನಾಸಾ ಪ್ರವಾಸಕ್ಕೆ ಅನ್ಶುಲ್‌ಸಾಹ್ ಆಯ್ಕೆ ಆಗಿರುವುದಕ್ಕೆ ನಮಗೆ ಹೆಮ್ಮೆ ಎನಿಸುತ್ತಿದೆ. ಇದೊಂದು ಹೊಸ ಮೈಲಿಗಲ್ಲು' ಎಂದು ಆಕಾಶ್–ಬೈಜೂಸ್‌ನ ವ್ಯವಸ್ಥಾಪಕ ನಿರ್ದೇಶಕ ಆಕಾಶ್ ಚೌಧರಿ ತಿಳಿಸಿದ್ದಾರೆ.

ಕೇಂದ್ರ ಕಾರಾಗೃಹ ಅಕ್ರಮ: ಸಿಬ್ಬಂದಿ ಕೈವಾಡ

ಬೆಂಗಳೂರು: ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ತನಿಖೆ ನಡೆಸಿದ್ದ ಎಡಿಜಿಪಿ ಮುರುಗನ್ ನೇತೃತ್ವದ ತಂಡ, ರಾಜ್ಯ ಸರ್ಕಾರಕ್ಕೆ 500 ಪುಟಗಳ ವರದಿ ಸಲ್ಲಿಸಿದೆ.

ಜೈಲಿನಲ್ಲಿ ಕೈದಿಗಳಿಗೆ ಐಷಾರಾಮಿ ಸೌಲಭ್ಯ, ಡ್ರಗ್ಸ್ ಪೂರೈಕೆ ಸೇರಿ ಹಲವು ಸೌಲಭ್ಯ ನೀಡಿರುವ ಬಗ್ಗೆ ಕೆಲ ತಿಂಗಳ ಹಿಂದೆಯಷ್ಟೇ ವಿಡಿಯೊಗಳು ಹರಿದಾಡಿದ್ದವು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ರಾಜ್ಯ ಸರ್ಕಾರ, ವಿಡಿಯೊ ಆಧರಿಸಿ ತನಿಖೆ ನಡೆಸುವಂತೆ ಎಡಿಜಿಪಿ ಮುರುಗನ್ ನೇತೃತ್ವದ ತಂಡ ರಚಿಸಿತ್ತು. ಕಾರಾಗೃಹಕ್ಕೆ ಭೇಟಿ ನೀಡಿದ್ದ ತಂಡ, ಸಿಬ್ಬಂದಿ ಹಾಗೂ ಕೈದಿಗಳನ್ನು ವಿಚಾರಣೆ ನಡೆಸಿತ್ತು. ತನಿಖೆ ಪೂರ್ಣಗೊಳಿಸಿರುವ ತಂಡ, ಕಾರಾಗೃಹ ಇಲಾಖೆಯ ಹಿರಿಯ ಅಧಿಕಾರಿಗಳ ಮೂಲಕ ವರದಿಯನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸಿದೆ.

ಸಿಬ್ಬಂದಿ ವಿರುದ್ಧ ಕ್ರಮಕ್ಕೆ ಶಿಫಾರಸು: 'ಜೈಲಿನಲ್ಲಿ ಅಕ್ರಮ ನಡೆದಿರುವುದು ತನಿಖೆಯಿಂದ ಗೊತ್ತಾಗಿದೆ. ಇದರಲ್ಲಿ 10 ಸಿಬ್ಬಂದಿ ಕೈವಾಡವಿದ್ದು, ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಿ. ಜೈಲಿನ ವ್ಯವಸ್ಥೆ ಸುಧಾರಣೆಗೂ ಗಮನ ಹರಿಸಿ' ಎಂದು ವರದಿಯಲ್ಲಿ ಉಲ್ಲೇಖಿಸಿರುವುದಾಗಿ ತಿಳಿದುಬಂದಿದೆ.

ಚಿತ್ರಾವಳಿ



ಛತ್ತೀಸಗಢದ ರಾಯಪುರದಲ್ಲಿ ನಡೆದ ಎರಡನೇ ನ್ಯಾಷನಲ್ ರ‍್ಯಾಂಕಿಂಗ್ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದ ನಗರದ ಕೆಂಪಾಪುರದ ಜೈನ್ ಹೆರಿಟೇಜ್ ಶಾಲೆಯ 9ನೇ ತರಗತಿ ವಿದ್ಯಾರ್ಥಿ ಮೌರ್ಯ ಎಂ.ರೆಡ್ಡಿ ಅವರು (ಬಲದಿಂದ ಮೊದಲನೆಯವರು) ಕಂಚಿನ ಪದಕ ಪಡೆದಿದ್ದಾರೆ. ಕೊತ್ತನೂರಿನ ಸುದರ್ ಸ್ಕೇಟಿಂಗ್ ಕ್ಲಬ್‌ನ ಕಾರ್ತಿಕ್ ಮತ್ತು ಹೇಮಂತ್‌ಕುಮಾರ್ ಅವರು ಮಾರ್ಗದರ್ಶನದಲ್ಲಿ ಮೌರ್ಯ ಸ್ಕೇಟಿಂಗ್ ತರಬೇತಿ ಪಡೆದಿದ್ದರು



ಕ್ರಿಯಾ ಮಾಧ್ಯಮ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ ನವೀನ್ ಸೂರಿಂಜೆ ಅವರ 'ನೇತ್ರಾವತಿಯಲ್ಲಿ ನೆತ್ತರು' ಕೃತಿ ಬಿಡುಗಡೆಗೊಂಡಿತು. ದಸಂಸ(ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ಸಾಹಿತಿ ಕೆ. ಷರೀಫಾ, ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ ಶಿವರಾಂ, ಮಹಮ್ಮದ್ ಶಹೀದ್, ಚಿಂತಕ ಕೆ. ಮರುಳಸಿದ್ದಪ್ಪ, ಪತ್ರಕರ್ತ ದಿನೇಶ ಅಮೀನ್ ಮಟ್ಟು ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ಬಟ್ಟೆ ವ್ಯಾಪಾರಿಯ ₹ 8 ಲಕ್ಷ ಕಳವು

ಬೆಂಗಳೂರು: ಕಡಿಮೆ ಬೆಲೆಗೆ ಬಟ್ಟೆ ಕೊಡಿಸುವ ಆಮಿಷವೊಡ್ಡಿ ತಮಿಳು ನಾಡಿನ ವ್ಯಾಪಾರಿಯನ್ನು ನಗರಕ್ಕೆ ಕರೆಸಿ ₹ 8 ಲಕ್ಷ ಕಳ್ಳತನ ಮಾಡಿರುವ ಬಗ್ಗೆ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತಮಿಳುನಾಡಿನ ನಾಮಕ್ಕಲ್ ಜಿಲ್ಲೆಯ ಬಟ್ಟೆ ವ್ಯಾಪಾರಿ ಕೆ. ರಾಮಸ್ವಾಮಿ ಅವರು ಕಳ್ಳತನದ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ಉಮರ್ ಶಫಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಸ್ನೇಹಿತರ ಪಾಲುದಾರಿಕೆಯಲ್ಲಿ ರಾಮಸ್ವಾಮಿ ಬಟ್ಟೆ ವ್ಯಾಪಾರ ಮಾಡುತ್ತಿದ್ದಾರೆ. ಅವರಿಗೆ ಪರಿಚಯವಾಗಿದ್ದ ಉಮರ್, 'ಬೆಂಗಳೂರಿನಲ್ಲಿ ಕಡಿಮೆ ಬೆಲೆಗೆ ಬಟ್ಟೆ ಸಿಗುತ್ತವೆ. ಬಂದರೆ, ಕೊಡಿಸುತ್ತೇನೆ' ಎಂದಿದ್ದ. ಅದನ್ನು ನಂಬಿದ್ದ ದೂರುದಾರ ಹಾಗೂ ಸ್ನೇಹಿತ, ₹ 9 ಲಕ್ಷ ನಗದು ಸಮೇತ ಮೇ 24ರಂದು ಬೆಂಗಳೂರಿಗೆ ಬಂದಿದ್ದರು.'

ರಾಮಸ್ವಾಮಿ ಅವರನ್ನು ಮೆಜೆಸ್ಟಿಕ್‌ನ ಸಂಗಮ್ ವಸತಿ ಗೃಹದಲ್ಲಿ ವ್ಯವಸ್ಥೆ ಮಾಡಿದ್ದರು. ಬಳಿಕ, ₹ 8 ಲಕ್ಷವಿದ್ದ ಆತನ ಬ್ಯಾಗ್ ಸಮೇತ ಆರೋಪಿ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದರು.

ಯೋಗ ಜೀವನದ ಸಮಗ್ರಸೂತ್ರ



ಅಂತರರಾಷ್ಟ್ರೀಯ ಯೋಗ ದಿನ

ಯೋಗ ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ಆಧ್ಯಾತ್ಮಿಕ-ಧಾರ್ಮಿಕ ಸಾಧನೆಯ ಭಾಗವಾಗಿದೆ. ಶಾಶ್ವತವೂ ಸುಖಕರವೂ ಆದ ನೆಮ್ಮದಿಯ ಸ್ಥಿತಿಯನ್ನು ಒದಗಿಸುವುದು ಯೋಗದ ಗುರಿ. ದೈಹಿಕ, ಮಾನಸಿಕ, ಸಾಮಾಜಿಕ, ಬೌದ್ಧಿಕ ಸಾಮರಸ್ಯವೇ ದಿಟವಾದ ಯೋಗಾಸನ.

ಎಸ್. ಸೂರ್ಯಪ್ರಕಾಶ ಪಂಡಿತ್

'ಯೋಗ' ಎಂಬ ಪದವನ್ನು ನಮ್ಮ ನಿತ್ಯಜೀವನದಲ್ಲಿ ಆಗಾಗ ಕೇಳುತ್ತಿರುತ್ತೇವೆ. 'ಅವನಿಗೆ ಯೋಗ ಬಂತು', 'ಯಾವುದಕ್ಕೂ ಯೋಗ ಇರಬೇಕು' – ಹೀಗೆ ಆಡುಮಾತಿನಲ್ಲೂ ಸ್ಥಾನ ಪಡೆದಿರುವ ಪದ ಇದು. ಅದೃಷ್ಟ, ಸಂತೋಷ, ವಿಧಿ – ಹೀಗೆ ನಾನಾರ್ಥಗಳಲ್ಲಿ ಅದನ್ನು ಬಳಸುತ್ತಿರುತ್ತೇವೆ. ಆದರೆ ನಮ್ಮ ಶಾಸ್ತ್ರಪರಂಪರೆಯಲ್ಲಿ ಅದಕ್ಕೊಂದು ವಿಶಿಷ್ಟ ಸ್ಥಾನ ಇದೆ. ನಮ್ಮ ಸಂಸ್ಕೃತಿಯಲ್ಲಿ ಯೋಗವನ್ನು 'ದರ್ಶನ' ಎಂಬುದಾಗಿಯೇ ಆದರಿಸಿದ್ದಾರೆ. ದರ್ಶನ ಎಂದರೆ 'ನೋಡಿದ್ದು', 'ಕಾಣ್ಕೆ', 'ಸಾಕ್ಷಾತ್ಕಾರ' ಎಂದು ಹೇಳಬಹುದು. ಈ ನೆಲೆಯಲ್ಲಿ 'ಯೋಗ'ದಲ್ಲಿ ಹಲವು ಅರ್ಥಗಳನ್ನು ಕಾಣಲು ಸಾಧ್ಯ. ಪ್ರಧಾನವಾಗಿ ಎರಡು ಅರ್ಥಗಳನ್ನು ಇಲ್ಲಿ ಗಮನಿಸಬಹುದು: 'ಕೂಡುವಿಕೆ' ಎಂದರೆ 'ಮಿಲನ' ಎಂಬ ಒಂದು ಅರ್ಥ; ಮತ್ತೊಂದು 'ಸಮಾಧಿ' ಎಂಬುದು. ಜೀವಾತ್ಮ ಮತ್ತು ಪರಮಾತ್ಮರ ಕೂಡುವಿಕೆಯೇ ಯೋಗ ಎಂದೂ, ಚಿತ್ತವೃತ್ತಿಗಳ ನಿರೋಧದಿಂದ ಒದಗುವ ನೆಮ್ಮದಿಯ ಸ್ಥಿತಿಯಾದ ಸಮಾಧಿಯೇ ಯೋಗ ಎಂದೂ – ಈ ಎರಡು ಅರ್ಥಗಳು ಮೇಲಿನ ಪದನಿಷ್ಪತ್ತಿಗಳಿಂದ ಸಿದ್ಧವಾಗುತ್ತದೆ. ಆದರೆ ಇಂದು 'ಯೋಗ' ಎಂದರೆ ವ್ಯಾಯಾಮ ಎಂಬ ಅರ್ಥವೇ ಪ್ರಧಾನವಾಗಿರುವಂತೆ ತೋರುತ್ತಿದೆ. ಇದೇನೂ ಅಪಾರ್ಥವಲ್ಲ; ಆದರೆ ಇದು ಯೋಗಕ್ಕಿರುವ ವಿಶಾಲವ್ಯಾಪ್ತಿಯಲ್ಲಿ ಮಿತಿಯಾದ ಅರ್ಥವಷ್ಟೆ ಎಂಬುದನ್ನು ಗಮನಿಸಬೇಕಾಗುತ್ತದೆ. ಶಾಶ್ವತವೂ ಸುಖಕರವೂ ಅದ ನೆಮ್ಮದಿಯ ಸ್ಥಿತಿಯನ್ನು ಒದಗಿಸುವುದು ಯೋಗದ ಗುರಿ; ಅದಕ್ಕೆ ಬೇಕಾದ ದೇಹ-ಮನಸ್ಸುಗಳನ್ನು ಹೊಂದಿಸಲು, ಸಿದ್ಧಿಗೊಳಿಸಲು ಒದಗುವ ದೈಹಿಕ-ಮಾನಸಿಕ ಉಪಾಯಗಳೆಲ್ಲವೂ ಯೋಗವೇ.

ಆಸನಗಳ ರೂಪದ ಯೋಗ ಇಂದು ವಿಶ್ವಮಾನ್ಯತೆಯನ್ನು ಪಡೆದಿದೆ. ಯೋಗದ ತವರುಮನೆಯವರಾದ ಭಾರತೀಯರಿಗೆ ಇದು ಸಂತೋಷದಾಯಕವೇ ಹೌದು. ಆದರೆ ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದಲೇ ಇದು ನಮ್ಮ ಆಧ್ಯಾತ್ಮಿಕ-ಧಾರ್ಮಿಕ ಸಾಧನೆಯ ಭಾಗವಾಗಿದ್ದಿತು; ಜೀವನದ ಸಮಗ್ರ ಏಳಿಗೆಯನ್ನು ಅದು ಪ್ರತಿನಿಧಿಸಿದೆ. ಆದರೆ ಯೋಗಕ್ಕೆ ಒಂದು ಸ್ವತಂತ್ರವಾದ ದರ್ಶನದ ಭಿತ್ತಿ ಒದಗಿದ್ದು ಪತಂಜಲಿಮುನಿಗಳ 'ಯೋಗದರ್ಶನ'ದ ಮೂಲಕ ಎನ್ನಬಹುದು. ಇಂದು ಯೋಗ ಎಂದರೆ ಯೋಗಾಸನಗಳು ಮಾತ್ರವೇ ಎಂಬ ವ್ಯಾಖ್ಯಾನ ಹೊರಟಂತಿದೆ; ದಿಟ, ಇದರ ಜೊತೆಗೆ ಸ್ವಲ್ಪಮಟ್ಟಿಗೆ ಪ್ರಾಣಾಯಾಮವನ್ನೂ ಕೆಲವರು ಸೇರಿಸುತ್ತಾರೆ; ಆದರೆ ಇದಷ್ಟೇ ಯೋಗದರ್ಶನವಲ್ಲ. ಯೋಗಕ್ಕೆ ಎಂಟು ಅಂಗಗಳು ಉಂಟು; ಅವುಗಳಲ್ಲಿ ಆಸನ ಮತ್ತು ಪ್ರಾಣಾಯಾಮಗಳೂ ಸೇರಿಕೊಂಡಿವೆ. ಯಮ, ನಿಯಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ – ಇವು ಉಳಿದ ಅಂಗಗಳು. ಕೇವಲ ವೈದಿಕ ದರ್ಶನದಲ್ಲಿ ಮಾತ್ರವಲ್ಲದೆ ಜೈನ, ಬೌದ್ಧದರ್ಶನಗಳಲ್ಲೂ ಯೋಗಕ್ಕೆ ಮನ್ನಣೆಯಿದೆ.

ಯೋಗಸೂತ್ರಗಳನ್ನು ಬರೆದ ಪತಂಜಲಿ ಮತ್ತು ವ್ಯಾಕರಣಮಹಾಭಾಷ್ಯವನ್ನು ಬರೆದ ಪತಂಜಲಿ – ಇಬ್ಬರೂ ಒಂದೇ ಎಂಬ ಎಣಿಕೆ ಪರಂಪರೆಯಲ್ಲಿಯುಂಟು. ಇದು ಐತಿಹಾಸಿಕವಾಗಿ ಹೌದೋ ಅಲ್ಲವೋ, ಹೇಳುವುದು ಕಷ್ಟ; ಆದರೆ ಈ ನಂಬಿಕೆಯಲ್ಲಿ ಒಂದು ಸ್ವಾರಸ್ಯವುಂಟು. ಪತಂಜಲಿ ಮಹರ್ಷಿಯು ನಮ್ಮ ಚಿತ್ತದಲ್ಲಿರುವ ಮಲಗಳನ್ನು ಯೋಗದ ಮೂಲಕವಾಗಿಯೂ, ಮಾತಿನಲ್ಲಿರುವ ಮಲಗಳನ್ನೂ ವ್ಯಾಕರಣದ ಮೂಲಕವಾಗಿಯೂ ಸ್ವಚ್ಛಗೊಳಿಸುವ ಉಪಾಯಗಳನ್ನು ತಿಳಿಸಿಕೊಟ್ಟ ಎಂಬುದು ಇಲ್ಲಿರುವ ಧ್ವನಿ. ನಮ್ಮ ನಡೆ-ನುಡಿಗಳ ಶುದ್ಧಿಯಲ್ಲಿಯೇ ನಮ್ಮ ಉನ್ನತಿಯೂ ನೆಮ್ಮದಿಯೂ ಅಡಗಿದೆ ಎಂಬುದು ಇಲ್ಲಿರುವ ನಿಲುವು. ಹೀಗಾಗಿಯೇ ನಮ್ಮ ದೇಶದ ಬಹುಪಾಲು ದಾರ್ಶನಿಕರು ಯೋಗವನ್ನು ಸಾಧನೆಯ ಭಾಗವಾಗಿ ಸ್ವೀಕರಿಸಿದ್ದಾರೆ ಎಂಬುದು ಗಮನಾರ್ಹ. ಉದಾಹರಣೆಗೆ, ಬುದ್ಧ ಭಗವಂತನು ಆರ್ಯಸತ್ಯಗಳ ಭಾಗವಾಗಿಯೇ ಎಂಟು ಯೋಗಗಳನ್ನೂ ಉಪದೇಶಿಸಿದ; ಸಮ್ಯಕ್ ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಕ್ ವಾಕ್, ಸಮ್ಯಕ್ ಕರ್ಮ, ಸಮ್ಯಕ್ ಆಜೀವ, ಸಮ್ಯಕ್ ವ್ಯಾಯಾಮ, ಸಮ್ಯಕ್ ಸ್ಮೃತಿ ಮತ್ತು ಸಮ್ಯಕ್ ಸಮಾಧಿ – ಇವೇ ಆ ಅಂಗಗಳು. ನಮ್ಮ ಅಂತರಂಗ-ಬಹಿರಂಗದ ಶುದ್ಧಿಗಾಗಿ ಬೇಕಾದ ಸಾಧನೆಗಳೆಲ್ಲವೂ ಇದರಲ್ಲಿ ಸೇರಿದೆ ಎಂಬುದು ಸ್ಪಷ್ಟ. ಪತಂಜಲಿಯು 'ಯೋಗಃ ಚಿತ್ತವೃತ್ತಿನಿರೋಧಃ' ಎಂದೇ ಯೋಗದ ಲಕ್ಷಣವನ್ನು ಹೇಳಿರುವುದನ್ನು ಮರೆಯುವಂತಿಲ್ಲ. ಚಿತ್ತವೆಂದರೆ ಮನಸ್ಸು, ಬುದ್ಧಿ ಮತ್ತು ಅಹಂಕಾರ. ನಮ್ಮ ವ್ಯಕ್ತಿತ್ವವನ್ನು ಆಳುವಂಥ ಗುಣಗಳೇ ಈ ಮೂರು ವಿವರಗಳು. ಆತ್ಮಸಾಕ್ಷಾತ್ಕಾರಕ್ಕಾಗಿ ನಮ್ಮ ದೈಹಿಕ-ಮಾನಸಿಕವಾದ ಏಳು-ಬೀಳುಗಳನ್ನು ಸಂಯಮದಲ್ಲಿರಿಸಿಕೊಳ್ಳಬೇಕೆಂಬುದೇ ಯೋಗದರ್ಶನದ ಕಾಣ್ಕೆ ಎಂಬುದು ಇದರಿಂದ ಸಿದ್ಧವಾಗುತ್ತದೆ.

ನಮ್ಮ ಚಿತ್ತವು ನಮ್ಮದೇ ಇಂದ್ರಿಯಗಳ ಮೂಲಕ ಹೊರಜಗತ್ತಿನೊಂದಿಗೆ ಸಂಪರ್ಕ ಹೊಂದಲು ತವಕಿಸುತ್ತಿರುತ್ತದೆ; ಬಾಹ್ಯಪ್ರಪಂಚದ ಸೆಳೆತಕ್ಕೆ ತುತ್ತಾಗಿರುತ್ತದೆ. ಯಾವ ವಸ್ತು ಅಥವಾ ವಿವರದೊಂದಿಗೆ ಅದು ಸಂಪರ್ಕ ಬರುತ್ತದೋ ಅದರ ಆಕಾರವನ್ನೇ ನಮ್ಮ ಚಿತ್ತವೂ ಹೊಂದುತ್ತದೆ. ಈ ಪ್ರಕ್ರಿಯೆಯಲ್ಲಿ ನಾವು ನಮ್ಮ ದಿಟವಾದ ಸ್ವರೂಪವನ್ನು ಮರೆತು, ನಮ್ಮದಲ್ಲದ ವಸ್ತುರೂಪದಲ್ಲಿ ನೆಲೆನಿಲ್ಲುತ್ತೇವೆ. ಈ ಚಿತ್ತಪ್ರಯಾಣವೇ ನಮ್ಮ ಸುಖ-ದುಃಖಗಳ ಅನುಭವಕ್ಕೂ ಕಾರಣವಾಗುತ್ತಿರುತ್ತದೆ. ನಾವು ಬಯಸಿದ ಅಥವಾ ಹೊಂದಿದ ವಸ್ತು ನಮ್ಮ ಜೊತೆಯಲ್ಲಿರುವವರೆಗೂ ಸುಖ ನಮ್ಮದಾಗಿರುತ್ತದೆ; ಅದು ನಮ್ಮಿಂದ ದೂರವಾದಾಗ ದುಃಖ ನಮ್ಮ ಹೆಗಲೇರುತ್ತದೆ. ಹೀಗೆ ನಮ್ಮ ಸುಖದುಃಖಗಳಿಗೆ ಕಾರಣವಾದ ಚಿತ್ತವೃತ್ತಿಗಳ ಮೇಲೆ ಹಿಡಿತವನ್ನು ಸಾಧಿಸುವ ಸಾಧನೆಯೇ ಯೋಗ ಎಂದು ಸರಳವಾಗಿ ಹೇಳಬಹುದು. ಆಧುನಿಕ ಕಾಲದಲ್ಲಂತೂ ಹೆಚ್ಚು ತೀವ್ರವಾಗಿ ಹೊರಕ್ಕೆ ಚಾಚಿಕೊಂಡೇ ಇರುವ ನಮ್ಮ ಚಿತ್ತದಿಂದ ಉಂಟಾಗುತ್ತಿರುವ ಉದ್ವೇಗಗಳ ತೊಂದರೆಯನ್ನು ನಾವು ಯಥೇಷ್ಟವಾಗಿಯೇ ಅನುಭವಿಸುತ್ತಿದ್ದೇವೆ. ನಮ್ಮ ದಿಟವಾದ ನೆಲೆಯಾದ ನೆಮ್ಮದಿ, ಎಂದರೆ ಆನಂದದಲ್ಲಿ ಒಂದಾಗಲು ಯೋಗ ಖಂಡಿತವಾಗಿಯೂ ನಮಗೆ ಒದಗುತ್ತದೆ. ಆದರೆ ಇದು ಅಷ್ಟಾಂಗಯೋಗವಾಗಬೇಕು. ಬುದ್ಧನು ಪ್ರತಿಪಾದಿಸಿದ ಎಂಟು ದಾರಿಗಳನ್ನೂ ಅನುಷ್ಠಾನಕ್ಕೆ ತರಬೇಕು.

ಭಗವದ್ಗೀತೆಯನ್ನು ಕೂಡ 'ಯೋಗಶಾಸ್ತ್ರ' ಎಂದು ಆದರಿಸಿರುವುದು ಕೂಡ ಮನನೀಯ; ಗೀತಾಚಾರ್ಯ ಶ್ರೀಕೃಷ್ಣನು ಯೋಗಾಚಾರ್ಯನೂ ಹೌದು. ಗೀತೆಯು ಯೋಗವನ್ನು 'ಕರ್ಮಸು ಕೌಶಲಮ್' ಎಂದಿದೆ; ನಾವು ಮಾಡುವ ಕೆಲಸಗಳಲ್ಲಿ ಇರಬೇಕಾದ ಜಾಣ್ಮೆ ಎಂದು ಇದರ ಸರಳಾರ್ಥ. ಇಲ್ಲಿ ಹೇಳಿರುವ ಜಾಣತನ ಎನ್ನುವುದು ಆತ್ಮಘಾತಕವೂ ಲೋಕವಂಚಕವೂ ಆದ ಬುದ್ಧಿಯ ಕಸರತ್ತು ಅಲ್ಲ; ಇದು ನಮ್ಮನ್ನು ನಾವು ಆತ್ಮಾನಂದಕ್ಕೆ 'ಸಿದ್ಧ'ಗೊಳಿಸಿಕೊಳ್ಳುವ ಪ್ರ-ಕ್ರಿಯೆ. ಎಂದರೆ ನಾವು ಎಂಥ ಸಂದರ್ಭವನ್ನೂ ಸ್ಥಿರವಾಗಿಯೂ ಸಹಜವಾಗಿಯೂ ಶುದ್ಧವಾಗಿಯೂ ಸ್ವೀಕರಿಸಬಲ್ಲಂಥ ವ್ಯಕ್ತಿತ್ವವನ್ನು ನಮ್ಮಲ್ಲಿ ತುಂಬಿಸಿಕೊಳ್ಳುವ ಹೂರಣದ ಕೆಲಸವೇ ಹೊರತು, ಮುಂದಿರುವವರನ್ನು ಮೆಚ್ಚಿಸುವ-ತಬ್ಬಿಬ್ಬುಗೊಳಿಸುವ ತೋರಣದ ಸಿಂಗಾರವಲ್ಲ; ಇದು ಹಿಗ್ಗಿಗೆ ಉಬ್ಬುವ, ಕುಗ್ಗಿಗೆ ತಗ್ಗುವ ಚಂಚಲತೆಯೂ ಅಲ್ಲ; ಅಥವಾ ದುಃಖಕ್ಕೆ ಹೆದರಿ ಓಡಿಹೋಗುವ ಪಲಾಯನವಾದವೋ, ಸುಖಕ್ಕೆ ಹಂಬಲಿಸಿ ತೇಲಾಡುವ ಲಂಪಟತನವೋ ಅಲ್ಲ; ಪ್ರತಿಯೊಂದು ಕ್ಷಣದ ಪೂರ್ಣದರ್ಶನಕ್ಕೆ ನಮ್ಮನ್ನು ನಾವು ಅಣಿಗೊಳಿಸಿಕೊಳ್ಳುವ ಪ್ರಜ್ಞೆಯೇ ಈ ಕುಶಲತೆ. ಹೊರಗಿನ ಮತ್ತು ಒಳಗಿನ ಇಂಥ ಎಚ್ಚರವೇ ಅಲ್ಲವೆ ನಮಗೆ ಇಂದು ಬೇಕಾಗಿರುವ ಅರಿವು?

ಸಂಸ್ಕೃತ ಸುಭಾಷಿತವೊಂದು ಹೀಗಿದೆ:

ಮಾತ್ರಾ ಸಮಂ ನಾಸ್ತಿ ಶರೀರಪೋಷಣಂ
ವಿದ್ಯಾಸಮಂ ನಾಸ್ತಿ ಶರೀರಭೂಷಣಮ್ |
ಭಾರ್ಯಾಸಮಂ ನಾಸ್ತಿ ಶರೀರತೋಷಣಂ
ಚಿಂತಾಸಮಂ ನಾಸ್ತಿ ಶರೀರಶೋಷಣಮ್ ||

ಎಂದರೆ, 'ತಾಯಿಗೆ ಸಮವಾದ ಶರೀರದ ಪೋಷಣವಿಲ್ಲ. ವಿದ್ಯೆಗೆ ಸಮವಾದ ಶರೀರದ ಭೂಷಣವಿಲ್ಲ. ಹೆಂಡತಿಗೆ ಸಮವಾದ ಶರೀರದ ತೋಷಣವಿಲ್ಲ. ಚಿಂತೆಗೆ ಸಮವಾದ ಶರೀರದ ಶೋಷಣವಿಲ್ಲ.'

ನಮ್ಮ ಜೀವನವೆಲ್ಲ ನಮ್ಮ ಶರೀರವನ್ನು ಆಶ್ರಯಿಸಿರುವುದು ಸುಳ್ಳಲ್ಲವಷ್ಟೆ. ಮೊದಲು ನಮ್ಮ ಶರೀರದ ಪೋಷಣೆಯಾಗಬೇಕು; ಅದರ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಬೇಕು; ಅದನ್ನು ಸಂತೋಷವಾಗಿರಿಸಿಕೊಳ್ಳಬೇಕು. ಮಾತ್ರವಲ್ಲ, ಅದನ್ನು ಎಂದಿಗೂ ಚಿಂತೆಗೆ ಒಳಪಡಿಸಬಾರದು. ನಮ್ಮ ಜೀವನದ ಸಮಗ್ರ ಆರೋಗ್ಯದ ಯೋಗಸೂತ್ರವನ್ನು ಈ ಸುಭಾಷಿತ ಹೇಳುತ್ತಿದೆ.

ನಮಗೆ ಜನ್ಮ ನೀಡುವವಳು ನಮ್ಮ ತಾಯಿ. ಅವಳಿಂದಲೇ ನಮ್ಮ ಈ ಶರೀರ. ಮಾತ್ರವಲ್ಲ, ಈ ಶರೀರವನ್ನು ಪೋಷಿಸುವವಳೂ ಅವಳೇ. ಸುಮ್ಮನೇ ನಮ್ಮ ಶರೀರ ಬೆಳೆದರೂ ಪ್ರಯೋಜನವಿಲ್ಲ. ಅದಕ್ಕೊಂದು ಆಕಾರ ಬರಬೇಕು; ಚೆನ್ನಾಗಿಯೂ ಕಾಣಬೇಕು; ಕೀರ್ತಿಯನ್ನೂ ಸಂಪಾದಿಸಬೇಕು. ನಾವು ನಾಲ್ಕು ಜನರಿಗೆ ಚೆನ್ನಾಗಿ ಕಾಣುವುದು, ನಮ್ಮ ಶರೀರಕ್ಕೆ ವ್ಯಕ್ತಿತ್ವ ಒದಗುವುದು ನಾವು ಕಲಿತಿರುವ ವಿದ್ಯೆಯಿಂದಲೇ ಹೌದು. ನಮ್ಮ ಶರೀರಕ್ಕೆ ಸಂತೋಷ, ಸುಖವೂ ಬೇಕಾಗುತ್ತದೆ. ನಮ್ಮ ಮಡದಿಯಿಂದ ನಮಗೆ ಇವು ದೊರೆಯುತ್ತವೆ. ಇವುಗಳ ನಡುವೆ ನಮ್ಮ ಶರೀರಕ್ಕೆ ತೊಂದರೆಯೂ ಎದುರಾಗಬಹುದು; ಅದು ಹಿಂಸೆಗೆ ತುತ್ತಾಗಬಹುದು. ಚಿಂತೆಯೇ ನಮ್ಮ ಶೋಷಣೆಗೆ ಕಾರಣವಾಗುವಂಥದ್ದು.

ನಮ್ಮ ಶರೀರಕ್ಕೆ ಏನು ಬೇಕೋ, ಏನು ಬೇಡವೋ ಎಂದು ತಿಳಿದುಕೊಂಡು ಅದರಂತೆ ಜೀವನವನ್ನು ರೂಪಿಸಿಕೊಳ್ಳಬೇಕೆಂಬುದು ಯೋಗದರ್ಶನದ ಕಾಣ್ಕೆ. ಹೀಗೆ ಒದಗುವ ದೈಹಿಕ, ಮಾನಸಿಕ, ಸಾಮಾಜಿಕ, ಬೌದ್ಧಿಕ ಸಾಮರಸ್ಯವೇ ದಿಟವಾದ ಯೋಗಾಸನ. ❖

ಕ್ಯಾನ್ಸರ್ ಸಂತ್ರಸ್ತರೇ ಎಚ್ಚರವಾಗಿರಿ




ಕೃಷ್ಣಿ ಶಿರೂರ

ಜೂನ್ ತಿಂಗಳ ಮೊದಲ ಭಾನುವಾರ (ಜೂನ್ 5) ವಿಶ್ವದಾದ್ಯಂತ ಕ್ಯಾನ್ಸರ್ ಸಂತ್ರಸ್ತರ ದಿನವೆಂದು ಆಚರಿಸಲಾಯಿತು. ಕ್ಯಾನ್ಸರ್ ಸಂತ್ರಸ್ತರು ಎಂದರೆ ಕ್ಯಾನ್ಸರ್ ಬಂಧನದಿಂದ ಹೊರಬಂದವರು, ಕ್ಯಾನ್ಸರ್‌ನಿಂದ ಮುಕ್ತಗೊಂಡವರು ಎಂದರ್ಥ.

ಕ್ಯಾನ್ಸರ್ ಸಂತ್ರಸ್ತರು ಎರಡು ಬಗೆಯಲ್ಲಿ ಕಾಣಸಿಗುತ್ತಾರೆ. ಒಂದು ಬಗೆಯವರು ಹೇಗೆಂದರೆ, ಕ್ಯಾನ್ಸರ್‌ನಿಂದ ಮುಕ್ತಗೊಂಡು ಸಹಜ ಜೀವನಕ್ಕೆ ಮರಳಿದರೂ ತಮಗೆ ಕ್ಯಾನ್ಸರ್ ಆಗಿತ್ತು ಎನ್ನುವುದನ್ನು ಎಲ್ಲಿಯೂ ತೋರಿಸಿಕೊಳ್ಳಲು ಬಯಸುವುದಿಲ್ಲ. ಅಸಲಿಗೆ ಅಂಥವರಲ್ಲಿ ಸಾಧಕರೂ ಇರುತ್ತಾರೆ. ಆದರೂ ತಮ್ಮ ಕ್ಯಾನ್ಸರ್ ದಿನಗಳನ್ನು ಮುಚ್ಚಿಡಲು ಬಯಸುತ್ತಾರೆ. ಇಂಥ ಮನೋಭಾವ ಯಾಕೆ ಎನ್ನುವುದು ಪ್ರಶ್ನಾರ್ಥಕ.

ಇನ್ನೊಂದು ಬಗೆಯ ಕ್ಯಾನ್ಸರ್ ಸಂತ್ರಸ್ತರು ಎಂದರೆ ಅವರು ಕ್ಯಾನ್ಸರ್‌ನಿಂದ ಗುಣಮುಖರಾದ ಮೇಲೆ ಕ್ಯಾನ್ಸರ್ ರೋಗಿಗಳಿಗೆ ದಾರಿದೀಪವಾಗುತ್ತಾರೆ. ಕ್ಯಾನ್ಸರ್ ರೋಗಿಗಳ ಪಾಲಿಗೆ ಮಾದರಿಯಾಗುತ್ತಾರೆ. ಅಂಥ ಅದೆಷ್ಟೋ ಸೆಲೆಬ್ರಿಟಿಗಳು ಅಲ್ಲಲ್ಲಿ ಕಾಣಸಿಗುತ್ತಾರೆ. ಅಂಥವರು ತಮಗೆ ಕ್ಯಾನ್ಸರ್ ಬಾಧಿಸಿತ್ತು ಎಂಬುದನ್ನು ಮುಕ್ತವಾಗಿ ಹಂಚಿಕೊಳ್ಳುತ್ತಾರೆ. ಅದರಿಂದ ಹೇಗೆ ಹೊರಬಂದೆವು ಎನ್ನುವುದನ್ನೂ ಮುಲಾಜಿಲ್ಲದೆ ವ್ಯಕ್ತಪಡಿಸುತ್ತಾರೆ. ಇಂಥವರು ಕ್ಯಾನ್ಸರ್ ರೋಗಿಗಳ ಪಾಲಿಗೆ ನಿಜಕ್ಕೂ ಆಶಾಕಿರಣವಾಗಿರುತ್ತಾರೆ.



ಕ್ಯಾನ್ಸರ್ ಸಂತ್ರಸ್ತರ ದಿನಾಚರಣೆ ಜೂನ್ ಮೊದಲ ಭಾನುವಾರವೊಂದಕ್ಕಷ್ಟೇ ಸೀಮಿತವಾಗಬಾರದು. ಅದು ಅನವರತವಾಗಿರುವುದು ಇಂದಿನ ಅಗತ್ಯ ಕೂಡ. ಮೊದಲೆಲ್ಲ ಕ್ಯಾನ್ಸರ್ ಅಂದರೆ ಸಾವು ಎನ್ನುವ ಭಯವಿತ್ತು. ಆದರೆ ಇಂದು ಆ ಭಯ ಮತ್ತು ಕ್ಯಾನ್ಸರ್‌ನ ರೋಗಿ ನಡುವೆ ಅಂತರ ಹೆಚ್ಚಾಗಿ ಬದುಕುವ ಭರವಸೆ ಮೂಡುತ್ತಿದೆ. ಆ ಭರವಸೆ ಹೀಗೆ ಮುಂದುವರಿದಲ್ಲಿ ಕ್ಯಾನ್ಸರ್ ರೋಗಿಗಳ ಸಾವಿನ ಪ್ರಮಾಣವೂ ಕಡಿಮೆಯಾಗಲಿದೆ.

ಬದಲಾದ ಜೀವನಶೈಲಿ, ಆಹಾರಕ್ರಮ, ವ್ಯಾಯಾಮರಹಿತ ಜೀವನ, ಕಲುಷಿತ ವಾತಾವರಣ, ಕಲಬೆರಕೆ ಆಹಾರಪದಾರ್ಥ – ಇವೆಲ್ಲವೂ ದಿನದಿಂದ ದಿನಕ್ಕೆ ಬಹುಬಗೆಯ ಕ್ಯಾನ್ಸರ್‌ಗಳು ಹೆಚ್ಚಲು ಕಾರಣವಾಗುತ್ತಿವೆ. ಒಮ್ಮೆ ಕ್ಯಾನ್ಸರ್ ಬಂದು ಗುಣಮುಖರಾದ ಮೇಲೂ ಮತ್ತೆ ಮರುಕಳಿಸದು ಎಂದು ಹೇಳಲಾಗದು. ಹಾಗೆ ಮರುಕಳಿಸದಿರುವಂತೆ ಕ್ಯಾನ್ಸರ್ ಸಂತ್ರಸ್ತರು ತಮ್ಮ ಜೀವನವನ್ನು ಬದಲಾಯಿಸಿಕೊಳ್ಳುವುದು ಅನಿವಾರ್ಯ. ಅದಕ್ಕೆ ಕ್ಯಾನ್ಸರ್ ಸಂತ್ರಸ್ತರು ಆರೋಗ್ಯದ ಮೇಲೆ ಹೆಚ್ಚಿನ ನಿಗಾವಹಿಸುವುದು ಅಗತ್ಯ.

ಕ್ಯಾನ್ಸರ್ ಚಿಕಿತ್ಸೆಯಲ್ಲಿ ನೀಡುವ ಸರ್ಜರಿ, ಕಿಮೊಥೆರಪಿ, ರೆಡಿಯೇಷನ್ ಅಡ್ಡಪರಿಣಾಮಗಳಿಂದ ಅಕ್ಷರಶಃ ಜರ್ಜರಿತವಾಗುವ ದೇಹ, ಮನಸ್ಸಿಗೆ ಚೈತನ್ಯ ನೀಡುವತ್ತ ವಿಶೇಷ ಗಮನ ಹರಿಸಲೇಬೇಕು. ಕ್ಯಾನ್ಸರ್ ಚಿಕಿತ್ಸೆ ನಂತರ ದೈಹಿಕವಾಗಿ, ಮಾನಸಿಕವಾಗಿ ಕುಗ್ಗುವುದು ಸಹಜ. ಎಲುಬಿನ ಸಾಂದ್ರತೆ ಕಳೆದುಕೊಳ್ಳುವುದು, ಕ್ಯಾಲ್ಸಿಯಂ ಕೊರತೆ, ಹಾರ್ಮೋನ್ ಏರುಪೇರು – ಇವೆಲ್ಲವುಗಳನ್ನು ಮತ್ತೆ ತಹಃಬದಿಗೆ ತಂದುಕೊಳ್ಳಲು ಪಣತೊಡಬೇಕು. ಅದಕ್ಕಾಗಿ ವೈದ್ಯರು ಕೊಡುವ ಮುಷ್ಟಿಗಟ್ಟಲೆ ಗುಳಿಗೆಗಳನ್ನು ನುಂಗುವ ಬದಲು ಪ್ರಾಕೃತಿಕವಾಗಿ ಲಭ್ಯ ಮಾರ್ಗಗಳನ್ನು ಅನುಸರಿಸುವುದು ಉತ್ತಮ.

ಮಾಡಬೇಕಾದದಿಷ್ಟೇ: ಬೆಳಿಗ್ಗೆ ಎದ್ದ ಕೂಡಲೆ ಶೌಚ ಮುಗಿಸಿ, ಹಲ್ಲುಜ್ಜಿದ ನಂತರ ಬೆಚ್ಚಗಿನ ನೀರಿಗೆ ಅರ್ಧ ಲಿಂಬು ಹಿಂಡಿ ಕುಡಿದು, ಡ್ರೈಫ್ರುಟ್ಸ್ ತಿಂದು ಎಳೆಬಿಸಿಲಲ್ಲಿ ಒಂದು ಅರ್ಧ ತಾಸು ಅಡ್ಡಾಡಿದರೆ ಎಳೆ ಬಿಸಿಲಿನಿಂದ ವಿಟಾಮಿನ್ ಡಿ ನಮಗೆ ಸುಲಭವಾಗಿ ದಕ್ಕಲಿದೆ. ನಂತರ ಸ್ವಲ್ಪ ಹೊತ್ತು ಲಘು ವ್ಯಾಯಾಮ, ಪ್ರಾಣಾಯಾಮ, ಯೋಗ ಹಾಗೂ ಕನಿಷ್ಠ ಐದು ನಿಮಿಷದ ಧ್ಯಾನ ಮಾಡುವುದನ್ನು ರೂಢಿಸಿಕೊಳ್ಳಿ. ಇದು ಹೇಗಿರಬೇಕೆಂದರೆ ಇವತ್ತು ಮಾಡಿ, ನಾಳೆ ಬಿಟ್ಟು, ಮುಂದೆ ಯಾವಾಗಲಾದರೂ ಮಾಡಿದರಾಯ್ತು ಅನ್ನುವಂತಿರಬಾರದು. ಊಟ, ನಿದ್ದೆಯಂತೆ ಯೋಗ, ಧ್ಯಾನ, ನಡಿಗೆಗೆ ನಾವು ಆಡಿಕ್ಟ್ ಆಗಬೇಕು. ಧ್ಯಾನದಿಂದ ಮನಸ್ಸಿನ ಚಾಂಚಲ್ಯ ದೂರವಾಗಿ, ಮನದಲ್ಲಿ ಸಕಾರಾತ್ಮಕ ಭಾವ ಮೂಡಲಿದೆ. ನಡಿಗೆಯಿಂದ ದೇಹ-ಮನಸ್ಸುಗಳು ಉಲ್ಲಸಿತಗೊಳ್ಳಲಿವೆ. ಯೋಗದಿಂದ ಆರೋಗ್ಯ ವೃದ್ಧಿಸಲಿದೆ. ಪ್ರಾಣಾಯಾಮ ಅಗತ್ಯ ಆಮ್ಲಜನಕವನ್ನು ಪೂರೈಸುತ್ತದೆ. ಮನಸ್ಸು ಯಾವಾಗ ಭಯದಿಂದ ದೂರವಿರಲಿದೆಯೋ ಆಗ ದೇಹ, ಮನಸ್ಸು ಎರಡೂ ಸ್ವಸ್ಥ, ಸುಂದರವಾಗಿರಬಲ್ಲದು.

ಧ್ಯಾನ ಮಾಡುವಾಗ ನಮ್ಮ ಮನಸ್ಸು ಹೇಗಿರಬೇಕೆಂದರೆ ಮುತ್ತುಗದ ಬೀಜ ಗಾಳಿಯಲ್ಲಿ ಹೇಗೆ ತೇಲಲಿದೆಯೋ ಹಾಗಿರಬೇಕು. ನಿರ್ಮಲ ನೀರಿನ ತೊರೆಯ ಹರಿವಿನಂತಿರಲಿ. ಮನಸ್ಸನ್ನು ಆಗಾಗಾ ಗುಡಿಸಿ ಸ್ವಚ್ಛವಾಗಿಟ್ಟುಕೊಳ್ಳುವುದರಿಂದ ಇದು ಸಾಧ್ಯ. ಆದಷ್ಟು ಸಂತಸದಾಯಕವಾಗಿರಲಿ. ಅದಕ್ಕಾಗಿ ಮನದಲ್ಲಿ ಸಕಾರಾತ್ಮಕ ಭಾವವಿರಲಿ. ಚಿಂತೆ ಬದಲು ಚಿಂತನೆಗಳೇ ತುಂಬಿರಲಿದೆ. ಚಿಂತನೆಗಳಿಂದ ಮನಸ್ಸು ಚೈತನ್ಯಪೂರ್ಣವಾಗಲಿದೆ. ಯಾವಾಗ ಮನಸ್ಸು ಚೇತೋಹಾರಿಯಾಗಿರುವುದೋ ಆಗ ದೇಹ ಕೂಡ ಚೈತನ್ಯದಾಯಕವಾಗಲಿದೆ. ಮನಸ್ಸು, ದೇಹಕ್ಕೆ ಚೈತನ್ಯ ತುಂಬಲು ವಿಶ್ವ ಯೋಗದಿನದಂದು ಮುನ್ನುಡಿ ಬರೆಯಿರಿ. ❖

ಒತ್ತಡಗಳ ನಿರ್ವಹಣೆ ಮತ್ತು ಆರೋಗ್ಯ

ಒತ್ತಡ ಮೇಲ್ನೋಟಕ್ಕೆ ಕಾಣುವಂತಹದಲ್ಲ. ಒತ್ತಡರಹಿತವಾಗಿ ಬದುಕುವ ಪ್ರಯತ್ನಗಳಿಗಿಂತಲೂ, ಒತ್ತಡವನ್ನು ವಿಶ್ಲೇಷಿಸಿ, ನಿರ್ವಹಿಸುವ ಕಲೆಗಾರಿಕೆಯನ್ನು ಕಲಿಯಬೇಕು.

ಡಾ. ಕಿರಣ್ ವಿ. ಎಸ್.

ಒತ್ತಡವೆಂಬುದು ಸಾರ್ವತ್ರಿಕ. ಪ್ರತಿಯೊಬ್ಬರೂ ತಂತಮ್ಮ ಮಟ್ಟದಲ್ಲಿ ಒತ್ತಡವನ್ನು ಅನುಭವಿಸುತ್ತಲೇ ಇರುತ್ತಾರೆ. ಒತ್ತಡಗಳನ್ನು ಸಹಿಸಬಲ್ಲ ಸಾಮರ್ಥ್ಯ ಎಲ್ಲರಲ್ಲೂ ಇರುವುದಿಲ್ಲ. ಒತ್ತಡಗಳು ಆರೋಗ್ಯದ ಮೇಲೆ ಹಲವಾರು ಪ್ರತಿಕೂಲ ಪರಿಣಾಮಗಳನ್ನು ಬೀರಬಲ್ಲವು. ಇಂದಿನ ಬದುಕಿನ ಧಾವಂತದಲ್ಲಿ ಒತ್ತಡವೆಂಬುದು ಕಡ್ಡಾಯವಾಗಿಹೋಗಿದೆ. ಹೀಗಾಗಿ, ಒತ್ತಡವನ್ನು ನಿರ್ವಹಿಸುವ ಮಾರ್ಗಗಳನ್ನು ಕಂಡುಕೊಂಡು, ಆರೋಗ್ಯವನ್ನು ಕಾಪಾಡಿಕೊಳ್ಳಬೇಕು.

ಹಲವಾರು ಸಂಗತಿಗಳು ಒತ್ತಡಕ್ಕೆ ಕಾರಣವಾಗಬಹುದು. ನಮ್ಮ ಮನಸ್ಸು ಬದಲಾವಣೆಗಳನ್ನು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ; ಆತಂಕ ಪಡುತ್ತದೆ. ಕೆಲವೊಮ್ಮೆ ನಮ್ಮ ಆತ್ಮಾಭಿಮಾನಕ್ಕೆ ಧಕ್ಕೆಯಾಗುವ ಸಂಧರ್ಭಗಳಲ್ಲಿ ಜೀವನದ ಮೇಲೆ ನಮ್ಮ ನಿಯಂತ್ರಣ ತಪ್ಪಿಹೋದಂತೆ ಅನಿಸುತ್ತದೆ. ಆಗಲೂ ತೀವ್ರ ಒತ್ತಡದ ಭಾವನೆ ಇರುತ್ತದೆ. ಪ್ರಸ್ತುತ ಸಮಾಜದಲ್ಲಿ ವೃತ್ತಿಗೆ ಸಂಬಂಧಿಸಿದ ಒತ್ತಡಗಳು ಅತ್ಯಂತ ಹೆಚ್ಚು. ಇಂತಹ ಒತ್ತಡಗಳನ್ನು ನಿರ್ವಹಿಸುವ ವಿಧಾನಗಳು ಪ್ರತಿಯೊಬ್ಬರಿಗೂ ವಿಭಿನ್ನ. ನಮ್ಮ ಜೆನೆಟಿಕ್ ರಚನೆ, ಜೀವನದಲ್ಲಿ ಹಿಂದೆ ನಡೆದ ಘಟನೆಗಳು, ವ್ಯಕ್ತಿತ್ವ, ಸಾಮಾಜಿಕ ಪರಿಸರ, ಆರ್ಥಿಕ ಪರಿಸ್ಥಿತಿಗಳು, ಮನಃಸ್ಥಿತಿ, ಮೊದಲಾದುವು ಒತ್ತಡ ನಿರ್ವಹಣೆಯಲ್ಲಿ ಪಾತ್ರ ವಹಿಸುತ್ತವೆ.

ಒತ್ತಡದ ವೇಳೆ ಶರೀರದ ಹಾರ್ಮೋನುಗಳ ಮಟ್ಟದಲ್ಲಿ ಏರುಪೇರಾಗುತ್ತದೆ. ಇದು ಶರೀರದ ರಕ್ಷಕ ವ್ಯವಸ್ಥೆಯ ಮೇಲೆ ಋಣಾತ್ಮಕ ಪರಿಣಾಮ ತೋರುತ್ತದೆ. ಇದರಿಂದ ಹಲವಾರು ಕಾಯಿಲೆಗಳಿಗೆ ಶರೀರ ನೆಲೆಯಾಗಬಹುದು. ಅಲ್ಲದೇ, ಮಧುಮೇಹದಂತಹ ದೀರ್ಘಕಾಲಿಕ ಕಾಯಿಲೆಗಳ ನಿಯಂತ್ರಣ ತಪ್ಪುತ್ತದೆ. ಆತಂಕ, ಭೀತಿ, ದುಃಖ, ಕಿರಿಕಿರಿ, ಖಿನ್ನತೆ, ಹತಾಶೆ, ಅನಗತ್ಯ ಕೋಪ, ತಾಳ್ಮೆ ಕಳೆದುಕೊಳ್ಳುವುದು – ಮೊದಲಾದುವು ಒತ್ತಡದ ಪರಿಣಾಮಗಳು. ಒಟ್ಟಾರೆ, ಸತತ ಒತ್ತಡದ ಪರಿಸ್ಥಿತಿ ಆರೋಗ್ಯಕ್ಕೆ ಹಿತಕರವಲ್ಲ. ತಲೆನೋವು, ಅಜೀರ್ಣ, ಉಸಿರಾಟದ ಏರುಪೇರು, ಹೃದಯದ ಏರುಬಡಿತ, ಮೈ-ಕೈ ನೋವು, ಸಂಕಟ ಮೊದಲಾದುವು ಒತ್ತಡದ ಕಾರಣದಿಂದ ಭೌತಿಕ ಶರೀರದ ಆಗುವ ಬದಲಾವಣೆಗಳು. ಒತ್ತಡದ ಕಾರಣದಿಂದ ಉಂಟಾಗುವ ಅನಾರೋಗ್ಯಗಳಿಂದ ವರ್ಷಕ್ಕೆ ಸರಾಸರಿ ಇಪ್ಪತ್ತನಾಲ್ಕು ದಿನಗಳು ಕೆಲಸದಿಂದ ವಿಮುಖರಾಗುತ್ತಾರೆ ಎಂದು ಅಧ್ಯಯನಗಳು ತಿಳಿಸಿವೆ.

ಒತ್ತಡ ಮೇಲ್ನೋಟಕ್ಕೆ ಕಾಣುವಂತಹದಲ್ಲ. ಒತ್ತಡದಿಂದ ಬಳಲುವವರು ಇತರರಿಂದ ಅಂತರ ಕಾಯ್ದುಕೊಳ್ಳುತ್ತಾರೆ; ನಿರ್ಧಾರಗಳನ್ನು ಸುಲಭವಾಗಿ ಮಾಡಲಾರರು; ಮಾಡಿದ ತಪ್ಪು ನಿರ್ಧಾರಗಳನ್ನು ತಿದ್ದಿಕೊಳ್ಳಲಾರರು; ಭಾವನಾತ್ಮಕವಾಗಿ ಸೂಕ್ಷ್ಮವಾಗುತ್ತಾರೆ; ಸಣ್ಣ ವಿಷಯಗಳಿಗೂ ತೀವ್ರವಾಗಿ ದುಃಖಿಸುತ್ತಾರೆ; ನಿದ್ರಾಹೀನತೆಯಿಂದ ಬಳಲುತ್ತಾರೆ; ಸಂಸಾರದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ; ಮದ್ಯಪಾನ, ಸಿಗರೇಟುಗಳಂತಹ ಚಟಗಳಿಗೆ ಮೊರೆ ಹೋಗುತ್ತಾರೆ; ಜೀವನೋತ್ಸಾಹ ಕಡಿಮೆಯಾಗುತ್ತದೆ; ಹೊಟ್ಟೆಯ ಹುಣ್ಣುಗಳು, ಜೀರ್ಣಶಕ್ತಿಯಲ್ಲಿ ದೋಷಗಳು, ನೆನಪಿನ ಶಕ್ತಿ ಕುಂದುವಿಕೆ, ಹೃದ್ರೋಗ ಮೊದಲಾದ ಆರೋಗ್ಯಸಮಸ್ಯೆಗಳು ಎದುರಾಗುತ್ತವೆ. ವಿಲೋಮವಾಗಿ, ಒತ್ತಡದ ಸಮರ್ಥ ನಿರ್ವಹಣೆ ಆರೋಗ್ಯದ ಸುಧಾರಣೆಗೆ ದಾರಿಯಾಗುತ್ತದೆ. ಇದನ್ನು ಸಾಧಿಸಲು ತಜ್ಞರು ಕೆಲವು ಮಾರ್ಗಗಳನ್ನು ಸೂಚಿಸುತ್ತಾರೆ.



1 ಬದುಕಿನಲ್ಲಿ ಅಧಿಕ ಒತ್ತಡದ ಅಸ್ತಿತ್ವವನ್ನು ಮನಗಾಣಬೇಕು; ಒತ್ತಡವನ್ನು ಹೇರುತ್ತಿರುವ ಪರಿಸ್ಥಿತಿಗಳನ್ನು ವಿಶ್ಲೇಷಿಸಬೇಕು. ಕೆಲವೊಮ್ಮೆ ಇದು ಸುಲಭಸಾಧ್ಯವಲ್ಲ. ನಮಗೇ ಅರಿವಿಲ್ಲದ ಯಾವುದೋ ಬದಲಾವಣೆ, ಹೊಂದಾಣಿಕೆಯಾಗದ ಸಂಬಂಧಗಳು ಒತ್ತಡದ ಮೂಲಗಳಾಗಿರಬಹುದು. ಬಹುತೇಕ ಸಂದರ್ಭಗಳಲ್ಲಿ ನಮ್ಮ ಆಲೋಚನೆಗಳು, ವರ್ತನೆಗಳು, ಭಾವನೆಗಳ ಮೇಲೆ ನಿಗಾ ಇರುವುದಿಲ್ಲ. ಹೀಗಾಗಿ ಆತ್ಮಾವಲೋಕನ ಕಷ್ಟವಾಗುತ್ತದೆ. ಇದರ ಪರಿಹಾರಕ್ಕಾಗಿ ನಮ್ಮ ವರ್ತನೆಗಳನ್ನು ಪ್ರಯತ್ನಪೂರ್ವಕವಾಗಿ ದಾಖಲಿಸಬೇಕು. ಯಾವುದಾದರೂ ಸಂದರ್ಭದಲ್ಲಿ ನಮ್ಮ ವರ್ತನೆ ಅನಪೇಕ್ಷಿತವಾಗಿತ್ತೇ? ಹಾಗೆ ವರ್ತಿಸಿದ ನಂತರ ಮೂಡಿದ ಭಾವನೆಗಳೇನು? ಇದನ್ನು ಬದಲಾಯಿಸಲು ಸಾಧ್ಯವೇ? ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು,. ಇದರಿಂದ ಒತ್ತಡದ ಮೂಲಗಳನ್ನು ತಿಳಿಯಬಹುದು.

2 ಕೆಲವು ಒತ್ತಡಗಳನ್ನು ನಿವಾರಿಸಿಕೊಳ್ಳಬಹುದು; ಕೆಲವನ್ನು ಬದಲಾಯಿಸಬಹುದು; ಕೆಲವದರ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಬಹುದು; ಕೆಲವನ್ನು ಮಾತ್ರ ಒಪ್ಪಿಕೊಂಡೇ ಮುಂದುವರೆಯಬೇಕು. ಈ ನಾಲ್ಕು ಆಯ್ಕೆಗಳ ನಡುವೆ ಯಾವುದನ್ನು ಹೇಗೆ ಮಾಡಬೇಕು ಎಂಬುದು ಅವರವರ ವಿವೇಚನೆಗೆ ಬಿಟ್ಟದ್ದು. ಈ ಸಂದರ್ಭದಲ್ಲಿ ಆತ್ಮೀಯರು, ಮಾನಸಿಕ ತಜ್ಞರು, ಆಪ್ತಸಲಹೆಗಾರರು ನೆರವಾಗಬಲ್ಲರು. ನಮ್ಮ ಒತ್ತಡವನ್ನು ಎಲ್ಲರಲ್ಲೂ ಜಾಹೀರು ಮಾಡಿಕೊಳ್ಳುವುದು ಒಳ್ಳೆಯದಲ್ಲ. ತೀರಾ ಆಪ್ತರಾದ, ಸರಿಯಾದ ಪರಿಹಾರ ಸೂಚಿಸಬಲ್ಲ ಗೆಳೆಯರ, ಸಂಬಂಧಿಗಳ ಜೊತೆಗೆ ಮುಕ್ತವಾಗಿ ಮಾತನಾಡುವುದರಿಂದ ಸಮಸ್ಯೆಗಳು ಹಗುರವಾಗಬಲ್ಲವು. ನಮ್ಮ ಮಿತಿಯನ್ನು ಮೀರಿದ ಕೆಲಸಗಳನ್ನು ಒಲ್ಲೆನೆನ್ನುವ ಮನಃಸ್ಥಿತಿ ಬೆಳೆಯಬೇಕು. ಎಲ್ಲರಿಗೂ ಒಳ್ಳೆಯವರಾಗುವ ಪ್ರಯತ್ನದಲ್ಲಿ ನಮ್ಮನ್ನು ನಾವು ದಹಿಸಿಕೊಳ್ಳಬಾರದು. ಒತ್ತಡವನ್ನು ಹೆಚ್ಚಿಸುವ ಜನರಿಂದ, ಸುದ್ದಿಮೂಲಗಳಿಂದ ದೂರವಿರುವುದು ಸೂಕ್ತ. ನಮ್ಮ ನಿಯಂತ್ರಣದಲ್ಲಿ ಇಲ್ಲದಿರುವ ಸಂಚಾರ ದಟ್ಟಣೆಯಂತಹ ಪ್ರಸಂಗಗಳು ನಮ್ಮ ಒತ್ತಡದ ಮಟ್ಟವನ್ನು ಏರಿಸಲು ಬಿಡಬಾರದು. ನಮ್ಮ ದೈನಂದಿನ ಕೆಲಸಗಳ ಪಟ್ಟಿಯನ್ನು ಸಾಧ್ಯವಾದಷ್ಟೂ ಹಗುರವಾಗಿಸಬೇಕು; ನಡುನಡುವೆ ವಿಶ್ರಾಂತಿಗೆ, ಆತ್ಮಾವಲೋಕನಕ್ಕೆ, ವಿಶ್ಲೇಷಣೆಗೆ ಸ್ಥಳಾವಕಾಶ ದೊರೆಯಬೇಕು. ಕೆಲವೊಮ್ಮೆ ಪರಿಸ್ಥಿತಿಯ ಜೊತೆಗೆ ರಾಜಿಗೆ ಸಿದ್ಧವಿರಬೇಕಾಗುತ್ತದೆ. ಸಮತೋಲಿತ ಚಿಂತನೆಗಳು ಮನಸ್ಸನ್ನು ನಿರಾಳವಾಗಿಸುತ್ತವೆ.

3 ಸಮಸ್ಯೆಗಳ ಪರಿಭಾಷೆಯನ್ನು ಅರ್ಥಮಾಡಿಕೊಳ್ಳಬೇಕು. ಕೆಲವೊಂದು ಸಮಸ್ಯೆಗಳು ನಾವು ಊಹಿಸಿಕೊಂಡಷ್ಟು ಗಾಢವಾಗಿರುವುದಿಲ್ಲ. ಸಮಸ್ಯೆಯನ್ನು ಒಮ್ಮೆ ಸರಿಯಾದ ನೆಲೆಗಟ್ಟಿನಲ್ಲಿ ಅರ್ಥ ಮಾಡಿಕೊಂಡರೆ, ಅದರ ಪರಿಹಾರ ಸುಲಭವಾಗುತ್ತದೆ. ಎಲ್ಲ ಸಮಸ್ಯೆಗಳಿಗೂ ಪರಿಹಾರವೇ ಬೇಕೆಂದಿಲ್ಲ; ಕೆಲವೊಂದನ್ನು ಸಮಯಾನುಸಾರ ತಹಬಂದಿಗೆ ತಂದರೂ ಸಾಕು. ಕೆಲವು ಸಂದರ್ಭಗಳು ಮೂಲತಃ ಸಮಸ್ಯೆ ಎನಿಸಿದರೂ, ಕಾಲಕ್ರಮದಲ್ಲಿ ಸೂಕ್ತವಾಗಿ ವಿಶ್ಲೇಷಿಸಿದಾಗ ಅವು ಅವಕಾಶಗಳ ರೂಪ ಪಡೆಯುತ್ತವೆ.

4 ಜಿದ್ದಿನ ಮನಃಸ್ಥಿತಿ ಒಳ್ಳೆಯದಲ್ಲ. ಜೀವನದಲ್ಲಿ ಕೆಲವನ್ನು ಕ್ಷಮಿಸಿ ಮುಂದೆ ಸಾಗಬೇಕು. ಸೇಡನ್ನು ಗುರಿಯಾಗಿಸಿ ಚಿಂತಿಸುವುದು ಋಣಾತ್ಮಕ ಆಲೋಚನೆಗಳನ್ನೇ ಹುಟ್ಟುಹಾಕುತ್ತವೆ. ಇದು ಆರೋಗ್ಯಕ್ಕೆ ಹಾನಿಕರ. ಕ್ರಮಬದ್ಧ ವ್ಯಾಯಾಮ, ಪ್ರಾಣಾಯಾಮ, ಧ್ಯಾನ – ಇವು ನಮ್ಮ ಸೈರಣೆಯನ್ನು ಹಿಗ್ಗಿಸುತ್ತವೆ. ಇದರಿಂದ ದೈಹಿಕ ಹಾಗೂ ಮಾನಸಿಕ ಒತ್ತಡಗಳನ್ನು ಕಳೆಯಲು ಸಹಕಾರಿ. ಇದರ ಜೊತೆಗೆ ಮನಸ್ಸಿಗೆ ಆಹ್ಲಾದ ನೀಡುವ ಹವ್ಯಾಸಗಳಲ್ಲಿ ತೊಡಗಿಕೊಳ್ಳುವುದು, ಆರೋಗ್ಯಕರ ಆಹಾರ, ಚಟಗಳಿಂದ ದೂರವಿರುವುದು, ಸಾಕಷ್ಟು ವಿಶ್ರಾಂತಿ, ನಿದ್ರೆಗಳು ಒತ್ತಡ ನಿರ್ವಹಣೆಯನ್ನು ಸುಲಭವಾಗಿಸುತ್ತವೆ.

5 ವೈಯಕ್ತಿಕ ಸಂಬಂಧಗಳ ಅಭಿವೃದ್ಧಿ ಹಲವಾರು ಹಂತಗಳಲ್ಲಿ ಒತ್ತಡ ನಿರ್ಮೂಲನೆಗೆ ದಾರಿಯಾಗುತ್ತದೆ. ಕೌಟುಂಬಿಕ ಸಂಬಂಧಗಳು, ಸ್ನೇಹಿತರು, ವೃತ್ತಿಜೀವನದ ಒಡನಾಡಿಗಳು, ಪರಿಚಿತರ ಜೊತೆಯಲ್ಲಿ ಪ್ರಾಮಾಣಿಕ ಆತ್ಮೀಯತೆಯಿಂದ ವ್ಯವಹರಿಸುವುದು ದೀರ್ಘಕಾಲಿಕ ನೆಲೆಗಟ್ಟಿನಲ್ಲಿ ಪರಸ್ಪರರ ಒತ್ತಡವನ್ನು ತಗ್ಗಿಸುತ್ತದೆ. ನಮಗೇ ಅರಿವಿಲ್ಲದಂತೆ ಮತ್ತೊಬ್ಬರ ಒತ್ತಡಗಳ ನಿವಾರಣೆಯಲ್ಲಿ ನೆರವಾಗಿರುತ್ತೇವೆ.

ಕೆಲಸ ಮತ್ತು ಒತ್ತಡಗಳ ಸಮರ್ಥ ನಿರ್ವಹಣೆ ಆರೋಗ್ಯದ ದೃಷ್ಟಿಯಿಂದ ಪ್ರಮುಖ ಪಾತ್ರವನ್ನು ವಹಿಸುತ್ತವೆ. ದಾರಿಗಳು ಬೇರೆಬೇರೆಯಾದರೂ, ಒತ್ತಡ ನಿರ್ವಹಣೆಯ ಮೂಲತತ್ತ್ವಗಳು ಒಂದೇ. ಆಧುನಿಕ ಸ್ಪರ್ಧಾತ್ಮಕ ಯುಗದಲ್ಲಿ ಒತ್ತಡರಹಿತವಾಗಿ ಬದುಕುವ ಪ್ರಯತ್ನಗಳಿಗಿಂತಲೂ, ಒತ್ತಡವನ್ನು ವಿಶ್ಲೇಷಿಸಿ, ಅವುಗಳನ್ನು ನಿರ್ವಹಿಸುವ ಕಲೆಗಾರಿಕೆಯನ್ನು ಕಲಿಯುವುದು ದೈಹಿಕ ಮತ್ತು ಮಾನಸಿಕ ಆರೋಗ್ಯಗಳನ್ನು ಕಾಪಿಟ್ಟುಕೊಳ್ಳುವ ಯಶಸ್ವಿ ವಿಧಾನ. ❖

ಮಾಹಿತಿ ಆಯುಕ್ತರ ಹೇಳಿಕೆಗೆ ಆಕ್ಷೇಪ

ಬೆಂಗಳೂರು: ಕೇಂದ್ರೀಯ ಮಾಹಿತಿ ಹಕ್ಕು ಆಯೋಗದ ಮಾಹಿತಿ ಆಯುಕ್ತ ಉದಯ್ ಮಾಹುರ್ಕರ್ ಅವರ ಹೇಳಿಕೆಯನ್ನು ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ. ಚಂದ್ರಶೇಖರ್ ಟೀಕಿಸಿದ್ದಾರೆ.

ಪ್ರವಾದಿ ಮಹಮ್ಮದ್ ಪೈಗಂಬರ ಅವರ ಕುರಿತು ಬಿಜೆಪಿ ವಕ್ತಾರರು ನೀಡಿದ್ದ ಆಕ್ಷೇಪಾರ್ಹ ಹೇಳಿಕೆಗೆ ಸಂಬಂಧಿಸಿದಂತೆ ಇಸ್ಲಾಮಿಕ್ ರಾಷ್ಟ್ರಗಳು ಪ್ರತಿಭಟನೆ ವ್ಯಕ್ತಪಡಿಸಿದ್ದವು. ಈ ರಾಷ್ಟ್ರಗಳಿಗೆ ಪ್ರಚೋದನೆ ನೀಡಿದ ಭಾರತೀಯರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಬೇಕು ಎಂದು ಉದಯ್ ಮಾಹುರ್ಕರ್ ಅವರು ಸರ್ಕಾರಕ್ಕೆ ಸಲಹೆ ನೀಡಿರುವುದು ಆಕ್ಷೇಪಾರ್ಹ ಎಂದು ಹೇಳಿದ್ದಾರೆ.

ಸ್ವತಂತ್ರ ಸಂಸ್ಥೆಯ ಜವಾಬ್ದಾರಿ ಸ್ಥಾನದಲ್ಲಿರುವ ವ್ಯಕ್ತಿಯೊಬ್ಬರು ಈ ರೀತಿಯ ಹೇಳಿಕೆ ನೀಡಿರುವುದು ಅಕ್ಷಮ್ಯ ಎಂದು ಹೇಳಿದ್ದಾರೆ.



ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತಿದೆ!

ಕೆಂಗೇರಿ ಉಪ ನಗರದ ವಳಗೇರಹಳ್ಳಿ ರಸ್ತೆ: ಜನರ ಸಂಕಟ

ನಿರ್ಮಾಣವಾಗದ 'ಮೇಲ್ಸೇತುವೆ': ವಾಹನ ಸವಾರರ ಪರದಾಟ

• ಆದಿತ್ಯ ಕೆ.ಎ.

ಬೆಂಗಳೂರು: ಕೆಂಗೇರಿ ಉಪನಗರ ವ್ಯಾಪ್ತಿಯ ನಿವಾಸಿಗಳು ರೈಲ್ವೆ ಮೇಲ್ಸೇತುವೆ ಇಲ್ಲದೆ ನಿತ್ಯವೂ ಸಂಕಟ ಪಡುತ್ತಿದ್ದಾರೆ.

ಮೈಸೂರು, ಮಂಡ್ಯ ಕಡೆಯಿಂದ ಬರುವ ಹಾಗೂ ಮೆಜೆಸ್ಟಿಕ್ ಭಾಗದ ವಾಹನಗಳು ವಳಗೇರಿಹಳ್ಳಿ, ಹೊಯ್ಸಳ ವೃತ್ತ, ನಾಗದೇವನಹಳ್ಳಿ ಹಾಗೂ ಕೆಂಗೇರಿ ಉಪ ನಗರಕ್ಕೆ ತೆರಳಲು ನಿತ್ಯ ಕಾಯಬೇಕಾದ ಪರಿಸ್ಥಿತಿಯಿದೆ!

ಪ್ರಯಾಣಿಕರ ಹಾಗೂ ಗೂಡ್ಸ್‌ನ 20ಕ್ಕೂ ಹೆಚ್ಚು ರೈಲುಗಳು ನಿತ್ಯ ವಳಗೇರಹಳ್ಳಿ ಮಾರ್ಗದ ಮೂಲಕ ಮೈಸೂರಿಗೆ ಸಂಚರಿಸುತ್ತವೆ. ರೈಲ್ವೆ ಗೇಟ್ ಬಂದ್ ಮಾಡಿದಾಗ ಎರಡು ಬದಿಯಲ್ಲೂ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ.

ಜತೆಗೆ ರಸ್ತೆಯೂ ಕಿರಿದಾಗಿದ್ದು, ಸವಾರರಿಗೆ ಸಮಸ್ಯೆಯಾಗುತ್ತಿದೆ. ಪಾದಚಾರಿಗಳ ಓಡಾಟಕ್ಕೂ ಸಮಸ್ಯೆಯಾಗಿದೆ. ರೈಲ್ವೆ ಮೇಲ್ಸೇತುವೆ ನಿರ್ಮಾಣ ಮಾಡುವಂತೆ ಸವಾರರು, ಸ್ಥಳೀಯರು ಆಗ್ರಹಿಸಿದ್ದಾರೆ.


ಕೆಂಗೇರಿ ಉಪನಗರದ ವಳಗೇರಳ್ಳಿಯಲ್ಲಿ ರೈಲ್ವೆ ಹಳಿ ದಾಟುವ ಧಾವಂತ

ದಿನಂಪ್ರತಿ ಈ ಮಾರ್ಗವನ್ನೇ ಬಳಸುವ ಪ್ರಯಾಣಿಕರ ಗೋಳನ್ನು ಕೇಳುವಂತಿಲ್ಲ. ಸ್ವಲ್ಪವೇ ದೂರದಲ್ಲಿ ಮೆಟ್ರೋ ನಿಲ್ದಾಣವಿದೆ. ಧಾವಂತದಲ್ಲಿ ಬಂದವರು ಅಲ್ಲಿ ಸಿಲುಕಿಕೊಳ್ಳುತ್ತಿದ್ದಾರೆ.

ಐ.ಟಿ– ಬಿ.ಟಿ ಕಂಪನಿ, ಸರ್ಕಾರಿ ಕಚೇರಿಯ ಸಾವಿರಾರರು ಉದ್ಯೋಗಸ್ಥರು ಈ ಮಾರ್ಗದಲ್ಲೇ ಕೆಲಸಕ್ಕೆ ತೆರಳುತ್ತಾರೆ. ಶಾಲಾ, ಕಾಲೇಜು ವಿದ್ಯಾರ್ಥಿಗಳೂ ಈ ರಸ್ತೆ ಅವಲಂಬಿಸಿದ್ದಾರೆ. ರೈಲು ಬಂದಾಗ ಅವರು ವಿಧಿಯಿಲ್ಲದೆ 10ರಿಂದ 15 ನಿಮಿಷಗಳ ಕಾಲ ರಸ್ತೆಯಲ್ಲಿಯೇ ನಿಲ್ಲುತ್ತಾರೆ.

ಮುಖ್ಯರಸ್ತೆಯ ಆಸುಪಾಸಿನಲ್ಲೇ ರೈಲ್ವೆ ಮಾರ್ಗವು ಹಾದು ಹೋಗಿದೆ. ಕೆಂಗೇರಿ ಮುಖ್ಯ ರೈಲ್ವೆ ನಿಲ್ದಾಣವೂ ಸಮೀಪದಲ್ಲಿದೆ. ಆದರೂ ಮೇಲ್ಸೇತುವೆ ನಿರ್ಮಾಣ ಮಾಡಿಲ್ಲ ಎಂದು ಸ್ಥಳೀಯರು ಆಕ್ರೋಶ ಹೊರಹಾಕಿದ್ದಾರೆ.

ಮಳೆಗಾಲದಲ್ಲಿ ರೈಲು ಹೋಗುವ ತನಕವೂ ರೈಲ್ವೆ ಗೇಟ್ ಎದುರೇ ನಿಲ್ಲಬೇಕಾದ ಸ್ಥಿತಿಯಿದೆ. ಉದ್ಯೋಗಸ್ಥರು ಮಳೆಯಲ್ಲಿ ತೊಯ್ದು ಕಚೇರಿಗೆ ತೆರಳಿದರೆ, ವಿದ್ಯಾರ್ಥಿಗಳು ಶಾಲೆಗೆ ತೆರಳಬೇಕಾದ ಅನಿವಾರ್ಯ ಇದೆ. ರೈಲು ಬರುವುದರೊಳಗೆ ಗೇಟ್ ದಾಟಲು ಹೋದವರು ಆಪತ್ತಿಗೆ ಒಳಗಾಗಿದ್ದಾರೆ. ಮೇಲ್ಸೇತುವೆ ನಿರ್ಮಾಣವಾದರೆ ಸಮಸ್ಯೆಗೆ ಮುಕ್ತಿ ಸಿಗಲಿದೆ ಎಂದು ಸಾಫ್ಟ್‌ವೇರ್ ಎಂಜಿನಿಯರ್ ಯತೀಶ್ ಹೇಳುತ್ತಾರೆ.

> **ರೈಲ್ವೆ ಗೇಟ್ ಬಳಿಯ ರಸ್ತೆಯಲ್ಲೂ ಗುಂಡಿಗಳು ಬಿದ್ದಿವೆ. ಮಳೆಯಲ್ಲಿ ನೀರು ಸಂಗ್ರಹವಾಗಿ ಅಪಾಯ ತಂದೊಡ್ಡುತ್ತಿದೆ**
>
> **ಸಂದೇಶ್,** ಖಾಸಗಿ ಕಂಪನಿ ಉದ್ಯೋಗಿ

ಮೇಲ್ಸೇತುವೆ ನಿರ್ಮಾಣ ಮಾಡಬೇಕೆಂಬ ಬೇಡಿಕೆಯಿದೆ. ಆದರೂ, ನಿರ್ಲಕ್ಷ್ಯ ವಹಿಸಲಾಗಿದೆ. ಐ.ಟಿ ಸಿಟಿ ಹೆಗ್ಗಳಿಕೆಯ ಬೆಂಗಳೂರಿನಲ್ಲಿ ಹಳೇ ಕಾಲದ ಕಬ್ಬಿಣದ ಗೇಟ್ ವ್ಯವಸ್ಥೆಯೇ ಈಗಲೂ ಇದೆ. ಕಾವಲುಗಾರರು ಅದನ್ನೇ ಬಳಸಿ ಗೇಟ್ ಬಂದ್ ಮಾಡುವ ಹಾಗೂ ತೆರೆಯುವ ಕೆಲಸ ಮಾಡುತ್ತಿದ್ಧಾರೆ. ಇದೂ ಸಾಕಷ್ಟು ವಿಳಂಬಕ್ಕೆ ಕಾರಣ ಎಂದು ಸ್ಥಳೀಯರು ನೋವು ತೋಡಿಕೊಳ್ಳುತ್ತಾರೆ.

ಸೆಂಟ್ರಲ್ ಕಾಲೇಜು: ಹಲವು ಪದವಿ ಕೋರ್ಸ್

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು ಆವರಣದಲ್ಲಿ 2022–23ನೇ ಶೈಕ್ಷಣಿಕ ವರ್ಷದಿಂದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಪದವಿ ಹಂತದ ಕೋರ್ಸ್ ಗಳನ್ನು ಆರಂಭಿಸಲು ತೀರ್ಮಾನಿಸಲಾಗಿದೆ.

'ಸೆಂಟ್ರಲ್ ಕಾಲೇಜಿನ ಗತವೈಭವ ವನ್ನು ಪುನರುಜ್ಜೀವನಗೊಳಿಸುವ ಉದ್ದೇಶದಿಂದ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಯ ಆಶೋತ್ತರಗಳಂತೆ ಈ ತೀರ್ಮಾನ ಕೈಗೊಳ್ಳಲಾಗಿದೆ' ಎಂದು ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆಂಟ್ರಲ್ ಕಾಲೇಜು ಆವರಣದಲ್ಲಿನ ಬಿಎ(ಬೇಸಿಕ್/ಆನರ್ಸ್) ಕೋರ್ಸ್‌ನಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ, ಸಂಸ್ಕೃತ, ಫ್ರೆಂಚ್, ಜರ್ಮನ್ ಭಾಷೆಗಳನ್ನು ಅಧ್ಯಯನ ಮಾಡಬಹುದಾಗಿದೆ. ಕನ್ನಡ, ಇಂಗ್ಲಿಷ್, ಫ್ರೆಂಚ್, ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಪತ್ರಿಕೋದ್ಯಮ ವಿಷಯ ಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಎಂದಿದ್ದಾರೆ.

ಜತೆಗೆ, ಬಿಎಸ್‌ಡಬ್ಲ್ಯು(ಬೇಸಿಕ್/ಆನರ್ಸ್), ಬಿ.ಎಸ್ಸಿ. ಅಥವಾ ಎಂ.ಎಸ್ಸಿ ಇಂಟಿಗ್ರೇಟೆಡ್ ಕೋರ್ಸ್ ಹಾಗೂ ಬಿ.ಎಸ್ಸಿ (ಬೇಸಿಕ್/ಆನರ್ಸ್) ಮತ್ತು ಬಿ.ಕಾಂ. (ಬೇಸಿಕ್/ಆನರ್ಸ್) ಕೋರ್ಸ್‌ಗಳು ಲಭ್ಯ ಎಂದು ವಿವರಿಸಿದ್ದಾರೆ.

ಮಲ್ಲೇಶ್ವರದ 13ನೇ ಕ್ರಾಸ್‌ನಲ್ಲಿರುವ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಈಗಾಗಲೇ ಕಳೆದ ವರ್ಷದಿಂದ ವಿಶ್ವವಿದ್ಯಾಲಯದ ಮಹಿಳಾ ಕಾಲೇಜು ಆರಂಭಿಸಲಾಗಿದೆ.

ಈ ಕಾಲೇಜಿನಲ್ಲಿ ಕನ್ನಡ, ಇಂಗ್ಲಿಷ್, ಫ್ರೆಂಚ್, ಜರ್ಮನ್, ಸಂಸ್ಕೃತ ಮತ್ತು ಹಿಂದಿ ವಿಷಯಗಳು ಹಾಗೂ ಬಿ.ಕಾಂ. (ಬೇಸಿಕ್/ಹಾನರ್ಸ್) ಪದವಿ, ಬಿ.ಎಸ್ಸಿ (ಬೇಸಿಕ್/ಹಾನರ್ಸ್) ಪದವಿಯಲ್ಲಿ ಕಂಪ್ಯೂಟರ್ ಸೈನ್ಸ್, ಭೌತವಿಜ್ಞಾನ, ಗಣಿತ, ಸಂಖ್ಯಾಶಾಸ್ತ್ರ, ಭೂಗೋಳ ವಿಜ್ಞಾನ ವಿಷಯಗಳು ಮತ್ತು ಬಿವಿಎ ಕೋರ್ಸ್‌ನಲ್ಲಿ (ಬೇಸಿಕ್/ಹಾನರ್ಸ್) ಅನಿಮೇಷನ್ ಮತ್ತು ಗ್ರಾಫಿಕ್ ಡಿಸೈನ್, ಬಿ.ಎ (ಬೇಸಿಕ್/ಹಾನರ್ಸ್) ಪದವಿಯಲ್ಲಿ ಕನ್ನಡ, ಇಂಗ್ಲಿಷ್, ಕಮ್ಯೂನಿಕೇಟಿವ್ ಇಂಗ್ಲಿಷ್, ಫ್ರೆಂಚ್, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ವಿಷಯಗಳು ಹಾಗೂ ಬಿಸಿಎ (ಬೇಸಿಕ್/ಹಾನರ್ಸ್) ಕೋರ್ಸ್ ಗಳು ಲಭ್ಯ ಎಂದು ತಿಳಿಸಿದ್ದಾರೆ.

ಆಸಕ್ತರು ಹೆಚ್ಚಿನ ವಿವರಗಳಿಗೆ www.bcu.ac.in ಹಾಗೂ ಆನ್‌ಲೈನ್ ನೋಂದಣಿ ಮತ್ತು ಅರ್ಜಿ ಸಲ್ಲಿಕೆಗಾಗಿ https://uucms.karnataka.gov.in ಭೇಟಿ ನೀಡಬಹುದು. ಜೂನ್ 18ರಿಂದಲೇ ಪ್ರವೇಶಾತಿ ಪ್ರಕ್ರಿಯೆ ಆರಂಭವಾಗಿದೆ ಎಂದು ತಿಳಿಸಿದ್ದಾರೆ.

ಸಂವಾದದಲ್ಲಿ ಮುದ್ರಾ ಯೋಜನೆಯ ಫಲಾನುಭವಿಗೆ ಪ್ರಧಾನಿ ನರೇಂದ್ರ ಮೋದಿ ಪ್ರಶ್ನೆ

‘ಕುರ್ತಾ ಹೊಲಿದು ಕೊಡುವಿರಾ?’

ಪ್ರಜಾವಾಣಿ ವಾರ್ತೆ

ಮೈಸೂರು: ‘ನಾನು ನಿಮಗೆ ಗೊತ್ತಾ? ನನಗೆ ಕುರ್ತಾ ಹೊಲಿದು ಕೊಡುವಿರಾ’ ಎಂದು ಪ್ರಧಾನಿ ನರೇಂದ್ರ ಮೋದಿಯವರು ಕೇಳಿದಾಗ ಚಾಮರಾಜನಗರದ ಹನೂರಿನ ಟೇಲರ್ ಅಂಬಿಕಾ ಅವರ ಕಣ್ಣಲ್ಲಿ ಅಚ್ಚರಿ, ಸಂತಸ ಏಕಕಾಲಕ್ಕೆ ಮೂಡಿತ್ತು.

ನಗರದ ಮಹಾರಾಜ ಕಾಲೇಜು ಮೈದಾನದ ಬೃಹತ್ ವೇದಿಕೆಯ ಹಿಂಭಾಗದಲ್ಲಿ ಸೋಮವಾರ ಸಂಜೆ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಮೈಸೂರು ವಿಭಾಗದ ಫಲಾನುಭವಿಗಳೊಂದಿಗೆ ಪ್ರಧಾನಿ ನಡೆಸಿದ ಸಂವಾದ ಇಂಥ ಸನ್ನಿವೇಶಗಳಿಗೆ ಸಾಕ್ಷಿಯಾಗಿತ್ತು.

ಅಂಬಿಕಾಅವರು‘ಮುದ್ರಾಯೋಜನೆಯಿಂದ ಹೊಲಿಗೆ ವೃತ್ತಿ ಆರಂಭಿಸಿದ್ದೇನೆ. ಪತಿಯೂ ಸಹಕರಿಸುತ್ತಿದ್ದಾರೆ’ ಎಂದಾಗ ಪ್ರಧಾನಿ, ‘ಕುರ್ತಾ ಹೊಲಿದು ಕೊಡುವಿರಾ’ ಎಂದು ಕೇಳಿದರು.

‘ಖಂಡಿತಾ.. ಸರ್.. ನಿಮ್ಮೊಂದಿಗೆ ಮಾತನಾಡುತ್ತಿರುವ ಗಳಿಗೆ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕು’ ಎಂದು ಅಂಬಿಕಾ ಸಂತಸ ವ್ಯಕ್ತಪಡಿಸಿದರು.

ಪ್ಲಾಸ್ಟಿಕ್ ಹೂ ನಿಷೇಧಿಸಿ: ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆಯ ಫಲಾನುಭವಿ ಮಂಡ್ಯ ಜಿಲ್ಲೆ ಮಳವಳ್ಳಿಯ ಕೃಷಿಕ ಸಂದೀಪ್, ‘₹ 14 ಲಕ್ಷ ವೆಚ್ಚದಲ್ಲಿ ಜರ್ಬೆರಾ ಅಲಂಕಾರಿಕ ಹೂ ಬೆಳೆದಿದ್ದೆ. ಚೀನಾ, ಥಾಯ್ಲೆಂಡ್‌ನ ಪ್ಲಾಸ್ಟಿಕ್ ಹೂಗಳು ಹೊಡೆತ ನೀಡಿವೆ. ಅವುಗಳನ್ನು ಬ್ಯಾನ್ ಮಾಡಿ’ ಎಂದು ಕೋರಿದರು.

ಸೋಮಶೇಖರ್ ಎಂಬುವವರು, ‘ನರೇಗಾ ಯೋಜನೆಯಡಿ ಕುಟುಂಬದ 15 ಮಂದಿಗೆ ಉದ್ಯೋಗ ಸಿಕ್ಕಿದೆ. ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ’ ಎಂದು ತಿಳಿಸಿದರು.

‘ನಾಗರಹೊಳೆ ಕಾಡಿನಲ್ಲಿದ್ದ ನಮಗೆ ಪುನರ್ವಸತಿ ಯೋಜನೆಯಲ್ಲಿ 5 ಎಕರೆ ಸಿಕ್ಕಿದೆ. ಆಯುಷ್ಮಾನ್ ಆರೋಗ್ಯ ಯೋಜನೆಯಡಿ ಪತಿಯ ಕಿಡ್ನಿ ಶಸ್ತ್ರಚಿಕಿತ್ಸೆ ನಡೆದರೂ ಪತಿ ತೀರಿಕೊಂಡರು’ ಎಂದು ಮೈಸೂರಿನ ಎರವ ಸಮುದಾಯದ ಮಹಿಳೆ ವೀಣಾ ಹೇಳಿದರು.

ಮೋದಿ, ‘ನಿಮಗೆ ಆಯುಷ್ಮಾನ್ ಯೋಜನೆ ಬಗ್ಗೆ ಹೇಗೆ ಗೊತ್ತಾಯಿತು’ ಎಂದರು. ‘ಆಯುಷ್ಮಾನ್ ಯೋಜನೆ ಆರಂಭವಾದಾಗ ಕಾರ್ಡ್ ಮಾಡಿಸಿಕೊಳ್ಳುವಂತೆ ಯಾರೋ ಒಬ್ಬರು ಹೇಳಿದ್ದರು. ಅದು ಪತಿಯ ಶಸ್ತ್ರಚಿಕಿತ್ಸೆಗೆ ನೆರವಾಯಿತು’ ಎಂದರು.

ಹುಣಸೂರು ತಾಲ್ಲೂಕು ಸಿರಿಯೂರಿನ ಮಹೇಶ್, ‘ಬಾಳೆ, ಪಪ್ಪಾಯ ಬೆಳೆಯುತ್ತಿದ್ದೇನೆ. ಪಿಎಂ ಕಿಸಾನ್ ಯೋಜನೆ ಅನುಕೂಲವಾಗಿದೆ. ಕೊರೊನಾ ವೇಳೆ ನಾನೇ ಊರುಗಳಿಗೆ ಹೋಗಿ ವ್ಯಾಪಾರ ಮಾಡಿದೆ. ಕೃಷಿ ಸೌಲಭ್ಯಗಳ ಕುರಿತು ಜಾಗೃತಿ ಮೂಡಿಸುತ್ತಿದ್ದೇನೆ’ ಎಂದರು.

‘ಮೊದಲು ಕೂಲಿ ಮಾಡುತ್ತಿದ್ದೆ. ಸರ್ಕಾರದ ಯೋಜನೆಯ ಸಾಲದಲ್ಲಿ ಟಿಲ್ಲರ್ ಖರೀದಿಸಿ, ಜೀವನ ನಡೆಸುತ್ತಿದ್ದೇನೆ’ ಎಂದು ಹಾಸನ ಜಿಲ್ಲೆಯ ಆಲೂರಿನ ಪುಟ್ಟ ರಂಗನಾಥ ಹೇಳಿದರು.

ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಇರುವ ತಿಳಿವಳಿಕೆಯನ್ನು ಶ್ಲಾಘಿಸಿದ ಪ್ರಧಾನಿ, ‘ಯೋಜನೆಗಳ ಮಾಹಿತಿಯನ್ನು ಬಡವರು, ರೈತರಿಗೆ ತಲುಪಿಸಬೇಕು’ ಎಂದು ಸಲಹೆ ನೀಡಿದರು.



ಕೇಂದ್ರ ಪುರಸ್ಕೃತ ಯೋಜನೆಗಳ ಫಲಾನುಭವಿಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರು ಮೈಸೂರಿನಲ್ಲಿ ಸೋಮವಾರ ಸಂವಾದ ನಡೆಸಿದ ಸಂದರ್ಭ ಮಂಡ್ಯ ಜಿಲ್ಲೆ ಕಿಕ್ಕೇರಿಯ ಯಶೋದಾ ಸುರೇಶ್ ಮಾತನಾಡಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಇದ್ದಾರೆ

‘ನಾನು ನಿಮ್ಮ ಮನೆಗೆ ಬರಲೇ?’

ಪ್ರಧಾನಮಂತ್ರಿ ಆವಾಸ್ ಯೋಜನೆಯ ಫಲಾನುಭವಿ ಮಂಡ್ಯದ ಕಿಕ್ಕೇರಿ ಹೋಬಳಿ ಉದ್ದಿನಮಲ್ಲನ ಹೊಸೂರಿನ ಯಶೋದಾ ಸುರೇಶ್, ‘ಮೊದಲು ಮನೆಯಿರಲಿಲ್ಲ, ಎರಡು ವರ್ಷದ ಹಿಂದೆ ಮನೆ ಕಟ್ಟಿಸಿಕೊಂಡಿದ್ದೇನೆ. ಮಹಿಳಾ ಸಂಘದ ಪ್ರತಿನಿಧಿಯಾಗಿದ್ದೇನೆ’ ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಮೋದಿ, ‘ಮನೆ ಕಟ್ಟಿದ ನಂತರ ಅತಿಥಿಗಳು ಬರುತ್ತಾರಾ? ಚೆನ್ನಾಗಿ ಅಡುಗೆ ಮಾಡುವಿರಾ? ಹಾಗಿದ್ದರೆ ನಿಮ್ಮ ಮನೆಗೆ ಬರಲೇ’ ಎಂದು ಕೇಳಿದರು.

ಸಂತೋಷದಿಂದ ಉತ್ತರಿಸಿದ ಯಶೋದಾ, ‘ಬನ್ನಿ ಸರ್, ಮಾಡೋಣಾ..’ ಎಂದು ನಗುತ್ತ ಉತ್ತರಿಸಿದರು.



ಬೆಂಗಳೂರಿನಲ್ಲಿ `ಬಿ.ಆರ್‌ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ’ದ ನೂತನ ಕ್ಯಾಂಪಸ್ಸನ್ನು ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ವಿದ್ಯಾರ್ಥಿಗಳ ಜತೆ ಫೋಟೊ ತೆಗೆಸಿಕೊಂಡರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಸಿ.ಎನ್. ಅಶ್ವತ್ಥನಾರಾಯಣ, ವಿ.ಸುನೀಲ್ ಕುಮಾರ್, ಬಿ. ಶ್ರೀರಾಮುಲು, ಕೋಟ ಶ್ರೀನಿವಾಸಪೂಜಾರಿ ಇದ್ದರು

ಮೇಲ್ದರ್ಜೆಗೇರಿಸಿದ 150 ಸರ್ಕಾರಿ ಐಟಿಐಗಳ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಸಮೂಹದ ನೆರವಿನೊಂದಿಗೆ ಕರ್ನಾಟಕ ಸರ್ಕಾರವು ₹4,736 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಿರುವ 150 ಸರ್ಕಾರಿ ಐಟಿಐಗಳನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಸೋಮವಾರ ಉದ್ಘಾಟಿಸಿದರು.

ರಾಜ್ಯದ 150 ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಗಳನ್ನು ರಾಷ್ಟ್ರ ಮಟ್ಟದ ತಾಂತ್ರಿಕ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಟಾಟಾ ಟೆಕ್ನಾಲಜೀಸ್ ಲಿಮಿಟೆಡ್ (ಟಿಟಿಎಲ್) ಮತ್ತು ಇತರ 20 ಕೈಗಾರಿಕಾ ಸಂಸ್ಥೆಗಳ ಸಹಯೋಗ ಇದಕ್ಕಿದೆ. ‘ಉದ್ಯೋಗ’ ಹೆಸರಿನ ಈ ವಿನೂತನ ಯೋಜನೆಯಡಿ ಜಾಗತಿಕ ಕೈಗಾರಿಕೆ, ಅಸೆಂಬ್ಲಿ ಲೈನುಗಳು ಮತ್ತು ಉದ್ಯೋಗಾವಕಾಶಗಳಿಗಾಗಿ ಅತ್ಯಾಧುನಿಕ ತಂತ್ರಜ್ಞಾನ ತರಬೇತಿ ನೀಡಲಾಗುವುದು. ಇದರಿಂದ ರಾಜ್ಯದ 1.70 ಲಕ್ಷ ವಿದ್ಯಾರ್ಥಿಗಳಿಗೆ ಲಾಭವಾಗಲಿದೆ.

ಹರ್ಷಗೊಂಡ ಮೋದಿ: ಉನ್ನತೀಕರಿಸಿದ ಐಟಿಐಗಳ ಚಾಲನೆ ಗುಂಡಿಯನ್ನು ಒತ್ತುತ್ತಿದ್ದಂತೆಯೇ, ರಾಜ್ಯಾದ್ಯಂತ ಇರುವ ಐಟಿಐಗಳೆಲ್ಲ ಕ್ರಿಯಾಶೀಲವಾದುದನ್ನು ಕಂಡು ಪ್ರಧಾನಿ ಮೋದಿ ಹರ್ಷ ವ್ಯಕ್ತಪಡಿಸಿದರು.

ಉದ್ಘಾಟನೆ ಮುಗಿಯುತ್ತಿದ್ದಂತೆ ನೇರವಾಗಿ ವಿದ್ಯಾರ್ಥಿಗಳ ಬಳಿ ತೆರಳಿದ ಮೋದಿ, ಕೆಲ ನಿಮಿಷಗಳನ್ನು ಅವರ ಜತೆ ಕಳೆದು ಶೈಕ್ಷಣಿಕ ಪ್ರಗತಿಯ ಬಗ್ಗೆ ವಿಚಾರಿಸಿದರು. ಈ ಕ್ಷಣವನ್ನು ಕ್ಯಾಮರಾಗಳು ಸೆರೆ ಹಿಡಿದವು. ಅದರಿಂದ ಸಮಾಧಾನಗೊಳ್ಳದ ಪ್ರಧಾನಿ, ‘ಅಲ್ಲಿರುವ ಮೆಟ್ಟಿಲ ಬಳಿಗೆ ನೀವೆಲ್ಲ ಬನ್ನಿ. ಅಲ್ಲಿ ಫೋಟೋ ಸೆಷನ್ ಆಗಲಿ’ ಎಂದು ಹೇಳಿದರು.

ಬಳಿಕ ಅವರು ಉನ್ನತೀಕರಿಸಿರುವ ಐಟಿಐ ಮಾದರಿಯನ್ನು ವೀಕ್ಷಿಸಲು ತೆರಳಿದರು. ಸಿಬ್ಬಂದಿಯಿಂದ ಐಟಿಐ ಸಾಧನ–ಸಲಕರಣೆಗಳ ಬಗ್ಗೆಯೂ ಮಾಹಿತಿ ಪಡೆದುಕೊಂಡರು. ಆ ಬಳಿಕ ಕ್ಯಾಂಪಸ್ಸಿನ ಮೆಟ್ಟಿಲುಗಳ ಬಳಿ ತೆರಳಿ ವಿದ್ಯಾರ್ಥಿಗಳ ಜತೆ ಫೋಟೊ ತೆಗೆಸಿಕೊಂಡರು.

ಈ ಸಂದರ್ಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದಜೋಶಿ, ಸಚಿವರಾದ ವಿ.ಸೋಮಣ್ಣ, ಶ್ರೀನಿವಾಸಪೂಜಾರಿ, ಸುನಿಲ್‌ಕುಮಾರ್, ಬಿ.ಶ್ರೀರಾಮುಲು, ಕುಲಪತಿ ಡಾ.ಭಾನುಮೂರ್ತಿ ಮತ್ತು ಅಧಿಕಾರಿಗಳು ಇದ್ದರು.

‘ಸೆಂಟರ್ ಫಾರ್ ಬ್ರೇನ್ ರೀಸರ್ಚ್’ ಉದ್ಘಾಟನೆ ● ಕ್ರಿಸ್ ಗೋಪಾಲಕೃಷ್ಣನ್ ದೇಣಿಗೆಯಿಂದ ನಿರ್ಮಾಣ

ಮಿದುಳಿನ ರಹಸ್ಯ ಅರಿಯುವ ಸಂಶೋಧನಾ ಕೇಂದ್ರ !

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಯೋಸಂಬಂಧಿ ಮಿದುಳಿನ ಸ್ವಾಸ್ಥ್ಯ ಕುರಿತ ಸಂಶೋಧನೆ, ಚಿಕಿತ್ಸೆ ಮತ್ತು ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ಉದ್ದೇಶದ ‘ಸೆಂಟರ್ ಫಾರ್ ಬ್ರೇನ್ ರೀಸರ್ಚ್’ ಅನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಸೋಮವಾರ ಉದ್ಘಾಟಿಸಿದರು.

ಇಲ್ಲಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಸ್ಥಾಪನೆಗೊಂಡಿರುವ ಈ ಕೇಂದ್ರವು ಮಿದುಳು ಸಂಶೋಧನೆಯ ಅಂತರರಾಷ್ಟ್ರೀಯ ಮಟ್ಟದ ಕೇಂದ್ರವಾಗಲಿದೆ. ಇನ್ಫೋಸಿಸ್ ಸಹ ಸಂಸ್ಥಾಪಕ ಕ್ರಿಸ್ ಗೋಪಾಲಕೃಷ್ಣನ್ ಮತ್ತು ಸುಧಾ ಗೋಪಾಲಕೃಷ್ಣನ್ ಅವರು ಈ ಸಂಸ್ಥೆಯ ಸ್ಥಾಪಕರಾಗಿದ್ದು, ಸ್ವಾಯತ್ತ ಮತ್ತು ಲಾಭ ರಹಿತ ಸಂಶೋಧನಾ ಕೇಂದ್ರವಾಗಿದೆ. ₹280 ಕೋಟಿ ವೆಚ್ಚದಲ್ಲಿ ಕೇಂದ್ರವನ್ನು ನಿರ್ಮಿಸಲಾಗಿದೆ. ಈ ಮೊತ್ತವನ್ನು ಕ್ರಿಸ್ ಗೋಪಾಲಕೃಷ್ಣನ್ ಭರಿಸಿದ್ದಾರೆ.

ಆರೋಗ್ಯ ಮತ್ತು ಕಾಯಿಲೆಗಳ ಸಂದರ್ಭದಲ್ಲಿ ಮಿದುಳು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳುವ ಮೂಲಭೂತ ಸಂಶೋಧನೆ ಇಲ್ಲಿ ನಡೆಯಲಿದೆ. ಜತೆಗೆ, ಡೆಮೆನ್ಷಿಯಾ (ಮರೆವು ಸಂಬಂಧಿ ಕಾಯಿಲೆ) ಮತ್ತು ಇತರ ವಯೋಸಂಬಂಧಿ ಕಾಡುವ ಮಿದುಳಿನ ಕಾಯಿಲೆಗಳಿಗೆ ಸೂಕ್ತ ಮತ್ತು ತರ್ಕ ಬದ್ಧ ಚಿಕಿತ್ಸೆಗಳನ್ನು ಶೋಧಿಸಲಾಗುವುದು. ಇದಕ್ಕಾಗಿ ಅಂತರ್‌ಶಿಸ್ತೀಯ ನರವಿಜ್ಞಾನ ಸಂಶೋಧನಾ ಕಾರ್ಯಕ್ರಮಕ್ಕೆ ಇಲ್ಲಿ ಹೆಚ್ಚಿನ ಒತ್ತು ನೀಡಲಾಗುವುದು.

ಮುಪ್ಪಿನತ್ತ ಸಾಗುವ ವ್ಯಕ್ತಿಗಳಲ್ಲಿ, ರೋಗಿಗಳಲ್ಲಿ ಮತ್ತು ಆರೋಗ್ಯಯುತ ಜನರಲ್ಲಿ ಅರಿವು, ಅನುವಂಶಿಕತೆ ಮತ್ತು ಮಿದುಳಿನ ಚಿತ್ರಣದ (ಬ್ರೈನ್ ಇಮೇಜಿಂಗ್) ಮೂಲಕ ಸುದೀರ್ಘ ಕಾಲದ ಹಾಗೂ ಸಮಗ್ರ ಅಧ್ಯಯನ ನಡೆಸಲಾಗುವುದು. ಅಲ್ಲದೆ, ಮಿದುಳಿಗೆ ಸಂಬಂಧಿಸಿದಂತೆ ಸಮಗ್ರ ದತ್ತಾಂಶ ನಿರ್ವಹಣಾ ವ್ಯವಸ್ಥೆಯನ್ನೂ ರೂಪಿಸಿದ್ದು, ಈ ಮೂಲಕ ದೇಶದ ಯಾವುದೇ ಭಾಗದ ನರವಿಜ್ಞಾನಿಗಳು ಮಾಹಿತಿಯನ್ನು ಪಡೆಯಬಹುದು. ಮಾನವ ಮಿದುಳಿನ ನರವ್ಯೂಹ ವ್ಯವಸ್ಥೆಯ ಕ್ಷೀಣಿಸುವಿಕೆಯಿಂದ ಉಂಟಾಗುವ ಕಾಯಿಲೆಗಳಿಗೆ ದೇಶದ ವಿವಿಧ ಭಾಗಗಳಲ್ಲಿ ನಡೆಯುವ ಸಂಶೋಧನೆಗಳಿಗೂ ಇದು ವೇದಿಕೆಯಾಗಲಿದೆ.

ಐಐಎಸ್‌ಸಿ ನಿರ್ದೇಶಕ ಪ್ರೊ.ಜಿ.ರಂಗರಾಜನ್ ಅವರು ಮಿದುಳು ಸಂಶೋಧನಾ ಕೇಂದ್ರದ ಮಾಹಿತಿಗಳನ್ನು ಮೋದಿಯವರಿಗೆ ನೀಡಿದರು. ‘ಈ ಕೇಂದ್ರವು ನಗರ ಪ್ರದೇಶವಲ್ಲದೇ ಗ್ರಾಮೀಣ ಪ್ರದೇಶದ ಜನರ ಮಾನಸಿಕ ಆರೋಗ್ಯದ ಬಗ್ಗೆಯೂ ಸಂಶೋಧನೆ ನಡೆಸಲಿದೆ. ಗ್ರಾಮೀಣ ಪ್ರದೇಶದಲ್ಲಿ ಮಧುಮೇಹದಂತಹ ಪ್ರಕರಣಗಳು ನಗರ ಪ್ರದೇಶಗಳಿಗಿಂತ ಕಡಿಮೆ ಇದ್ದರೂ, ಡೆಮೆನ್ಷಿಯಾ ಸೇರಿದಂತೆ ಮಿದುಳಿಗೆ ಸಂಬಂಧಿಸಿದ ಕಾಯಿಲೆಗಳು ನಗರದಲ್ಲಿ ಇರುವಷ್ಟೇ ಪ್ರಮಾಣದಲ್ಲಿ ಇದೆ’ ಎಂಬುದನ್ನು ರಂಗರಾಜನ್ ಪ್ರಧಾನಿ ಗಮನಕ್ಕೆ ತಂದರು.


ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಸ್ಥಾಪನೆಗೊಂಡಿರುವ ಮಿದುಳು ಸಂಶೋಧನಾ ಕೇಂದ್ರದವನ್ನು ಪ್ರಧಾನಿ ನರೇಂದ್ರ ಮೋದಿ ವೀಕ್ಷಿಸಿದರು. ಈ ಸಂದರ್ಭದಲ್ಲಿ ಐಐಎಸ್‌ಸಿ ನಿರ್ದೇಶಕ ಪ್ರೊ ರಂಗರಾಜನ್, ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದರು

ಪ್ರಮುಖ ವಿಭಾಗಗಳು

- ಕ್ಲಿನಿಕಲ್ ರೀಸರ್ಚ್
- ನ್ಯೂರೋಬಯಲಾಜಿ ಆಫ್ ಡಿಸೀಸ್
- ಕಾಗ್ನಿಟಿವ್ ನ್ಯೂರೋಸೈನ್ಸ್
- ಜೆನಿಟಿಕ್ಸ್
- ಬ್ರೈನ್ ಇಮೇಜಿಂಗ್
- ಕಂಪ್ಯೂಟೇಷನ್ ಸೈನ್ಸ್, ಡೇಟಾ ಅನಾಲಿಟಿಕ್ಸ್



ಮಿದುಳಿನ ಬಗ್ಗೆ ಸಂಪೂರ್ಣ ಅರಿತುಕೊಳ್ಳುವ ಉದ್ದೇಶದಿಂದ ಈ ಸಂಸ್ಥೆ ಸ್ಥಾಪಿಸಲಾಗಿದೆ. ಮಿದುಳಿಗೆ ಸಂಬಂಧಿಸಿದಂತೆ ಜಾಗತಿಕ ಮಟ್ಟದ ಸಂಶೋಧನೆಗಳು ಇಲ್ಲಿ ನಡೆಯುತ್ತವೆ

ಕ್ರಿಸ್ ಗೋಪಾಲಕೃಷ್ಣನ್
ಇನ್ಫೋಸಿಸ್ ಸಹ ಸಂಸ್ಥಾಪಕ

ಬಾಗ್ಚಿ–ಪಾರ್ಥಸಾರಥಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ

ಭಾರತೀಯ ವಿಜ್ಞಾನ ಸಂಸ್ಥೆ ಆವರಣದಲ್ಲಿ ತಲೆಎತ್ತಲಿರುವ 800 ಹಾಸಿಗೆಗಳ ಸಾಮರ್ಥ್ಯದ ‘ಬಾಗ್ಚಿ–ಪಾರ್ಥಸಾರಥಿ’ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಕಟ್ಟಡಕ್ಕೆ ಪ್ರಧಾನಿ ನರೇಂದ್ರ ಮೋದಿ ಶಂಕುಸ್ಥಾಪನೆ ನೆರವೇರಿಸಿದರು.

ಈ ಆಸ್ಪತ್ರೆಯ ನಿರ್ಮಾಣಕ್ಕೆ ಉದ್ಯಮಿಗಳಾದ ಸುಸ್ಮಿತಾ ಮತ್ತು ಸುಬ್ರತೋ ಬಾಗ್ಚಿ, ರಾಧಾ ಮತ್ತು ಎನ್.ಎಸ್.ಪಾರ್ಥಸಾರಥಿಯವರು ಒಟ್ಟು ₹425 ಕೋಟಿ ದೇಣಿಗೆ ನೀಡಿದ್ದಾರೆ. ವಿಜ್ಞಾನ, ಎಂಜಿನಿಯರಿಂಗ್ ಮತ್ತು ಮೆಡಿಸಿನ್ ಒಂದೇ ಸೂರಿನಡಿ ಲಭ್ಯತೆ ಇರುವುದರಿಂದ ವಿಶಿಷ್ಟ ಸಂಸ್ಥೆಯಾಗಿಯೂ ಅಭಿವೃದ್ಧಿಗೊಳ್ಳಲಿದೆ. ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳನ್ನೂ ಇಲ್ಲಿ ಆರಂಭಿಸಲಾಗುತ್ತದೆ.

ಏಕಕಾಲಕ್ಕೆ ವೈದ್ಯ ಮತ್ತು ವಿಜ್ಞಾನಿಯಾಗುವ ಅವಕಾಶ ಒದಗಿಸುವ ಎಂಡಿ–ಪಿಎಚ್‌ಡಿ ಕಾರ್ಯಕ್ರಮವನ್ನೂ ಒಳಗೊಂಡಿದೆ. ಕ್ಲಿನಿಕಲ್ ಸಂಶೋಧನೆಯ ಜತೆಗೆ ಹೊಸ ಬಗೆಯ ಚಿಕಿತ್ಸೆಗಳ ಆವಿಷ್ಕಾರ ಮಾಡುವುದಕ್ಕೂ ಅವಕಾಶ ಸಿಗಲಿದೆ. ಆಸ್ಪತ್ರೆಯಲ್ಲಿ ವೈದ್ಯರಾಗಿ, ವಿಜ್ಞಾನ ಮತ್ತು ಎಂಜಿನಿಯರಿಂಗ್ ಪ್ರಯೋಗಾಲಯಗಳಲ್ಲಿ ವಿಜ್ಞಾನಿಯೂ ಕಾರ್ಯನಿರ್ವಹಿಸಬಹುದು.

ಐಐಎಸ್‌ಸಿಯಲ್ಲಿ ಅಂತರ್‌ಶಿಸ್ತೀಯ ತರಬೇತಿ, ಸಂಶೋಧನೆ ಮತ್ತು ಕ್ಯಾನ್ಸರ್ ಹಾಗೂ ಹೃದ್ರೋಗದಂತಹ ಕಾಯಿಲೆಗಳ ಕ್ಷೇತ್ರದಲ್ಲಿ ವಿನೂತನ ಚಿಕಿತ್ಸೆಗಳಿಗೆ ಆವಿಷ್ಕಾರವೂ ನಡೆಯಲಿದೆ. ಪ್ಲಾಸ್ಟಿಕ್ ಸರ್ಜರಿ, ರೋಬೋಟಿಕ್ ಸರ್ಜರಿ, ಅಂಗಾಂಗ ಕಸಿ ಕೂಡ ಇಲ್ಲಿ ನಡೆಯಲಿದೆ.

‘ಬೇಸ್ ಕಟ್ಟಡ ನಿರ್ಮಿಸಿದ್ದು ಕಾಂಗ್ರೆಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ (ಬೇಸ್) ಕಟ್ಟಡವನ್ನು ನಿರ್ಮಿಸಿದ್ದು ಕಾಂಗ್ರೆಸ್ ಸರ್ಕಾರ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಬೇಸ್‌ನ ನೂತನ ಕ್ಯಾಂಪಸ್ಸನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಉದ್ಘಾಟಿಸುತ್ತಿದ್ದಂತೆ ಟ್ವೀಟ್ ಮಾಡಿರುವ ಸಿದ್ದರಾಮಯ್ಯ, ‘ಬೇಸ್ ಕಟ್ಟಡದ ಶಂಕುಸ್ಥಾಪನೆ ಮಾಡಿದ್ದು ರಾಷ್ಟ್ರಪತಿಯಾಗಿದ್ದ ಪ್ರಣಬ್ ಮುಖರ್ಜಿ. ಈ ಕಟ್ಟಡವನ್ನು ಆರು ತಿಂಗಳಲ್ಲಿ ಪೂರ್ಣಗೊಳಿಸಿದ್ದು ನಮ್ಮ ಸರ್ಕಾರದ ಸಾಧನೆ. ಜ್ಞಾನಭಾರತಿ ಕ್ಯಾಂಪಸ್‌ನಲ್ಲಿನ ಕಟ್ಟಡದಲ್ಲಿ 2017ರ ಜೂನ್‌ನಲ್ಲಿ ಬಿ.ಎಸ್‌ಸಿ (ಹಾನರ್ಸ್) ಎಕನಾಮಿಕ್ಸ್ ತರಗತಿಗಳು ಆರಂಭವಾಗಿತ್ತು’ ಎಂದಿದ್ದಾರೆ.


ಸಿದ್ದರಾಮಯ್ಯ

‘ಐದು ವರ್ಷಗಳ ಹಿಂದೆ 2017ರ ಅ. 4ರಂದು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಬೆಂಗಳೂರಿಗೆ ಬಂದು ಬೇಸ್ ಉದ್ಘಾಟಿಸಿದ್ದು, ನಾನು ಮುಖ್ಯಮಂತ್ರಿಯಾಗಿದ್ದ ಕಾಲದ ಮಧುರ ಮತ್ತು ಸಾರ್ಥಕ ನೆನಪು. ವಿಶ್ವ ಕಂಡ ಅಪ್ರತಿಮ ಆರ್ಥಿಕ ತಜ್ಞ ಅಂಬೇಡ್ಕರ್ ಅವರ 125ನೇ ಹುಟ್ಟು ಹಬ್ಬದ ನೆನಪಿಗೆ ಸ್ಮಾರಕ ರೂಪದಲ್ಲಿ ಯೋಜನೆಯೊಂದನ್ನು ರೂಪಿಸಬೇಕೆಂಬ ನಮ್ಮ ಸರ್ಕಾರದ ಕನಸು ನನಸಾಗಿ ರೂಪುಗೊಂಡದ್ದು ಬೇಸ್’ ಎಂದಿದ್ದಾರೆ.

‘ಬೇಸ್‌ಗೆ 2017ರಲ್ಲಿಯೇ 43.45 ಎಕರೆ ಜಮೀನು ಮತ್ತು ಹೊಸ ಕಟ್ಟಡ ಸಹಿತ ಮೂಲಸೌಕರ್ಯ ನಿರ್ಮಾಣಕ್ಕೆ ₹ 350 ಕೋಟಿ ಮಂಜೂರು ಮಾಡಿದ್ದ ನಮ್ಮ ಸರ್ಕಾರ, ಬದ್ಧತೆಯಿಂದ ಈ ಯೋಜನೆ ಸಾಕಾರಗೊಳಿಸಿತ್ತು’ ಎಂದೂ ತಿಳಿಸಿದ್ದಾರೆ.

ಅಂಬೇಡ್ಕರ್ ಆಶಯಗಳಿಗೂ ಚಾಲನೆ ಸಿಗಲಿ: ‘ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಕಟ್ಟಡ ಉದ್ಘಾಟಿಸಿರುವ ಮೋದಿ, ತಮ್ಮ ಅವಧಿಯಲ್ಲಿ ವಿಷಪೂರಿತವಾಗಿ ಹೆಚ್ಚಾಗಿರುವ ಧಾರ್ಮಿಕ ದ್ವೇಷ, ಅಸಹನೆ, ಅಸಂವಿಧಾನಿಕ ವಾತಾವರಣವನ್ನು ನಿಯಂತ್ರಿಸುವ ಮೂಲಕ ಅಂಬೇಡ್ಕರ್ ಆಶಯಗಳಿಗೂ ಚಾಲನೆ ನೀಡಲಿ’ ಎಂದು ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ ಅಭಿಪ್ರಾಯ ಪಟ್ಟಿದ್ದಾರೆ.

‘ನಾಡ ಪ್ರಗತಿಗೆ ಕೇಂದ್ರದ ಹೆಗಲು’

ಒಂದನೇ ಪುಟದಿಂದ

ಉನ್ನತ ಶಿಕ್ಷಣ, ಸಂಶೋಧನೆ, ಕೌಶಲಾಭಿವೃದ್ಧಿ, ಆರೋಗ್ಯ ಸೇವೆ, ಸಂಪರ್ಕ ವ್ಯವಸ್ಥೆ ಸುಧಾರಣೆಗೆ ಪೂರಕವಾದ ಹಲವು ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಐದು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ಮತ್ತು ಏಳು ರೈಲ್ವೆ ಕಾಮಗಾರಿಗಳಿಗೆ ಚಾಲನೆ ದೊರಕಿದೆ. ಜೀವನ ನಿರ್ವಹಣೆಯನ್ನು ಸುಲಭಗೊಳಿಸುವುದರ ಜತೆಯಲ್ಲೇ ವ್ಯಾಪಾರ, ವಹಿವಾಟು ನಡೆಸುವುದನ್ನೂ ಸುಲಭಗೊಳಿಸುವತ್ತ ಕೇಂದ್ರ ಸರ್ಕಾರ ಹೊಂದಿರುವ ದೂರದೃಷ್ಟಿಗೆ ಇದು ಸಾಕ್ಷಿ ಎಂದರು.

ಯಲಹಂಕ– ಪೆನುಕೊಂಡ ರೈಲ್ವೆ ಮಾರ್ಗದ ಅಭಿವೃದ್ಧಿಯು ಅಂತರರಾಜ್ಯ ಸಂಪರ್ಕ ಸುಧಾರಣೆಗೆ ಕಾರಣವಾಗಲಿದೆ. ಕಳೆದ ಕೆಲವು ವರ್ಷಗಳಲ್ಲಿ ಇಲ್ಲಿ 1,200 ಕಿ.ಮೀ. ಉದ್ದದ ರೈಲ್ವೆ ಮಾರ್ಗಗಳ ನಿರ್ಮಾಣ, ಸುಧಾರಣೆ ನಡೆದಿದೆ ಎಂದು ಪ್ರಧಾನಿ ಹೇಳಿದರು.

ತ್ವರಿತ ಅನುಷ್ಠಾನಕ್ಕೆ ಕ್ರಮ: ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ, ಬೆಂಗಳೂರು ಉಪನಗರ ವರ್ತುಲ ರಸ್ತೆ, ‘ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್’ ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಿದ ಮೋದಿ, ‘ಈ ಎಲ್ಲ ಕಾಮಗಾರಿಗಳೂ ತ್ವರಿತವಾಗಿ ಪೂರ್ಣಗೊಳ್ಳಲಿವೆ. ರಸ್ತೆ, ರೈಲು, ವಿಮಾನ ಮತ್ತು ಜಲಸಾರಿಗೆ ಮಾರ್ಗಗಳನ್ನು ಬೆಸೆಯುವ ಕೆಲಸ ಆಗಲಿದೆ’ ಎಂದರು.

ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್ ಅಭಿವೃದ್ಧಿಯು ಕರ್ನಾಟಕವನ್ನು ಹಲವು ರಾಜ್ಯಗಳ ಜತೆ ಬೆಸೆಯಲಿದೆ. ಈ ಯೋಜನೆಯಿಂದ ರಾಜ್ಯದಲ್ಲಿ ಸಾವಿರಾರು ಉದ್ಯೋಗಗಳು ಸೃಷ್ಟಿಯಾಗಲಿವೆ. ಸರಕು ಸಾಗಣೆಯ ವೆಚ್ಚವನ್ನು ಗಣನೀಯವಾಗಿ ತಗ್ಗಿಸಲಿದೆ ಎಂದು ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಎಸ್.ಟಿ. ಸೋಮಶೇಖರ್, ವಿ. ಸೋಮಣ್ಣ, ಸಂಸದರಾದ ಡಿ.ವಿ. ಸದಾನಂದ ಗೌಡ, ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ ಉಪಸ್ಥಿತರಿದ್ದರು.

‘ಖಾಸಗಿ ಕ್ಷೇತ್ರದ ಬಗ್ಗೆ ಅನಗತ್ಯ ಟೀಕೆ ಸಲ್ಲದು’

‘ಈಗಲೂ ಖಾಸಗಿ ಕ್ಷೇತ್ರವನ್ನು ಟೀಕಿಸುವುದರಲ್ಲೇ ಮಗ್ನರಾಗಿರುವ ಅಧಿಕಾರಶಾಹಿ ಮನಸ್ಥಿತಿಯ ಜನರು ಹೇಗೆ ತಮ್ಮ ಯೋಚನಾ ಕ್ರಮವನ್ನು ಬದಲಿಸಿಕೊಳ್ಳಬೇಕು ಎಂಬ ಪಾಠವನ್ನು ಬೆಂಗಳೂರು ನಗರ ಕಲಿಸುತ್ತಿದೆ’ ಎಂದು ಪ್ರಧಾನಿ ಮೋದಿ ಹೇಳಿದರು.

ಖಾಸಗಿ ಕ್ಷೇತ್ರವನ್ನು ಟೀಕಿಸುವವರ ವಿರುದ್ಧ ವಾಗ್ದಾಳಿ ನಡೆಸಿದ ಅವರು, ‘ದೇಶದ ಪ್ರಗತಿಯಲ್ಲಿ ಸಕ್ರಿಯವಾಗಿ ಕೈಜೋಡಿಸುತ್ತಿರುವುದಕ್ಕೆ ಖಾಸಗಿ ಕ್ಷೇತ್ರವನ್ನು ನಾನು ಅಭಿನಂದಿಸುತ್ತೇನೆ. ಸಾರ್ವಜನಿಕ ಕ್ಷೇತ್ರದಂತೆ ಖಾಸಗಿ ಕ್ಷೇತ್ರವೂ ಈ ದೇಶದ ಆಸ್ತಿ’ ಎಂದರು.

ಸರ್ಕಾರಿ– ಖಾಸಗಿ ಸಹಭಾಗಿತ್ವದ (ಪಿಪಿಪಿ) ಯೋಜನೆಗಳಿಗೆ ಚಾಲನೆ ನೀಡುವಾಗ ಈ ವಿಷಯ ಪ್ರಸ್ತಾಪಿಸಿದ ಪ್ರಧಾನಿ, ‘ನಮ್ಮ ಸರ್ಕಾರವು ಉದ್ಯೋಗ ಸೃಜಿಸುವವರು, ಆಸ್ತಿ ಸೃಜಿಸುವವರ ಪರವಾಗಿದೆ. ಎಂಟು ವರ್ಷಗಳಿಂದಲೂ ಅದೇ ದಿಕ್ಕಿನಲ್ಲಿ ಕೆಲಸ ಮಾಡುತ್ತಿದೆ’ ಎಂದರು.

ಮೋದಿಯಂಥ ಮುತ್ಸದ್ದಿ ಕಂಡಿಲ್ಲ: ಬಸವರಾಜ ಬೊಮ್ಮಾಯಿ

ಒಂದನೇ ಪುಟದಿಂದ

ದೇಶ ಈಗ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮದಲ್ಲಿದೆ. ಈಗ ದೇಶವನ್ನು ಮುನ್ನಡೆಸುತ್ತಿರುವ ಮೋದಿಯವರು, ಮುಂದಿನ 25 ವರ್ಷಗಳಿಗಾಗಿ ದೂರದೃಷ್ಟಿಯ ಯೋಜನೆಗಳನ್ನು ರೂಪಿಸಿದ್ದಾರೆ. ಅವರ ಆಶಯದಂತೆ ಮುನ್ನಡೆದರೆ 2047ರ ವೇಳೆಗೆ ಭಾರತ ಜಗತ್ತಿನ ಅತ್ಯಂತ ಶಕ್ತಿಶಾಲಿ ರಾಷ್ಟ್ರವಾಗಲಿದೆ ಎಂದು ಹೇಳಿದರು.

ಕನ್ನಡದಲ್ಲಿ ಭಾಷಣ ಆರಂಭಿಸಿದ ಪ್ರಧಾನಿ

‘ಕರುನಾಡ ಜನತೆಗೆ ನನ್ನ ಪ್ರೀತಿಯ ನಮಸ್ಕಾರಗಳು, ಬೆಂಗಳೂರಿನ ಜನತೆಗೆ ವಿಶೇಷವಾದ ನಮಸ್ಕಾರಗಳು. ಕರ್ನಾಟಕ ರಾಜ್ಯದ ಜನತೆಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಸಮರ್ಪಿಸುತ್ತಿರುವುದಕ್ಕೆ ನನಗೆ ಸಂತೋಷವಾಗುತ್ತಿದೆ’ ಎಂದು ಪ್ರಧಾನಿ ತಮ್ಮ ಭಾಷಣದ ಆರಂಭದಲ್ಲಿ ಕನ್ನಡದಲ್ಲೇ ಹೇಳಿದರು.

ನರೇಂದ್ರ ಮೋದಿ ಕನ್ನಡದಲ್ಲಿ ಮಾತು ಆರಂಭಿಸುತ್ತಿದ್ದಂತೆ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಜನರು ಕರತಾಡನ, ಶಿಳ್ಳೆ, ಹರ್ಷೋದ್ಗಾರದೊಂದಿಗೆ ‘ಮೋದಿ... ಮೋದಿ...’ ಎಂದು ಘೋಷಣೆ ಮೊಳಗಿಸಿ ಸಂಭ್ರಮಿಸಿದರು.


ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸೋಮವಾರ ಪ್ರಧಾನಿ ನರೇಂದ್ರ ಮೋದಿ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾವಿರಾರು ಮಹಿಳೆಯರು ಪಾಲ್ಗೊಂಡಿದ್ದರು

ಉದ್ಘಾಟನೆಯಾದ, ಶಂಕುಸ್ಥಾಪನೆ ನೆರವೇರಿಸಿದ ಕಾಮಗಾರಿಗಳು

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಕೊಮ್ಮಘಟ್ಟದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ರಾಜ್ಯದಲ್ಲಿ ಈಗಾಗಲೇ ಪೂರ್ಣಗೊಂಡಿರುವ ಹಲವು ಯೋಜನೆಗಳನ್ನು ಸಾರ್ವಜನಿಕರ ಸೇವೆಗೆ ಅರ್ಪಿಸಿದರು. ಇನ್ನೂ ಹಲವು ಹೊಸ ಯೋಜನೆಗಳ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಆ ಎಲ್ಲ ಯೋಜನೆಗಳ ವಿವರ ಈ ಕೆಳಗಿದೆ...

ಉದ್ಘಾಟನೆಯಾದ ಯೋಜನೆಗಳು

- ₹ 1,287 ಕೋಟಿ ವೆಚ್ಚದಲ್ಲಿ ಸಂಪೂರ್ಣ ವಿದ್ಯುದ್ದೀಕರಣಗೊಂಡಿರುವ ಕೊಂಕಣ ರೈಲ್ವೆ ಮಾರ್ಗ.
- ₹ 314 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಸಂಪೂರ್ಣ ಹವಾನಿಯಂತ್ರಿತ ಸರ್. ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್.
- ₹ 758 ಕೋಟಿ ವೆಚ್ಚದ ಅರಸೀಕೆರೆ– ತುಮಕೂರು ಜೋಡಿ ರೈಲು ಮಾರ್ಗ ಮತ್ತು ಹೊಸ ರೈಲುಗಳ ಸೇವೆ.
- ₹ 1,104 ಕೋಟಿ ವೆಚ್ಚದ ಯಲಹಂಕ– ಪೆನುಕೊಂಡ ಜೋಡಿ ರೈಲು ಮಾರ್ಗ ಮತ್ತು ಹೊಸ ರೈಲುಗಳ ಸೇವೆ.

ಶಂಕುಸ್ಥಾಪನೆ ನೆರವೇರಿಸಿದ ಯೋಜನೆಗಳು

- ₹ 15,767 ಕೋಟಿ ವೆಚ್ಚದ ಬೆಂಗಳೂರು ಉಪನಗರ ರೈಲು ಯೋಜನೆ.
- ₹ 470 ಕೋಟಿ ವೆಚ್ಚದಲ್ಲಿ ಬೆಂಗಳೂರು ದಂಡು ರೈಲ್ವೆ ನಿಲ್ದಾಣದ ಅಭಿವೃದ್ಧಿ.
- ₹ 400 ಕೋಟಿ ವೆಚ್ಚದಲ್ಲಿ ಯಶವಂತಪುರ ರೈಲ್ವೆ ನಿಲ್ದಾಣದ ಅಭಿವೃದ್ಧಿ.
- ಒಟ್ಟು ₹ 7,231 ಕೋಟಿ ವೆಚ್ಚದಲ್ಲಿ ಎರಡು ಪ್ಯಾಕೇಜ್‌ಗಳಲ್ಲಿ ಬೆಂಗಳೂರು ವರ್ತುಲ ರಸ್ತೆ ಕಾಮಗಾರಿ, ನೆಲಮಂಗಲ-ತುಮಕೂರು ರಾಷ್ಟ್ರೀಯ ಹೆದ್ದಾರಿ ಷಟ್ಪಥ ರಸ್ತೆ ನಿರ್ಮಾಣ ಯೋಜನೆ, ರಾಷ್ಟ್ರೀಯ ಹೆದ್ದಾರಿ 73ರ ಪೂಂಜಾಲಕಟ್ಟೆಯಿಂದ ಚಾರ್ಮಾಡಿ ಭಾಗದವರೆಗೂ ರಸ್ತೆ ವಿಸ್ತರಣೆ, ರಾಷ್ಟ್ರೀಯ ಹೆದ್ದಾರಿ 69ರ ಮಧುಗಿರಿ-ಗೌರಿಬಿದನೂರು-ಚಿಕ್ಕಬಳ್ಳಾಪುರ ರಸ್ತೆಯ ವಿಸ್ತರಣೆ ಹಾಗೂ ಉನ್ನತೀಕರಣ. ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್ ಅಭಿವೃದ್ಧಿ.

‘ರಾಜ್ಯಕ್ಕೆ ಅನ್ಯಾಯ ಮಾಡಿ ಮೈಸೂರಿನಲ್ಲಿ ಯೋಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘2019 ಮತ್ತು ನಂತರದ ಎರಡು ವರ್ಷ ರಾಜ್ಯದಲ್ಲಿ ಭಾರಿ ಪ್ರಮಾಣದ ಪ್ರವಾಹ ಬಂದಿದ್ದಾಗ ಬಾರದ ಪ್ರಧಾನಿ ನರೇಂದ್ರ ಮೋದಿಗೆ ಈಗ ರಾಜ್ಯದ ನೆನಪಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಲೇವಡಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಮೋದಿ ಅವರಿಂದ ರಾಜ್ಯಕ್ಕೆ ಯಾವೆಲ್ಲಾ ಅನ್ಯಾಯ ಆಗಿದೆ, ಜನದ್ರೋಹ ಆಗಿದೆ ಎಂದು ಎಲ್ಲರಿಗೂ ಗೊತ್ತಿದೆ. ಇಷ್ಟೆಲ್ಲ ಅನ್ಯಾಯ ಮಾಡಿ ಮೈಸೂರಿಗೆ ಬಂದು ಯೋಗ ಮಾಡುತ್ತಿದ್ದಾರೆ’ ಎಂದರು.

‘ಮೈಸೂರು ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ವಿಜಯಾ ಬ್ಯಾಂಕ್‌ನ್ನು ಬೇರೆ ಬ್ಯಾಂಕ್‌ಗಳ ಜೊತೆ ವಿಲೀನ ಮಾಡಿದ್ದು ಯಾರು? ಬೇರೆ ಬ್ಯಾಂಕ್‌ಗಳೊಂದಿಗೆ ವಿಲೀನವಾದ ನಂತರ ಅವುಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಸಿಗುತ್ತಿದೆಯೇ? ಇದು ರಾಜ್ಯಕ್ಕೆ ಮಾಡಿರುವ ದೊಡ್ಡ ಅವಮಾನ’ ಎಂದರು.

‘ಕೋವಿಡ್ ಬಂದಾಗ ಆಮ್ಲಜನಕ ಸಿಗದೆ ರಾಜ್ಯದಲ್ಲಿ ಬಹಳ ಮಂದಿ ಸಾಯಲು ನರೇಂದ್ರ ಮೋದಿ ಕಾರಣರಲ್ಲವೇ’ ಎಂದು ಪ್ರಶ್ನಿಸಿದ ಅವರು, ‘ಮೋದಿ ಪ್ರಧಾನಿಯಾದ ಬಳಿಕ ತೆರಿಗೆಯಲ್ಲಿ ನಮ್ಮ ಪಾಲು ಕಡಿಮೆಯಾಗುತ್ತಿದೆ. ಎಂಟು ವರ್ಷಗಳಲ್ಲಿ ಕರ್ನಾಟಕವೊಂದರಿಂದಲೇ ಆದಾಯ ತೆರಿಗೆ, ಕಾರ್ಪೊರೇಟ್ ತೆರಿಗೆ, ಅಬಕಾರಿ ಸುಂಕ, ಜಿಎಸ್‌ಟಿ ಸೇರಿದಂತೆ ವಿವಿಧ ರೂಪದ ತೆರಿಗೆಗಳಲ್ಲಿ ₹ 19 ಲಕ್ಷ ಕೋಟಿ ಸಂಗ್ರಹವಾಗಿದೆ. ಇದರಲ್ಲಿ ಶೇ 42ರಷ್ಟನ್ನು ರಾಜ್ಯಕ್ಕೆ ಕೊಟ್ಟಿದ್ದರೆ ₹ 8 ಲಕ್ಷ ಕೋಟಿ ಹಂಚಿಕೆ ಆಗಬೇಕಿತ್ತು. ₹ 2.14 ಲಕ್ಷ ಕೋಟಿ ಮಾತ್ರ ಕೊಟ್ಟಿದ್ದಾರೆ. ಇನ್ನೂ ₹ 11 ಲಕ್ಷ ಕೋಟಿ ಉಳಿದಿದ್ದು, ಒಂದು ಸಾವಿರ ಕೋಟಿ ಬಿಡುಗಡೆ ಮಾಡಿ ಅದನ್ನೇ ಜಾಹೀರಾತಿನಲ್ಲಿ ರಾಜ್ಯಕ್ಕೆ ಕೊಟ್ಟ ಕೊಡುಗೆ ಎಂದು ಮೋದಿ ಹೇಳಿಕೊಳ್ಳುತ್ತಿದ್ದಾರೆ’ ಎಂದು ಟೀಕಿಸಿದರು.

‘ರಾಜ್ಯಕ್ಕೆ ₹ 5,495 ಕೋಟಿ ವಿಶೇಷ ಅನುದಾನ ನೀಡಬೇಕೆಂದು ಹಣಕಾಸು ಆಯೋಗ ಮಧ್ಯಂತರ ವರದಿಯಲ್ಲಿ ಶಿಫಾರಸ್ಸು ಮಾಡಿತ್ತು. ನಮ್ಮ ರಾಜ್ಯದಿಂದ ಆಯ್ಕೆಯಾಗಿರುವ ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅದನ್ನು ತಿರಸ್ಕರಿಸಿದ್ದರಿಂದ ನಮಗೆ ಸಿಗಲಿಲ್ಲ. ಇದಕ್ಕೆ ಕಾರಣ ಮೋದಿ ಸರ್ಕಾರವಲ್ಲವೇ’ ಎಂದೂ ಪ್ರಶ್ನಿಸಿದರು.

‘ರಾಜ್ಯದಲ್ಲಿ ಬಿಜೆಪಿ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಇದಕ್ಕೆಲ್ಲ ಪರವಾನಗಿ ಕೊಟ್ಟವರಂತೆ ಮೋದಿ ಸುಮ್ಮನಿದ್ದರೆ ಹೇಗೆ? ಅವರು ನಮ್ಮ ರಾಜ್ಯಕ್ಕೆ ಬರಬಾರದು ಎಂದು ಹೇಳಲ್ಲ. ಆದರೆ, ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡಿ ಎಂದಷ್ಟೇ ಕೇಳುತ್ತಿದ್ದೇನೆ’ ಎಂದರು.

ಚುನಾವಣೆ ತಾಲೀಮಿಗೆ ಪ್ರಧಾನಿ ಮೋದಿ ಮುನ್ನುಡಿ

ಒಂದನೇ ಪುಟದಿಂದ

ಬೆಂಗಳೂರಿನಲ್ಲಿ ರೋಡ್ ಶೋಗಳ ಮೂಲಕ ಈಗಿನಿಂದಲೇ ಚುನಾವಣೆ ತಯಾರಿ ನಡೆಸುವ ಯೋಜನೆಯನ್ನು ಬಿಜೆಪಿ ರಾಜ್ಯ ಘಟಕ ರೂಪಿಸಿತ್ತು. ಆದರೆ, ಭದ್ರತೆಯ ಕಾರಣಕ್ಕೆ ಎಸ್‌ಪಿಜಿ ಅದಕ್ಕೆ ಅವಕಾಶ ನೀಡಲಿಲ್ಲ. ಅದರ ಬದಲಿಗೆ ಜಕ್ಕೂರಿನಿಂದ ಮೇಖ್ರಿ ಸರ್ಕಲ್‌ವರೆಗೆ ಕಾರ್ಯಕರ್ತರನ್ನು ಜಮಾಯಿಸುವ ತಂತ್ರಕ್ಕೆ ಪಕ್ಷವು ಮೊರೆ ಹೋಯಿತು. ಮೇಖ್ರಿ ಸರ್ಕಲ್‌ನಲ್ಲಿ ಮೋದಿಯವರು ತಮ್ಮ ಕಾರು ನಿಲ್ಲಿಸಿ ಕಾರ್ಯಕರ್ತರತ್ತ ಕೈಬೀಸಿ ಅಭಿವಂದನೆ ಸ್ವೀಕರಿಸಿದರು.

ಬಿಜೆಪಿಯು ದೇಶದ ಯಾವುದೇ ರಾಜ್ಯದ ಚುನಾವಣೆಗಳನ್ನೂ ಹಗುರವಾಗಿ ಪರಿಗಣಿಸಿಲ್ಲ. ಈ ವರ್ಷದ ಫೆಬ್ರುವರಿಯಲ್ಲಿ ನಡೆದ ಪಂಜಾಬ್ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ಹೆಚ್ಚಿನ ಸ್ಥಾನಗಳು ಸಿಗುವುದಿಲ್ಲ ಎಂಬ ಅರಿವು ಇದ್ದರೂ, ಮೋದಿ ಗರಿಷ್ಠ ಪ್ರಮಾಣದಲ್ಲಿ ಪ್ರಚಾರ ನಡೆಸಿದರು. ಸೋಲುತ್ತದೆ ಎಂಬ ಮಾಹಿತಿ ಇದ್ದ ರಾಜ್ಯಗಳಲ್ಲೂ ಸೋಲನ್ನು ಗೆಲವಾಗಿ ಪರಿವರ್ತಿಸಲು ಮೋದಿ ಆರಂಭದಿಂದಲೇ ಶ್ರಮ ಹಾಕಿದ್ದರು. ಮುಂದಿನ ಏಪ್ರಿಲ್–ಮೇ ತಿಂಗಳಲ್ಲಿ ರಾಜ್ಯದ ವಿಧಾನಸಭೆಗೆ ನಡೆಯುವ ಚುನಾವಣೆಗೆ ಇದು ಆರಂಭಿಕ ಪ್ರವಾಸ ಎಂದೇ ಬಿಜೆಪಿ ಬಿಂಬಿಸಿದೆ. ಮುಂದೆ ಇಂತಹ ಹಲವು ಕಾರ್ಯಕ್ರಮಗಳ ಶಂಕುಸ್ಥಾಪನೆ ಅಥವಾ ಉದ್ಘಾಟನೆಗಳಿಗಾಗಿ ರಾಜ್ಯಕ್ಕೆ ಪದೇ ಪದೇ ಮೋದಿಯವರು ಭೇಟಿ ನೀಡಲಿದ್ದಾರೆ. ಆ ಮೂಲಕ ಬಿಜೆಪಿ ಪರ ಅಲೆ ಸೃಷ್ಟಿಸುವ ಪ್ರಯತ್ನ ನಡೆಸಲಿದ್ದಾರೆ ಎಂದು ಪಕ್ಷದ ಮೂಲಗಳು ಹೇಳಿವೆ.

ಕರ್ನಾಟಕವು ಬಿಜೆಪಿಯ ಪಾಲಿಗೆ ದಕ್ಷಿಣದ ಮಹತ್ವದ ರಾಜ್ಯವಾಗಿದೆ. ರಾಜ್ಯದ ಆಡಳಿತದಲ್ಲಿನ ಲೋಪಗಳು ಮೋದಿಯವರ ಗಮನದಲ್ಲೂ ಇದೆ. ಅಲ್ಲದೆ, ಪಕ್ಷದ ಸ್ಥಿತಿಗತಿಯ ಬಗ್ಗೆ ಈಗಾಗಲೇ ಹಲವು ಸುತ್ತಿನ ಆಂತರಿಕ ಸಮೀಕ್ಷೆಗಳನ್ನು ನಡೆಸಿದ್ದು, ಅದಕ್ಕೆ ತಕ್ಕಂತೆ ತಂತ್ರಗಾರಿಕೆಯನ್ನು ಪಕ್ಷವು ಹೆಣೆಯುತ್ತಿದೆ. ಮೋದಿ ಪ್ರವಾಸವೂ ಅದರ ಭಾಗ ಎಂದು ವಿಶ್ಲೇಷಿಸಲಾಗಿದೆ.

ಕಾರ್ಯಕರ್ತರಲ್ಲಿ ಉತ್ಸಾಹ: ನಳಿನ್ ಕುಮಾರ್ ಕಟೀಲ್

ಪ್ರಧಾನಿ ನರೇಂದ್ರ ಮೋದಿಯವರ ಎರಡು ದಿನಗಳ ಕರ್ನಾಟಕ ಭೇಟಿ ಕಾರ್ಯಕರ್ತರ ಉತ್ಸಾಹವನ್ನು ಇನ್ನಷ್ಟು ಹೆಚ್ಚಿಸಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

‘ಈ ಭೇಟಿಯು ನಮ್ಮೆಲ್ಲ ಕಾರ್ಯಕರ್ತರನ್ನು ಹುರಿದುಂಬಿಸಿದೆ. ಸುಮಾರು ₹33 ಸಾವಿರ ಕೋಟಿ ಮೊತ್ತದ 19ಕ್ಕೂ ಹೆಚ್ಚು ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಿದ್ದಾರೆ. ಇದರಿಂದ ಕರ್ನಾಟಕವು ಸಮಗ್ರ ಅಭಿವೃದ್ಧಿಯ ಹೊಸ ಹಾದಿಯಲ್ಲಿ ಮುನ್ನಡೆಯಲಿದೆ’ ಎಂದು ತಿಳಿಸಿದ್ದಾರೆ.

ಒಂದೇ ಕುಟುಂಬದ 9 ಮಂದಿ ಮೃತದೇಹ ಪತ್ತೆ

ಸಾಂಗ್ಲಿ: ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಮೈಸಲ್ ಗ್ರಾಮದ ಎರಡು ಮನೆಗಳಲ್ಲಿ ಒಂದೇ ಕುಟುಂಬದ ಒಂಬತ್ತು ಮಂದಿಯ ಮೃತದೇಹಗಳು ಸೋಮವಾರ ಪತ್ತೆಯಾಗಿವೆ.

ಪೋಪಟ್ ವ್ಯಾನ್ಮೋರ್ ಮತ್ತು ಮಾಣಿಕ್ ವ್ಯಾನ್ಮೋರ್ ಎಂಬ ಸಹೋದರರು ಸೇರಿದಂತೆ ಅವರ ಕುಟುಂಬದ ಒಂಬತ್ತು ಮಂದಿಯ ಮೃತದೇಹಗಳು ಪತ್ತೆಯಾಗಿದ್ದು, 'ಇವರು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

'ವ್ಯಾನ್ಮೋರ್ ಸಹೋದರರು ಹಲವರಿಂದ ಸಾಲ ಪಡೆದಿದ್ದರು. ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಇದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದರು.

ಸಿಧು ಹತ್ಯೆ: ಶೂಟರ್‌ಗಳ ಬಂಧನ

ನವದೆಹಲಿ (ಪಿಟಿಐ): ಪಂಜಾಬಿ ಗಾಯಕ ಸಿಧು ಮೂಸೆವಾಲಾ ಹತ್ಯೆ ಪ್ರಕರಣ ಸಂಬಂಧ ಇಬ್ಬರು ಶೂಟರ್ ಸೇರಿ ಮೂವರು ಆರೋಪಿಗಳನ್ನು ದೆಹಲಿ ಪೊಲೀಸ್ ವಿಶೇಷ ಘಟಕ ಬಂಧಿಸಿದೆ ಎಂದು ಸೋಮವಾರ ಅಧಿಕಾರಿಗಳು ತಿಳಿಸಿದ್ದಾರೆ.

ಹರಿಯಾಣದ ಸೋನಿಪತ್‌ನ ಪ್ರಿಯವ್ರತ್ ಅಲಿಯಾಸ್ ಫೌಜಿ (26), ಝಜ್ಜರ್ ಜಿಲ್ಲೆಯ ಕಾಶಿಶ್ (24) ಮತ್ತು ಪಂಜಾಬ್‌ನ ಬಟಿಂಡಾದ ನಿವಾಸಿ ಕೇಶವ್‌ಕುಮಾರ್ (29) ಬಂಧಿತರು. ಗುಜರಾತ್‌ನ ಕಚ್‌ನಲ್ಲಿ ಜೂನ್ 19 ರಂದು ಬಂಧಿಸಲಾಗಿದೆ ಎಂದರು.

ಹತ್ಯೆಗೂ ಮುನ್ನ ಆರೋಪಿಗಳು ಹಲವು ಬಾರಿ ತಾಲೀಮು ನಡೆಸಿರುವುದು ವಿಚಾರಣೆಯಲ್ಲಿ ತಿಳಿದುಬಂದಿದೆ ಎಚ್‌ಜಿಎಸ್ ಧಲಿವಾಲ್ ಹೇಳಿದ್ದಾರೆ.

ವಿಚಾರಣೆಗೆ ನೂಪುರ್ ಶರ್ಮಾ ಗೈರು

ಕೋಲ್ಕತ್ತ (ಪಿಟಿಐ): ಪ್ರವಾದಿ ಮಹಮ್ಮದ್ ಕುರಿತು ವಿವಾದಾತ್ಮಕ ಹೇಳಿಕೆ ವಿಚಾರಕ್ಕೆ ಸಂಬಂಧಿಸಿದಂತೆ ಬಿಜೆಪಿಯ ಮಾಜಿ ವಕ್ತಾರೆ ನೂಪುರ್ ಶರ್ಮಾ ಅವರು ಸೋಮವಾರ ವಿಚಾರಣೆಗೆ ಹಾಜರಾಗಲಿಲ್ಲ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

'ತಮ್ಮ ಮೇಲೆ ದಾಳಿ ನಡೆಯಬಹುದು ಎಂಬ ಕಾರಣ ನೀಡಿರುವ ಅವರು, ವಿಚಾರಣೆಗೆ ಹಾಜರಾಗಲು ಇನ್ನೂ ನಾಲ್ಕು ವಾರಗಳ ಕಾಲಾವಕಾಶ ನೀಡಬೇಕು ಎಂದು ಇ-ಮೇಲ್ ಮೂಲಕ ಕೋರಿಕೊಂಡಿದ್ದಾರೆ' ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದರು.

ಪ್ರವಾದಿ ಮಹಮ್ಮದ್ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದ ನೂಪುರ್ ಅವರ ವಿರುದ್ಧ ಸ್ಥಳೀಯ ನಿವಾಸಿಯೊಬ್ಬರು ಪಶ್ಚಿಮ ಬಂಗಾಳದ ನರ್ಕೆಲ್‌ದಂಗ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಈ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ನೂಪುರ್ ಅವರಿಗೆ ನೋಟಿಸ್ ನೀಡಲಾಗಿತ್ತು.



ಸುಭಾಷಿತ

ದುರುದ್ದೇಶದಿಂದ ಹೇಳಿದ ಸತ್ಯವು ಸಾವಿರ ಸುಳ್ಳುಗಳಿಗೆ ಸಮ.

–ವಿಲಿಯಂ ಬ್ಲೇಕ್

ಸುಪ್ರೀಂ ಕೋರ್ಟ್‌ನ ಎರಡು ತೀರ್ಪುಗಳು ಪುನರ್‌ಪರಿಶೀಲನೆಯ ಜರೂರು

ಸುಪ್ರೀಂ ಕೋರ್ಟ್ ಈಚೆಗೆ ನೀಡಿರುವ ಎರಡು ತೀರ್ಪುಗಳು ಕಾನೂನಿನ ಆಶಯವನ್ನು, ಉದ್ದೇಶವನ್ನು ಉಲ್ಲಂಘಿಸಿವೆ. ಒಂದು ತೀರ್ಪು ಕೊಲೆ ಯತ್ನಕ್ಕೆ ಸಂಬಂಧಿಸಿದ್ದು, ಇನ್ನೊಂದು ತೀರ್ಪು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆಗೆ (ಪೋಕ್ಸೊ) ಸಂಬಂಧಿಸಿದ್ದು. ವ್ಯಕ್ತಿಯೊಬ್ಬನ ಕೊಲೆಗೆ ಯತ್ನಿಸಿದ್ದ ಆರೋಪ ಸಾಬೀತಾಗಿ ಶಿಕ್ಷೆಗೆ ಗುರಿಯಾಗಿದ್ದವರನ್ನು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಹಿಮಾ ಕೊಹ್ಲಿ ಅವರಿದ್ದ ನ್ಯಾಯಪೀಠವು ಬಂಧಮುಕ್ತಗೊಳಿಸಿದೆ. ಬಂಧಮುಕ್ತ ಆದವರು, ಅಪರಾಧ ಎಸಗಿದ ನಂತರದಲ್ಲಿ ಸಂತ್ರಸ್ತನ ತಂಗಿಯನ್ನು ಮದುವೆಯಾಗಿದ್ದು, ಕುಟುಂಬದಲ್ಲಿ ಶಾಂತಿ ನೆಲೆಸುವಂತೆ ಮಾಡಲು, ದಂಪತಿ ಅನ್ಯೋನ್ಯವಾಗಿ ಜೀವನ ಸಾಗಿಸುವಂತೆ ಮಾಡಲು ಅವರನ್ನು ಬಂಧಮುಕ್ತಗೊಳಿಸಲಾಗಿದೆ ಎಂದು ನ್ಯಾಯಪೀಠ ಹೇಳಿದೆ. ಹದಿನೇಳು ವರ್ಷಕ್ಕಿಂತ ಕಡಿಮೆ ವಯಸ್ಸಿನ, ಸೋದರ ಸೊಸೆಯ ಮೇಲೆ ಅತ್ಯಾಚಾರ ಎಸಗಿದ ಆರೋಪ ಸಾಬೀತಾಗಿದ್ದ ವ್ಯಕ್ತಿಯನ್ನು ಇನ್ನೊಂದು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಬಂಧಮುಕ್ತಗೊಳಿಸಿದೆ. ಆ ವ್ಯಕ್ತಿ ನಂತರದಲ್ಲಿ ಸಂತ್ರಸ್ತೆಯನ್ನು ಮದುವೆಯಾಗಿದ್ದಾನೆ. ಈತನನ್ನು ಬಂಧಮುಕ್ತಗೊಳಿಸಿರುವ ನ್ಯಾಯಮೂರ್ತಿಗಳಾದ ನಾಗೇಶ್ವರ ರಾವ್ ಮತ್ತು ಬಿ.ಆರ್. ಗವಾಯಿ ಅವರಿದ್ದ ವಿಭಾಗೀಯ ಪೀಠವು ತಮಿಳುನಾಡಿನಲ್ಲಿ ಸೋದರ ಸಂಬಂಧದಲ್ಲಿ ಮದುವೆ ಆಗುವ ಸಂಪ್ರದಾಯ ಇದೆ, ಮದುವೆ ಅಡ್ಡಿ ಉಂಟುಮಾಡುವುದು, ಸಂತ್ರಸ್ತರ ಕೌಟುಂಬಿಕ ಜೀವನಕ್ಕೆ ತೊಂದರೆ ಕೊಡಲು ಬಯಸುವುದಿಲ್ಲ ಎಂಬ ಕಾರಣ ನೀಡಿದೆ. ಸಂವಿಧಾನದ 142ನೆಯ ವಿಧಿಯ ಅಡಿ ತನಗೆ ಇರುವ ಅಧಿಕಾರವನ್ನು ಬಳಸಿ ಕೋರ್ಟ್ ಈ ತೀರ್ಪುಗಳನ್ನು ನೀಡಿದೆ.



ಕಾನೂನಿನ ಅಡಿ ಅವಕಾಶವೇ ಇರದಂತಹ ಅಂಶಗಳನ್ನು ಪರಿಗಣಿಸಿ ಈ ಎರಡೂ ತೀರ್ಪುಗಳನ್ನು ನೀಡಲಾಗಿದೆ. ತನ್ನ ಎದುರು ಇರುವ ಯಾವುದೇ ವಿಚಾರದಲ್ಲಿ 'ಸಂಪೂರ್ಣ ನ್ಯಾಯ'ವನ್ನು ಒದಗಿಸಲು ಸಂವಿಧಾನದ 142ನೆಯ ವಿಧಿಯನ್ನು ಸುಪ್ರೀಂ ಕೋರ್ಟ್ ಅಧಿಕಾರವಾಗಿ ಬಳಸಿಕೊಳ್ಳಬಹುದು. ಆದರೆ, ಈ ಎರಡು ಪ್ರಕರಣಗಳಲ್ಲಿ ವಿವೇಚನಾ ಅಧಿಕಾರವನ್ನು ಬಳಸಿಕೊಂಡಿರುವ ರೀತಿಯು ನ್ಯಾಯವನ್ನು ದುರ್ಬಲಗೊಳಿಸಿದೆ. ವ್ಯಕ್ತಿಯೊಬ್ಬ ಒಂದು ಪ್ರದೇಶದಲ್ಲಿ ವಾಸ ಮಾಡಲು ಶುರುಮಾಡಿದರೆ ಅಲ್ಲಿ ಶಾಂತಿ ನೆಲೆಸುತ್ತದೆ ಎಂದೋ, ಅಪರಾಧಿಯ ಜೊತೆ ಆತನ ಪತ್ನಿ ಸಂಸಾರ ನಡೆಸಲು ಆಗುತ್ತದೆ ಎಂದೋ ಅಪರಾಧವೊಂದನ್ನು ಶಿಕ್ಷೆಯಿಂದ ವಿನಾಯಿತಿ ನೀಡಲು... ಶಿಕ್ಷೆಯಿಂದ ಬಿಟ್ಟರೆ, ಸಂತ್ರಸ್ತ ವ್ಯಕ್ತಿಯ ಕುಟುಂಬಕ್ಕೆ ಸೇರಿದವರನ್ನು ವಿವಾಹ ಆದರೆ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಹುದು ಎಂಬ ಸಂದೇಶ ರವಾನೆಯಾಗಬಹುದು. ತೀರ್ಪಿನಲ್ಲಿ ನೀಡಲಾಗಿರುವ ಕಾರಣಗಳು ತಪ್ಪು. ಅಲ್ಲದೆ, ಈ ತೀರ್ಪಿನಿಂದ ಆಗಬಹುದಾದ ಪರಿಣಾಮಗಳು ಕೂಡ ಒಳ್ಳೆಯದಾಗಿರಲಿಕ್ಕಿಲ್ಲ. ಈ ಪ್ರಕರಣಗಳಲ್ಲಿ ಕೆಲವು ವಿಶಿಷ್ಟವಾದ ಸಂದರ್ಭಗಳು ಇದ್ದವು ಎಂಬ ವಾದದಲ್ಲಿಯೂ ಹುರುಳಿಲ್ಲ. ಏಕೆಂದರೆ, ಇಂತಹ ಸಂದರ್ಭಗಳನ್ನು ಇತರ ಕೆಲವು ಪ್ರಕರಣಗಳಲ್ಲಿಯೂ ಗುರುತಿಸಿ, ಅವುಗಳ ದುರ್ಲಾಭ ಪಡೆದುಕೊಳ್ಳುವ ಸಾಧ್ಯತೆಗಳನ್ನು ತಳ್ಳಿಹಾಕಲಾಗದು.

> ಆಚರಣೆಗಳು, ಸಂಪ್ರದಾಯಗಳು ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಯಾರಿಗೂ ಮಾರ್ಗವಾಗಬಾರದು

ಪೋಕ್ಸೊ ಕಾಯ್ದೆಯ ಅಡಿಯಲ್ಲಿ ಅಪರಾಧಿ ಎಂದು ಘೋಷಿತನಾದ ವ್ಯಕ್ತಿಯನ್ನು ದೋಷಮುಕ್ತಗೊಳಿಸಿದ ಎರಡನೆಯ ಪ್ರಕರಣದ ತೀರ್ಪು ಕೂಡ ಪ್ರಶ್ನಾರ್ಹ. ಅತ್ಯಾಚಾರ ಎಂಬುದು ಬಹಳ ಹೇಯವಾದ ಅಪರಾಧ. ಸಂತ್ರಸ್ತೆಯು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವಳಾಗಿದ್ದರೆ, ಶಿಕ್ಷೆಯು ಹೆಚ್ಚು ಕಠಿಣವಾಗಿರಬೇಕು. ಆದರೆ, ಈ ಪ್ರಕರಣದಲ್ಲಿ ಅಪರಾಧಿಯನ್ನು ನ್ಯಾಯಾಲಯವು ಬಂಧಮುಕ್ತಗೊಳಿಸಿ, ಪ್ರಶ್ನೆಗಳನ್ನು ಮೂಡಿಸಿದೆ. ಈ ಪ್ರಕರಣದಲ್ಲಿನ ತೀರ್ಪು ಮುಂದೆ ಬೇರೆ ಪ್ರಕರಣಗಳಲ್ಲಿನ ಆದೇಶ, ತೀರ್ಪುಗಳಿಗೆ ಪೂರ್ವನಿದರ್ಶನವಾಗಿ ಬಳಕೆಯಾಗಬಾರದು ಎಂದು ಕೋರ್ಟ್ ಸ್ಪಷ್ಟಪಡಿಸಿದೆ. ಹೀಗಿದ್ದರೂ, ಆಚರಣೆಗಳು, ಸಂಪ್ರದಾಯಗಳು ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಯಾರಿಗೂ ಮಾರ್ಗವಾಗಬಾರದು. ಭಾರತದಲ್ಲಿ ಅಸಂಖ್ಯ ಆಚರಣೆಗಳು, ಸಂಪ್ರದಾಯಗಳು ಇವೆ. ಆದರೆ, ಕಾನೂನು ಅವೆಲ್ಲವುಗಳಿಗಿಂತ ಮಿಗಿಲು. ತ್ರಿವಳಿ ತಲಾಖ್ ಹಾಗೂ ಬಾಲ್ಯವಿವಾಹ ಬಹಳ ಹಳೆಯ ಆಚರಣೆಗಳು. ಹೀಗಿದ್ದರೂ, ಅವು ಕಾನೂನುಬದ್ಧ ಅಲ್ಲ. ಅತ್ಯಾಚಾರ ಎಸಗಿದ ವ್ಯಕ್ತಿ, ಸಂತ್ರಸ್ತೆಯ ನಡುವಿನ ವಿವಾಹ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಈ ಹಿಂದೆ ಕಟು ಟೀಕೆ ಮಾಡಿದ್ದಿದೆ. ಆದರೆ, ಈ ತೀರ್ಪು ಅಂತಹ ಟೀಕೆಗಳಿಗೆ ವ್ಯತಿರಿಕ್ತವಾಗಿ ಇದೆ. ಈ ಎರಡು ತೀರ್ಪುಗಳನ್ನು ಪುನರ್‌ಪರಿಶೀಲನೆಗೆ ಒಳಪಡಿಸಬೇಕು. ಕೆಟ್ಟ ಆಚರಣೆಗಳಿಗೆ ವಿರುದ್ಧವಾಗಿ, ಕಾನೂನನ್ನು ಎತ್ತಿ ಹಿಡಿಯುವ ಕೆಲಸ ಆಗಬೇಕು.

ದಿನದ ಟ್ವೀಟ್



ಸಾಮರಸ್ಯಕ್ಕೆ ಒತ್ತು ಕೊಡಿ

ಆರ್ಥಿಕ ಸುಧಾರಣೆಯಾಗದೆ ಆರ್ಥಿಕ ಬೆಳವಣಿಗೆಯಾಗಲು ಸಾಧ್ಯವಿಲ್ಲ. ಸಾಮಾಜಿಕ ಬಂಡವಾಳ ಇಲ್ಲದೆ ಆರ್ಥಿಕ ಸುಧಾರಣೆ ಬಹುತೇಕ ಅಸಾಧ್ಯ. ಸಾಮಾಜಿಕ ಸಾಮರಸ್ಯವಿಲ್ಲದೆ ಸಾಮಾಜಿಕ ಬಂಡವಾಳವನ್ನು ಒಗ್ಗೂಡಿಸಲು ಆಗುವುದಿಲ್ಲ.

ನಿತಿನ್ ಪೈ, ನಿರ್ದೇಶಕ, ತಕ್ಷಶಿಲಾ ಸಂಸ್ಥೆ

ಕಿಡಿನುಡಿ



ಬೆಂಗಳೂರು ಉಪನಗರ ರೈಲು ಯೋಜನೆಗೆ ಭಾರತ ಸರ್ಕಾರ ಕೊಡುವುದು 20%, ರಾಜ್ಯ ಸರ್ಕಾರ ಕೊಡುವುದು 20%, ಉಳಿದ 60% ಸಾಲಕ್ಕೆ ಹೊಣೆ ರಾಜ್ಯ ಸರ್ಕಾರವೇ. ಕೊನೆಗೂ ಯೋಜನೆ ಶಂಕುಸ್ಥಾಪನೆ ಆಗುತ್ತಿದೆಯಲ್ಲಾ ಅನ್ನುವುದೇ ಸಮಾಧಾನ, ಕೊಡುವ 20% ಅನ್ನಾದರೂ ಸರಿಯಾದ ಸಮಯಕ್ಕೆ ಭಾರತ ಸರ್ಕಾರ ಕೊಡಲಿ ಅಂತ ಆಶಿಸೋಣ.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

25 ವರ್ಷಗಳ ಹಿಂದೆ

ಶನಿವಾರ, 21-6-1997

• ಗುಜ್ರಾಲ್ ಆದೇಶ: ಕೇಂದ್ರ ಸಚಿವ ವರ್ಮ ರಾಜೀನಾಮೆ

ಪಟ್ನಾ, ಜೂನ್ 20 (ಯುಎನ್‌ಐ)– ಬಿಹಾರದ ಮೇವು ಹಗರಣದ ಆರೋಪಿಗಳಲ್ಲಿ ಒಬ್ಬರಾದ ಕೇಂದ್ರ ಗ್ರಾಮೀಣಾಭಿವೃದ್ಧಿ ಹಾಗೂ ಉದ್ಯೋಗ ಖಾತೆಯ ರಾಜ್ಯ ಸಚಿವ ಚಂದ್ರದೇವ್ ಪ್ರಸಾದ್ ವರ್ಮ ಅವರು ಪ್ರಧಾನಿ ಅವರ ಆದೇಶದ ಅನ್ವಯ ಇಂದು ಕೇಂದ್ರ ಸಂಪುಟಕ್ಕೆ ರಾಜೀನಾಮೆ ನೀಡಿದರು.

ಸಚಿವ ಪದವಿಗೆ ರಾಜೀನಾಮೆ ನೀಡುವಂತೆ ಪ್ರಧಾನಿ ಅವರು ದೆಹಲಿಯಿಂದ ಇಂದು ತುರ್ತು ಫ್ಯಾಕ್ಸ್ ಸಂದೇಶ ಕಳುಹಿಸಿದ್ದರ ಮೇರೆಗೆ ವರ್ಮ ಅವರೂ ಫ್ಯಾಕ್ಸ್ ಮೂಲಕ ರಾಷ್ಟ್ರಪತಿ ಅವರಿಗೆ ರಾಜೀನಾಮೆ ಪತ್ರ ಕಳುಹಿಸಿದ್ದರು.

ಬಿಹಾರ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಲು ರಾಜ್ಯಪಾಲ ಕಿದ್ವಾಯಿ ಅವರು ಸಿಬಿಐಗೆ ಅನುಮತಿ ನೀಡಿದ್ದಾರೆ, ಆ ಕುರಿತು ನೀವೇನು ಹೇಳುತ್ತೀರಿ ಎಂದು ಪತ್ರಕರ್ತರು ದೆಹಲಿಯಲ್ಲಿ ಪ್ರಶ್ನಿಸಿದಾಗ, ಗುಜ್ರಾಲ್ ಯಾವುದೇ ಉತ್ತರ ನೀಡಲಿಲ್ಲ.

• ನಾರಾಯಣನ್ ನಾಮಪತ್ರ ಸಲ್ಲಿಕೆ

ನವದೆಹಲಿ, ಜೂನ್ 20 (ಯುಎನ್‌ಐ, ಪಿಟಿಐ)– ಉಪರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಇಂದು ರಾಷ್ಟ್ರಪತಿ ಸ್ಥಾನಕ್ಕೆ ಸಂಯುಕ್ತ ರಂಗ ಮತ್ತು ಕಾಂಗ್ರೆಸ್ ಪಕ್ಷಗಳ ಬೆಂಬಲಿತ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು.

ನಾರಾಯಣನ್ ಅವರ ಪರವಾಗಿ ಪ್ರಧಾನಿ ಐ.ಕೆ. ಗುಜ್ರಾಲ್ ಮತ್ತು ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ನಾಮಪತ್ರಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಅನೇಕ ಸಚಿವರು ಉಪಸ್ಥಿತರಿದ್ದರು.

50 ವರ್ಷಗಳ ಹಿಂದೆ

ಬುಧವಾರ, 21-6-1972

• ಶರಾವತಿ ಕರ್ಮಕಾಂಡ: ನ್ಯಾಯಾಂಗ ತನಿಖೆಗಾಗಿ ಆಗ್ರಹ– ಸಭಾತ್ಯಾಗ

ಬೆಂಗಳೂರು, ಜೂನ್ 20– ಶರಾವತಿ 'ಕರ್ಮಕಾಂಡ'ದ ವಿಚಾರಣೆಯಲ್ಲಿ ತನಿಖೆ ನಡೆಸುವ ಬಗ್ಗೆ ತಾವು ತೆರೆದ ಮನಸ್ಸಿನಿಂದ ಇರುವುದಾಗಿ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಭರವಸೆ ನೀಡಿದರೂ ನ್ಯಾಯಾಂಗ ವಿಚಾರಣೆಯ ಸ್ಪಷ್ಟ ಭರವಸೆಗಾಗಿ ಒತ್ತಾಯಪಡಿಸಿದ ವಿರೋಧ ಪಕ್ಷದ ಸದಸ್ಯರು ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು.

ವೀರೇಂದ್ರ ಪಾಟೀಲ್, ಎಸ್. ನಿಜಲಿಂಗಪ್ಪ ಮತ್ತು ಚನ್ನಬಸಪ್ಪ ಕಾಲದಲ್ಲಿ ನಡೆದ ಅಕ್ರಮಗಳ ತನಿಖೆ ನಡೆಯಬೇಕೆಂದು ಒತ್ತಾಯ ಮಾಡಿದ ವಿರೋಧ ಪಕ್ಷದ ಸದಸ್ಯರು, ನ್ಯಾಯಾಂಗ ವಿಚಾರಣೆಗೆ ಆಯೋಗ ರಚಿಸಬೇಕೆಂದು ಒತ್ತಾಯ ಮಾಡಿದರು.

• ಮದರಾಸು ಕರ್ನಾಟಕದ ಧಾರ್ಮಿಕ ದತ್ತಿ ದೇವಾಲಯಗಳ ಜಮೀನು ಕೃಷಿಕನಿಗೆ ನೀಡಲು ಮಸೂದೆ

ಬೆಂಗಳೂರು, ಜೂನ್ 20– ಹಿಂದಿನ ಮದ್ರಾಸ್ ಪ್ರಾಂತ್ಯದಲ್ಲಿದ್ದ ದಕ್ಷಿಣ ಕನ್ನಡ, ಬಳ್ಳಾರಿ ಮತ್ತು ಕೊಳ್ಳೇಗಾಲದ ದೇವಸ್ಥಾನ ಹಾಗೂ ಇನ್ನಿತರ ಧಾರ್ಮಿಕ ದತ್ತಿ ಜಮೀನುಗಳನ್ನು ವಶಪಡಿಸಿಕೊಂಡು, ಉಳುವವರಿಗೆ ವಹಿಸಿಕೊಡಲು ಅವಕಾಶ ಮಾಡಿಕೊಡುವ ವಿಧೇಯಕ ಇದೀಗ ಸಿದ್ಧವಾಗುತ್ತಿದೆ.

ಮುಂಬೈ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳ ಧಾರ್ಮಿಕ ದತ್ತಿ ಇನಾಂಗಳನ್ನು ರದ್ದು ಮಾಡುವ ವಿಧೇಯಕವನ್ನು ಚರ್ಚೆಗೆಂದು ಇಂದು ವಿಧಾನಸಭೆಯಲ್ಲಿ ಮಂಡಿಸಿದಾಗ ಕಂದಾಯ ಮಂತ್ರಿ ಶ್ರೀ ಎನ್. ಹುಚ್ಚಮಾಸ್ತಿ ಗೌಡ ಅವರು ಈ ವಿಷಯವನ್ನು ತಿಳಿಸಿದರು.

ವಿದೇಶಿ ವಿನಿಮಯ ಮೀಸಲು ಕರಗುತ್ತಾ ಹೋಗುವುದು ಒಂದು ಎಚ್ಚರಿಕೆಯ ಗಂಟೆ

ಆಪದ್ಧನ ಸಂಗ್ರಹ: ಕುಸಿತದ ಸುತ್ತ



ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

1991ರ ಜುಲೈ ತಿಂಗಳ ಒಂದು ಮಧ್ಯರಾತ್ರಿ. ಜಗವೆಲ್ಲ ಮಲಗಿತ್ತು. ಚಿನ್ನ ತುಂಬಿದ ಟ್ರಕ್ಕೊಂದು ಬಾಂಬೆ ವಿಮಾನ ನಿಲ್ದಾಣದ ಕಡೆಗೆ ಹೊರಟಿತ್ತು. ಇದ್ದಕ್ಕಿದ್ದಂತೆ ಟೈರ್ ಪಂಚರ್. ನಡುರಾತ್ರಿಯ ನಿಶ್ಶಬ್ದದಿಂದಲೋ ಏನೊ ಶಬ್ದ ಜೋರಾಗಿಯೇ ಕೇಳಿಸಿತು. ಟ್ರಕ್ ಜೊತೆಯಲ್ಲೇ ಬರುತ್ತಿದ್ದ ವ್ಯಾನಿನಿಂದ ತಕ್ಷಣ ಹಲವು ಬಂದೂಕುಧಾರಿಗಳು ಇಳಿದು ಟ್ರಕ್ಕನ್ನು ಸುತ್ತುವರಿದು ನಿಂತರು.

'ಕೆಜಿಎಫ್' ಸಿನಿಮಾದ ಯಾವುದೋ ಚಿನ್ನದ ಸ್ಮಗ್ಲಿಂಗ್ ದೃಶ್ಯ ಅಂದುಕೊಳ್ಳಬೇಡಿ. ಖಂಡಿತಾ ಅಲ್ಲ. ಚಿನ್ನ ಸಾಗಿಸುತ್ತಿದ್ದುದು ಭಾರತದ ರಿಸರ್ವ್ ಬ್ಯಾಂಕ್. ದೇಶವನ್ನು ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡಲು ತನ್ನಲ್ಲಿದ್ದ 47 ಟನ್ ಚಿನ್ನವನ್ನು ಬ್ಯಾಂಕ್ ಆಫ್ ಇಂಗ್ಲೆಂಡಿನಲ್ಲಿ ಅಡವಿಟ್ಟು 40.5 ಕೋಟಿ ಡಾಲರ್ ಪಡೆದುಕೊಳ್ಳಲು ಅದನ್ನು ಸಾಗಿಸಲಾಗುತ್ತಿತ್ತು. ಸರ್ಕಾರದ ಹತಾಶೆ ಆ ಮಟ್ಟಕ್ಕಿತ್ತು. ವಿದೇಶಿ ವಿನಿಮಯ ಮೀಸಲು 351.4 ಕೋಟಿ ಡಾಲರುಗಳಿಗೆ ಕುಸಿದಿತ್ತು. ಎಣ್ಣೆ, ಗೊಬ್ಬರ ಇತ್ಯಾದಿ ಅತ್ಯಂತ ಅವಶ್ಯಕ ವಸ್ತುಗಳನ್ನು ಆಮದು ಮಾಡಿಕೊಳ್ಳುವುದಕ್ಕೂ ಹಣ ಇರಲಿಲ್ಲ. ತೆಗೆದುಕೊಂಡ ಸಾಲಕ್ಕೆ ಬಡ್ಡಿಯನ್ನೂ ಕಟ್ಟಲಾಗದ ಸ್ಥಿತಿ. ಭಾರತವು ಜಗತ್ತಿನ ವಿಶ್ವಾಸ ಕಳೆದುಕೊಂಡಿತ್ತು. ಇನ್ಯಾವುದಾದರೂ ವಿದೇಶಿ ಬ್ಯಾಂಕು ನಮಗೆ ಗ್ಯಾರಂಟಿ ಕೊಡಬೇಕಿತ್ತು. ಅಂತಹ ಸಂಕಷ್ಟದಲ್ಲಿ ಚಿನ್ನ ಅಡವಿಟ್ಟು ಮಾನ ಉಳಿಸಿಕೊಳ್ಳುವುದಕ್ಕೆ ನಿರ್ಧರಿಸಲಾಗಿತ್ತು. ವೈ.ವಿ.ರೆಡ್ಡಿ ಅವರು ತಮ್ಮ ಪುಸ್ತಕ 'ಅಡ್ವೈಸ್ ಆ್ಯಂಡ್ ಡಿಸ್ಸೆಂಟ್'ನಲ್ಲಿ ಅಂದಿನ ಈ ಪರಿಸ್ಥಿತಿಯನ್ನು ವಿವರವಾಗಿ ದಾಖಲಿಸಿದ್ದಾರೆ. ರಿಸರ್ವ್ ಬ್ಯಾಂಕಿನ ವಿದೇಶಿ ವಿನಿಮಯದ ಮೀಸಲಿನ ಚಿನ್ನ ಅಂದು ನೆರವಿಗೆ ಬಂದಿತ್ತು.

ವಿದೇಶಿ ವಿನಿಮಯ ಮೀಸಲು ಇರುವುದೇ ಆಪತ್ಕಾಲದಲ್ಲಿ ನೆರವಾಗಲು, ಅಂತರರಾಷ್ಟ್ರೀಯ ಪಾವತಿಗಳನ್ನು ಮಾಡಲು, ವಿದೇಶಿ ವಿನಿಮಯದ ಸಂಕಷ್ಟಗಳನ್ನು ಎದುರಿಸಲು, ಹಲವು ಹಣಕಾಸು ನೀತಿಗಳನ್ನು ಪಾಲಿಸಲು... ಹೀಗೆ ಹತ್ತು ಹಲವು ಕಾರಣಗಳಿಗಾಗಿ. ಶ್ರೀಲಂಕಾದಂತಹ ಕೆಲವು ದೇಶಗಳು ಇದನ್ನು ಖಾಲಿ ಮಾಡಿಕೊಂಡು ಇಂದು ದಿವಾಳಿಯಾಗಿವೆ. ಭಾರತದಲ್ಲಿ 2021ರ ಸೆಪ್ಟೆಂಬರ್ ತಿಂಗಳಿನಲ್ಲಿ ಅದು ಗರಿಷ್ಠ ಪ್ರಮಾಣದಲ್ಲಿತ್ತು. ಆಗ ಆರ್‌ಬಿಐ ಬಳಿ ಒಟ್ಟು 64,245.3 ಕೋಟಿ ಡಾಲರ್ ವಿದೇಶಿ ನಗದು ಮೀಸಲು ಇತ್ತು. ಅದು ಕ್ರಮೇಣ ಕರಗುತ್ತಾ ಜೂನ್ 10ರ ಹೊತ್ತಿಗೆ 59,645.9 ಕೋಟಿ ಡಾಲರ್‌ಗಳಾದವು. ಮೀಸಲು ನಿರಂತರವಾಗಿ ಕರಗುತ್ತಿರುವುದರಿಂದ ಆತಂಕವುಂಟಾಗಿದೆ. ಈ ಮೀಸಲಿನಲ್ಲಿ ಚಿನ್ನ, ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್), ವಿದೇಶಿ ನಗದು ಹಾಗೂ ಅಂತರರಾಷ್ಟ್ರೀಯ ಹಣಕಾಸು ನಿಧಿಯ ಮೀಸಲು ಸೇರಿರುತ್ತದೆ. ಅದನ್ನು ಡಾಲರಿನಲ್ಲಿ ಲೆಕ್ಕ ಹಾಕುತ್ತಾರೆ.

ಆರ್‌ಬಿಐ ಬಳಿ ಈಗ 760.42 ಟನ್ ಚಿನ್ನವಿದೆ. ಅದರ ಇಂದಿನ ಮೌಲ್ಯ 4,084 ಕೋಟಿ ಡಾಲರ್. ಒಟ್ಟು ವಿದೇಶಿ ವಿನಿಮಯ ಸಂಗ್ರಹದಲ್ಲಿ ಚಿನ್ನದ ಪಾಲು ಏಪ್ರಿಲ್‌ನಲ್ಲಿ ಶೇಕಡ 7ರಷ್ಟಿತ್ತು. ಆಗಾಗ ಆರ್‌ಬಿಐ ಚಿನ್ನ ಕೊಳ್ಳುವುದರಿಂದ ಅದರ ಪ್ರಮಾಣ ಹೆಚ್ಚು ಕಡಿಮೆಯಾಗುತ್ತಿರುತ್ತದೆ. 2022ರಲ್ಲಿ ಅದು 65 ಟನ್ ಚಿನ್ನ ಖರೀದಿಸಿದೆ. ಹಾಗೆಯೇ ಚಿನ್ನದ ದರದಲ್ಲಿಯೂ ಏರುಪೇರಾಗುತ್ತಿರುತ್ತದೆ.

ಎಸ್‌ಡಿಆರ್ ಎಂಬುದು ಐಎಂಎಫ್ ಸೃಷ್ಟಿಸಿದ ಅಂತರರಾಷ್ಟ್ರೀಯ ಮೀಸಲು ಆಸ್ತಿ. ತನ್ನ ಸದಸ್ಯ ರಾಷ್ಟ್ರಗಳು ಇಟ್ಟುಕೊಂಡಿರುವ ವಿದೇಶಿ ವಿನಿಮಯ ಸಂಗ್ರಹಕ್ಕೆ ಪೂರಕವಾದ ಒಂದು ಮೀಸಲು ನಿಧಿ. ಇದು ಡಾಲರ್, ರೂಪಾಯಿಗಳಂತೆ ಒಂದು ಕರೆನ್ಸಿ ಅಲ್ಲ. ಅಮೆರಿಕದ ಡಾಲರ್, ಯುರೊ, ಜಪಾನಿನ ಯೆನ್ ಹಾಗೂ ಪೌಂಡ್‌ಸ್ಟರ್ಲಿಂಗ್ ಮತ್ತು ಚೀನಾದ ರೆನ್‌ಮಿನ್‌ಬಿ ಸೇರಿ ಆಗಿರುವ ಒಂದು ಸಂಗ್ರಹ. ಕೆಲವು ಮಾಪನಗಳನ್ನು ಆಧರಿಸಿ ಇದರ ಪ್ರಾಮುಖ್ಯವನ್ನು ನಿರ್ಧರಿಸಲಾಗುತ್ತದೆ. ಉದಾಹರಣೆಗೆ, ಒಂದು ನಾಣ್ಯದಲ್ಲಿ ನಡೆಯುವ ಒಟ್ಟು ವಿದೇಶಿ ವಿನಿಮಯ ವ್ಯವಹಾರವು ವಿದೇಶಿ ವಿನಿಮಯ ಸಂಗ್ರಹದಲ್ಲಿ ಆ ನಾಣ್ಯದ ಪ್ರಮಾಣ, ಆ ನಾಣ್ಯದಲ್ಲಿ ನಡೆಯುವ ಒಟ್ಟು ರಫ್ತಿನ ಪ್ರಮಾಣ ಇತ್ಯಾದಿಗಳನ್ನು ಆಧರಿಸಿ ಅದರ ಮೌಲ್ಯವನ್ನು ನಿರ್ಧರಿಸುತ್ತದೆ.

ಐಎಂಎಫ್, ಇತ್ತೀಚಿನ ಸಭೆಯಲ್ಲಿ ಚೀನಾದ ರೆನ್‌ಮಿನ್‌ಬಿಯ ಮೌಲ್ಯವನ್ನು ಹೆಚ್ಚಿಸಿದೆ. ಈಗ ಅದು ಡಾಲರ್ ಮತ್ತು ಯುರೊ ನಂತರ ಮೂರನೇ ಸ್ಥಾನದಲ್ಲಿದೆ. ಎಸ್‌ಡಿಆರ್ ಮೌಲ್ಯವೂ ಬದಲಾಗುತ್ತಿರುತ್ತದೆ. ಪ್ರತಿದಿನದ ಅದರ ಮೌಲ್ಯವನ್ನು ಐಎಂಎಫ್ ಪ್ರಕಟಿಸುತ್ತಿರುತ್ತದೆ. ವಿದೇಶಿ ಕರೆನ್ಸಿ ಅವಶ್ಯಕತೆಯಿರುವ ದೇಶವು ಇತರ ಐಎಂಎಫ್ ಸದಸ್ಯ ರಾಷ್ಟ್ರಗಳಿಗೆ ತಮ್ಮ ಬಳಿ ಇರುವ ಎಸ್‌ಡಿಆರ್ ನೀಡಿ ಅವುಗಳಿಂದ ತಮಗೆ ಬೇಕಾದ ವಿದೇಶಿ ಕರೆನ್ಸಿಯನ್ನು ಪಡೆದುಕೊಳ್ಳಬಹುದು.

ಒಂದು ದೇಶದ ಎಸ್‌ಡಿಆರ್ ಪ್ರಮಾಣವನ್ನು ಆ ದೇಶದ ಐಎಂಎಫ್ ಕೋಟಾವನ್ನು ಆಧರಿಸಿ ನಿರ್ಧರಿಸಲಾಗುತ್ತದೆ. ಐಎಂಎಫ್‌ನ ಸದಸ್ಯರಾಗುವುದಕ್ಕೆ ವಿವಿಧ ದೇಶಗಳು ಐಎಂಎಫ್‌ನಲ್ಲಿ ಇಟ್ಟ ಠೇವಣಿಯನ್ನು ಆಧರಿಸಿ ಅವುಗಳ ಕೋಟಾ ನಿರ್ಧರಿಸುತ್ತಾರೆ. ಅದು ಆ ದೇಶದ ಜಿಡಿಪಿ ಇತ್ಯಾದಿ ಆರ್ಥಿಕ ಸ್ಥಿತಿಯನ್ನು ಆಧರಿಸಿ ನಿರ್ಧಾರವಾಗುತ್ತದೆ. ಅದನ್ನು ಆಧರಿಸಿ ಆ ದೇಶದ ಎಸ್‌ಡಿಆರ್ ನಿರ್ಧರಿತವಾಗುತ್ತದೆ. ಹೀಗಾಗಿ ಶ್ರೀಮಂತ ರಾಷ್ಟ್ರಗಳಿಗೆ ಹೆಚ್ಚು ಎಸ್‌ಡಿಆರ್ ದೊರಕುತ್ತದೆ. ಭಾರತದ ಕೋಟಾ ಶೇಕಡ 2.76 ಎಂದು ನಿರ್ಧರಿಸಲಾಗಿತ್ತು. ಅದನ್ನು ಆಧರಿಸಿ ಭಾರತಕ್ಕೆ 1311.4 ಕೋಟಿ ಡಾಲರ್ ಎಸ್‌ಡಿಆರ್ ವಿತರಣೆಯಾಗಿತ್ತು.

ವಿದೇಶಿ ವಿನಿಮಯ ಮೀಸಲಿನ ಪ್ರಮುಖ ಭಾಗವೆಂದರೆ, ವಿದೇಶಿ ನಗದು. 2021ರ ಸೆಪ್ಟೆಂಬರ್‌ನಲ್ಲಿ ಅದು 57,798 ಕೋಟಿ ಡಾಲರ್‌ನಷ್ಟಿತ್ತು. ಆಗಿನಿಂದ ಅದು ಒಂದೇ ಸಮನೆ ಕುಸಿಯುತ್ತಿದೆ. 2022ರ ಜೂನ್‌ನಲ್ಲಿ 53,224 ಕೋಟಿ ಡಾಲರ್‌ಗಳಿಗೆ ಕುಸಿಯಿತು. ಈಗಲೂ ಕುಸಿತ ಮುಂದುವರಿದಿದೆ. ಅದಕ್ಕೆ ಹಲವು ಕಾರಣಗಳಿವೆ. ರಫ್ತಿಗಿಂತ ಆಮದು ಹೆಚ್ಚಾಗುತ್ತಿರುವುದರಿಂದ ವಿದೇಶಿ ವಿನಿಮಯದ ಬಳಕೆ ಹೆಚ್ಚುತ್ತಿದೆ. ಪೆಟ್ರೋಲ್ ಇತ್ಯಾದಿ ಪದಾರ್ಥಗಳ ಬೆಲೆ ಹೆಚ್ಚಾಗುತ್ತಿರುವುದರಿಂದ ಸ್ವಾಭಾವಿಕವಾಗಿಯೇ ಹೆಚ್ಚಿಗೆ ಡಾಲರ್ ತೆರಬೇಕಾಗುತ್ತದೆ. ನಾವು ಸಂಗ್ರಹಿಸಿರುವ ವಿದೇಶಿ ಹಣದ ಮೌಲ್ಯ ಕುಸಿದಾಗಲೂ ವಿದೇಶಿ ವಿನಿಮಯ ಮೀಸಲು ಪ್ರಮಾಣ ಇಳಿಯುತ್ತದೆ. ಉದಾಹರಣೆಗೆ, ನಾವು ವಿದೇಶಿ ವಿನಿಮಯದ ಒಂದು ಭಾಗವನ್ನು ಯುರೊದಲ್ಲಿ ಸಂಗ್ರಹಿಸಿ ಇಟ್ಟಿದ್ದಾಗ, ಡಾಲರ್ ಎದುರು ಯುರೊದ ಮೌಲ್ಯ ಕುಸಿದರೆ, ವಿದೇಶಿ ವಿನಿಮಯದ ಮೀಸಲಿನ ಮೌಲ್ಯವೂ ಕಮ್ಮಿಯಾಗುತ್ತದೆ.

ವಿದೇಶಿ ವಿನಿಮಯಕ್ಕೆ ಇನ್ನೊಂದು ಹೊಡೆತ ವಿದೇಶಿ ಬಂಡವಾಳಿಗರಿಂದ ಬೀಳುತ್ತಿದೆ. ಅವರು ನಮ್ಮ ಮಾರುಕಟ್ಟೆಗಳಲ್ಲಿ ಹೂಡಿದ ಬಂಡವಾಳವನ್ನು ಹಿಂತೆಗೆದುಕೊಳ್ಳುತ್ತಿದ್ದಾರೆ. ಮೇ ತಿಂಗಳೊಂದರಲ್ಲೇ ₹ 36,518 ಕೋಟಿ ಮೌಲ್ಯದ ಹೂಡಿಕೆಯನ್ನು ಹಿಂತೆಗೆದುಕೊಂಡಿದ್ದರು. ಇದರ ಜೊತೆಗೆ ಹಣದುಬ್ಬರವೂ ಸೇರಿಕೊಂಡು ರೂಪಾಯಿ ಮೌಲ್ಯವೂ ಕುಸಿಯುತ್ತಿದೆ. ಇದನ್ನು ತಪ್ಪಿಸಲು ಆರ್‌ಬಿಐಗೆ ಇರುವ ಒಂದು ದಾರಿಯೆಂದರೆ, ಡಾಲರ್ ಮಾರಿ ರೂಪಾಯಿ ಖರೀದಿಸಿ ರೂಪಾಯಿಗೆ ಬೇಡಿಕೆ ಹೆಚ್ಚಿಸುವುದು. ಆಗಲೂ ಡಾಲರ್ ಸಂಗ್ರಹ ಕರಗುತ್ತದೆ.

ಅಮೆರಿಕ ತನ್ನ ಹಣದುಬ್ಬರವನ್ನು ನಿಯಂತ್ರಿಸಲು ಬಡ್ಡಿದರವನ್ನು ಹೆಚ್ಚಿಸುತ್ತಿದೆ. ಅದರ ಪರಿಣಾಮವಾಗಿ ಇಲ್ಲಿಂದ ಬಂಡವಾಳ ಅಮೆರಿಕಕ್ಕೆ ಮರಳುತ್ತದೆ. ಅನಿವಾರ್ಯವಾಗಿ ನಾವೂ ಬಡ್ಡಿದರ ಹೆಚ್ಚಿಸಬೇಕಾಗುತ್ತದೆ. ರೆಪೊ ದರ ಹೆಚ್ಚಿಸುವುದಕ್ಕೆ ಅದೂ ಒಂದು ಕಾರಣ.

ಯಾವುದೇ ಒಂದು ದೇಶದ ವಿದೇಶಿ ವಿನಿಮಯ ಸಂಗ್ರಹ ಕರಗುತ್ತಾ ಹೋಗುವುದು ಒಂದು ಎಚ್ಚರಿಕೆಯ ಗಂಟೆ. ಅದು ದೇಶದ ಆರ್ಥಿಕತೆಯ ಹಲವು ಸಮಸ್ಯೆಗಳನ್ನು ಪ್ರತಿಧ್ವನಿಸುತ್ತಿರುತ್ತದೆ. ಅದಕ್ಕೆ ಸ್ಪಂದಿಸುವುದು ಸರ್ಕಾರದ ಜವಾಬ್ದಾರಿ.



ಚುರುಮುರಿ



ದೀನಚಿಂತಾಮಣಿ

• ಲಿಂಗರಾಜು ಡಿ.ಎಸ್.

'ಅಲ್ಲ ಕಲಾ, ಈ ತುರೇಮಣೆ ಬಲೆ ಕೇಡಿ ನನಮಗ! ಏನೇ ಕೇಳಿದ್ರೂ ನಿಸೂರಾಗಿ ತಾರತಿಕಡಿ ಬಾರಾಬಂಕಿ ಅಂತ ಏನಾದ್ರೂ ಹೇಳಿಬುಡ್ತನೆ. ಇವನಿಗೆ ಏನಾದರು ಒಂದು ಬಿರುದು ಕೊಡಬೇಕಲ್ಲಾ!' ಅಂತು ಯಂಟಪ್ಪಣ್ಣ.

'ಅಣ್ಣೈ, ಬಿದಿರು ಮೋಟ್ರು ಬಾ ಅನ್ನೋ ಕಾಲದೇಲಿ ಬಿರುದು ತಕ್ಕಂದೇನು ಮಾಡನೆ. ಅದೆಲ್ಲಾ ಅವಕಾಶವಾದಿ ರಾಜಕೀಯ ದೌರ್ಜನ್ಯ ಮಾಡೋರಿಗೇ ಸರಿ' ಅಂದ್ರು ತುರೇಮಣೆ.

'ರಾಜಕೀಯದೋರು ಕಡಿದು ಕಟ್ಟೆ ಹಾಕಿರದು ಅಷ್ಟರಗೇ ಅದೆ. ಅವರಿಗೆಂತೇ ಬಿರುದು ಕೊಟ್ಟಾರಲಾ?' ಯಂಟಪ್ಪಣ್ಣ ಅನುಮಾನ ತೆಗೆಯಿತು.

'ಯಾಕಾಗಲ್ಲ, ಅವರೇನು ಕಿಸಿದಿರದು ವಸಿನಾ! ಪರ್ಸೆಂಟೇಜು ತಗಂಡು ದಿಮ್ಮಗಿರೋ ರಾಜಕಾರಣಿಗೆ ಶೇಕಡಾವೀರ ಅಂತ ಕರೀ-ಬೌದಲ್ವೇನಣ್ಣೆ? ಮಕ್ಕಳು ಓದೋ ಪುಸ್ತಕವ ಉದ್ಗ್ರಂಥ ಮಾಡ್ತೀವಿ ಅಂತ ಹೊಂಟಿರೋರ್ನ ಪಠ್ಯಾವತಾರಿ ಅನ್ನದೆಲೆ ಇನ್ನೇನಂದಾರು? ಕಂಡಾಬಟ್ಟೆ ಟ್ರಾನ್ಸ್‌ಫರ್ ಮಾಡಿಸಿ ಕಾಸು ಗಿಬರಿರೋನು ವರ್ಗನಿಧಿನೇ ಅಲ್ಲುವೇ? ಸ್ಟೇಜು ಮ್ಯಾಲೆ ಕುತಗಂಡು ತೂಕಡಿಸೋನು ಮೂಢನಿದ್ರಾ ಪ್ರವೀಣ! ಯಾವಾಗಲೂ ಟೀಕೆ ಮಾಡಿಕ್ಯಂಡಿರೋ ವಿರೋಧಪಕ್ಷದ ನಾಯಕ ಕುಟುಕು ಕಸ್ತೂರಿ, ಲಂಚವೇ ಜೀವನ ಅಂದುಕೊಂಡಿರೋ ಅಧಿಕಾರಿ ಕಿಲಾಡಿ ಕಾಸಯ್ಯ, ಎಲ್ಲಾ ಸಿನಿಮಾ ತೋಪಾದ್ರೂ ಇನ್ನೂ ಹೀರೊ ಪಾತ್ರನೇ ಬೇಕು ಅನ್ನೋನು ಬೋರಿಂಗ್ ಸ್ಟಾರ್! ಕಳ್ಳ ವೋಟು ಹಾಕಿಸ್ಕಂಡು ಗೆದ್ದು ಶಾಸಕನಾದೋನು ಮುದ್ರಾರಾಕ್ಷಸ, ಅಧಿಕಾರ ಪಡೆಯಕ್ಕೆ ಮಾಟ-ಮಂತ್ರ ಮಾಡಿಸೋನು ಮಂತ್ರ ಪಿಶಾಚಿ! ಸಾಕಾ ಇನ್ನೂ ಬೇಕಾ?' ಅಂತಂದರು.

'ಆಯ್ತು ಬುಡಿ ಸಾ! ಈಗ ದುಡದುದ್ದು ಕೈಗೂ ಬಾಯಿಗೂ ಸಾಲದೇ ಕಂಗೆಟ್ಟು ಕೂತಿರೋ ಜನಸಾಮಾನ್ಯನಿಗೆ ಏನು ಬಿರುದು ಕೊಟ್ಟೀರಿ?' ಅಂತ ಕೇಳಿದೆ.

'ಮಧ್ಯಮವರ್ಗಕ್ಕೆ ತಾಪತ್ರಯ ಅನ್ನೋ ಮೂಲವ್ಯಾಧಿ ಅದೆ ಕನೋ! ಯಾವಾಗಲೂ ಮುಲುಕ್ತಾ ಸದಾ ದೀನವಾಗೇ ಇರೋ ಇವನಿಗೆ ದೀನಚಿಂತಾಮಣಿ ಅಂತ ಕರೆಯದೇ ಸರಿ!' ಅಂತಂದ್ರು ತುರೇಮಣೆ.

ಸಂಗತ

ಮಕ್ಕಳ ಸಂದೇಶಕ್ಕೆ ಸ್ಪಂದಿಸಿ

ವಸತಿಶಾಲೆಯಲ್ಲಿ ಕಲಿಯಲು ಸುತರಾಂ ಇಚ್ಛಿಸದ ಮಕ್ಕಳನ್ನು ಅವರ ತೀವ್ರ ವಿರೋಧದ ನಡುವೆಯೂ ಅಲ್ಲಿಗೆ ದಾಖಲಿಸುವುದು ಸಮಂಜಸವಾಗದು

• ಡಾ. ಎಚ್.ಬಿ.ಚಂದ್ರಶೇಖರ್

ವಸತಿಶಾಲೆಯೊಂದರಲ್ಲಿ ಕಲಿಯುತ್ತಿದ್ದ 14 ವರ್ಷದ ವಿದ್ಯಾರ್ಥಿ, ತಾಯಿಗೆ ಶುಭಾಶಯ ಕೋರಲು ಮೊಬೈಲ್ ಕೊಡದಿದ್ದಕ್ಕೆ ಆತ್ಮಹತ್ಯೆ ಮಾಡಿಕೊಂಡ ಎನ್ನಲಾದ ಸುದ್ದಿ (ಪ್ರ.ವಾ., ಜೂನ್ 13) ಪೋಷಕರು ಹಾಗೂ ಶಿಕ್ಷಣಾಸಕ್ತರನ್ನು ತಲ್ಲಣಗೊಳಿಸಿತು. ಅದರಲ್ಲೂ ಎಳೆಯ ವಯಸ್ಸಿನ ಮಕ್ಕಳನ್ನು ವಸತಿಶಾಲೆಗೆ ಸೇರಿಸಿರುವ ಮತ್ತು ಸೇರಿಸುವ ಯೋಚನೆಯಲ್ಲಿರುವ ಪೋಷಕರಲ್ಲಿ ಗಾಬರಿ, ಗೊಂದಲ, ಭಯವನ್ನು ಹುಟ್ಟುಹಾಕಿತು.

ಮಕ್ಕಳು ಚೆನ್ನಾಗಿ ಓದಿ, ಒಳ್ಳೆಯ ಅಂಕ ಪಡೆಯಬೇಕು, ಹೆಚ್ಚಿನ ಸಂಬಳ ದೊರೆಯುವ ನೌಕರಿ ಪಡೆಯಬೇಕೆಂಬ ಆಕಾಂಕ್ಷೆ ಇಂದಿನ ಪೋಷಕರಲ್ಲಿ ಹೆಚ್ಚು ತೀವ್ರವಾಗಿದೆ. ಇದು ತಪ್ಪೇನಲ್ಲ. ಆದರೆ ಈ ದಿಸೆಯಲ್ಲಿ ಮಕ್ಕಳನ್ನು ಶಿಸ್ತಿನಿಂದ ಬೆಳೆಸಿ, ಉತ್ತಮ ವಿದ್ಯೆ ಕೊಡಿಸಲು ಅವರನ್ನು ವಸತಿಶಾಲೆಗೆ ಸೇರಿಸುವ ಮುನ್ನ ಒಂದಷ್ಟು ಚಿಂತನ-ಮಂಥನ ನಡೆಸುವುದು ಒಳಿತು.

ಹೆಚ್ಚು ಅಶಿಸ್ತು ತೋರುವ ಮಕ್ಕಳನ್ನು ಸರಿದಾರಿಗೆ ತರಲು ಅಥವಾ ಮಕ್ಕಳ ಪಾಲನೆಗೆ ಅಗತ್ಯವಾದ ವೈಯಕ್ತಿಕ ಗಮನ ನೀಡಲು ತಮಗೆ ಸಮಯ ಇಲ್ಲವೆಂಬ ಕಾರಣಗಳಿಂದ ಅವರನ್ನು ವಸತಿಶಾಲೆಗೆ ದಾಖಲಿಸುವವರ ಸಂಖ್ಯೆಯೇ ಅಧಿಕ.

ಮಕ್ಕಳ ಮನಃಸ್ಥಿತಿ, ವರ್ತನೆ ಹಾಗೂ ಅವುಗಳ ಹಿಂದಿನ ಕಾರಣಗಳ ಕುರಿತಾದ ಮನೋವೈಜ್ಞಾನಿಕ ಜ್ಞಾನ, ಅನುಭವಗಳನ್ನು ಹೊಂದಿದ ಶಿಕ್ಷಕರು ಹಾಗೂ ಸಿಬ್ಬಂದಿಯನ್ನು ಹೊಂದಿದ ವಸತಿಶಾಲೆಗಳಲ್ಲಿ ಮಕ್ಕಳು ಸುರಕ್ಷಿತವಾಗಿ ಇರಬಲ್ಲರು. ಆದಾಗ್ಯೂ ವಸತಿಶಾಲೆಗೆ ಸೇರಿಸುವ ಮುನ್ನ ತಮ್ಮ ಮಕ್ಕಳು ಅಲ್ಲಿನ ಸ್ಥಿತಿಗತಿಗೆ ಹೊಂದಿಕೊಳ್ಳಬಲ್ಲರೇ ಎಂಬ ಕುರಿತು ಪೋಷಕರು ಪರಿಶೀಲಿಸಬೇಕು.

ವಸತಿಶಾಲೆಯಲ್ಲಿ ಕಲಿಯಲು ಸುತರಾಂ ಇಚ್ಛಿಸದ ಮಕ್ಕಳನ್ನು ಅವರ ತೀವ್ರ ವಿರೋಧದ ನಡುವೆಯೂ ಅಲ್ಲಿಗೆ ದಾಖಲಿಸುವುದು ಸಮಂಜಸವಾಗದು. ಒಂದೊಮ್ಮೆ ವಿರೋಧದ ನಡುವೆ ವಸತಿಶಾಲೆಗೆ ಸೇರಿಸಿದ್ದಲ್ಲಿ, ಅಲ್ಲಿ ಅವರು ಯಾವ ರೀತಿ ಹೊಂದಿಕೊಂಡಿದ್ದಾರೆ ಎಂಬ ಕುರಿತು ಕಾಲಕಾಲಕ್ಕೆ ಮಾಹಿತಿ ಪಡೆಯುತ್ತಿರಬೇಕು. ವಸತಿಶಾಲೆಗೆ ಸೇರಿದ ಬಳಿಕ ಮಕ್ಕಳು ಅಲ್ಲಿ ಹೊಂದಿಕೊಳ್ಳಲು ಸಾಧ್ಯವಾಗದೇ ಹೋದ ಸಂದರ್ಭಗಳಿದ್ದಲ್ಲಿ, ಪೋಷಕರು ತಮ್ಮ ಮಕ್ಕಳ ಮಾತು, ವರ್ತನೆ, ಭಾವನೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಬೇಕು. ವಸತಿಶಾಲೆಯಲ್ಲಿ ಅವರು ಮುಂದುವರಿಯಲು ಕಷ್ಟವಾಗುವಂತಿದ್ದರೆ ಅದಕ್ಕೆ ಕಾರಣವಾದ ಅಂಶಗಳನ್ನು ಗುರುತಿಸಬೇಕು. ಅಲ್ಲೇ ಉಳಿಸಲು ಆಗುವುದಿಲ್ಲ ಎಂದು ಅನ್ನಿಸಿದರೆ, ಮರಳಿ ಮನೆಗೆ ಕರೆದುಕೊಂಡು ಬರುವುದರ ಬಗೆಗೂ ತೀರ್ಮಾನ ಕೈಗೊಳ್ಳಬೇಕು.

ಮಕ್ಕಳಿಗೆ ಇಷ್ಟವಿಲ್ಲದೇ ಹೋದಾಗ್ಯೂ 'ವಸತಿಶಾಲೆಯಲ್ಲಿಯೇ ನಿನ್ನ ಓದು ಮುಂದುವರಿಯಬೇಕು. ಈಗಾಗಲೇ ದೊಡ್ಡ ಮೊತ್ತದ ಶುಲ್ಕ ಕಟ್ಟಿಯಾಗಿದೆ. ನಿನ್ನನ್ನು ಈಗ ಅಲ್ಲಿಂದ ಬಿಡಿಸಿದರೆ ಅದೆಲ್ಲವೂ ವ್ಯರ್ಥವಾಗುತ್ತದೆ' ಎಂಬ ಧೋರಣೆ ಹೊಂದುವುದು ಅಪಾಯಕಾರಿ ಆಗಬಹುದು. ತಮ್ಮ ಭಾವನೆಗಳಿಗೆ ಪೋಷಕರು ಮನ್ನಣೆ ನೀಡುತ್ತಿಲ್ಲ ಎಂಬ ಕಾರಣದಿಂದ ಮಕ್ಕಳು ಬೇಸರಗೊಳ್ಳುತ್ತಾರೆ. ಇದರಿಂದ ಅವರು ಹಂತಹಂತವಾಗಿ ಖಿನ್ನತೆಗೆ ಜಾರಬಹುದು. ದೀರ್ಘಕಾಲದ ಖಿನ್ನತೆಯು ಅವರು ಅಪಾಯಕಾರಿ ನಿರ್ಧಾರಗಳನ್ನು ಕೈಗೊಳ್ಳಲು ಪ್ರೇರೇಪಿಸಬಹುದು.

ವಸತಿಶಾಲೆಯ ಶಿಕ್ಷಕರು, ಸಿಬ್ಬಂದಿ ಸಹ ಮಕ್ಕಳ ಭಾವನೆಗಳಿಗೆ ಮಹತ್ವ ನೀಡಬೇಕು. ಅಗತ್ಯ ಎನಿಸಿದರೆ ಶಿಸ್ತಿಗೆ ಸಂಬಂಧಿಸಿದ ನಿಯಮಗಳನ್ನು ಸಡಿಲಿಸಲು ಹಿಂದುಮುಂದು ನೋಡಬಾರದು. ಈ ವಿಚಾರದಲ್ಲಿ ಜಿಗುಟುತನ ಸಲ್ಲದು. ಪೋಷಕರಿಗಾಗಲೀ ಅಥವಾ ಶಿಕ್ಷಕರಿಗಾಗಲೀ ಮಕ್ಕಳ ಹಿತರಕ್ಷಣೆಯೇ ಮುಖ್ಯವಾಗಬೇಕು.

ಮಕ್ಕಳು ಸಣ್ಣ ವಯಸ್ಸಿನಲ್ಲಿದ್ದಾಗ ಅವರ ಜೊತೆ ಒಡನಾಟ, ಆಟ, ಪಾಠ, ಸಂವಹನ ಪೋಷಕರಿಗೆ ಖುಷಿ, ಸಂತಸ ನೀಡುತ್ತವೆ. ಮಕ್ಕಳ ಜೊತೆಗಿನ ಇಂತಹ ಖುಷಿಯ ಕ್ಷಣಗಳು ಪೋಷಕರು ತಮ್ಮೊಳಗೆ ಸದಾ ಕಾಪಿಟ್ಟುಕೊಳ್ಳಬೇಕಾದಂತಹವು. ಮಕ್ಕಳಿಗೂ ತಮ್ಮ ತಂದೆ, ತಾಯಿ, ಸಹೋದರ, ಸಹೋದರಿಯರ ಜೊತೆಗಿನ ಬಾಲ್ಯದ ಒಡನಾಟದ ಕ್ಷಣಗಳು ಅವರ ಜೀವನದ ಅಮೂಲ್ಯ ಕ್ಷಣಗಳಾಗಿರುತ್ತವೆ. ಪೋಷಕರು ಮತ್ತು ಮಕ್ಕಳಿಗೆ ಇಂತಹ ಅವಿಸ್ಮರಣೀಯ ಕ್ಷಣಗಳಿಗೆ ಅವಕಾಶ ದೊರೆಯದಂತೆ ಮಕ್ಕಳನ್ನು ಎಳವೆಯಲ್ಲೇ ವಸತಿಶಾಲೆಗಳಿಗೆ ಸೇರಿಸುವುದು ಸೂಕ್ತವಾಗದೇನೊ.



ಹದಿಹರೆಯದ ವಯಸ್ಸು ತಲುಪಿದ ನಂತರ ಮಕ್ಕಳು ಹೆಚ್ಚು ಸ್ವತಂತ್ರ ಮನೋಭಾವ ಬೆಳೆಸಿಕೊಳ್ಳುತ್ತಾ ಹೋಗುತ್ತಾರೆ. ಸ್ನೇಹಿತರು, ಸಹಪಾಠಿಗಳ ಸಂಖ್ಯೆ ಬೆಳೆದಂತೆ ಮಕ್ಕಳ ಸಾಮಾಜಿಕ ವಲಯ ದೊಡ್ಡದಾಗುತ್ತಾ ಹೋಗುತ್ತದೆ. ಒಂದೊಮ್ಮೆ ಈ ಹಂತದಲ್ಲಿ ಮಕ್ಕಳು ವಸತಿಶಾಲೆಗೆ ಸೇರಿದಲ್ಲಿ ಅವರಿಗೆ ಹೊಂದಿಕೊಳ್ಳಲು ಕಷ್ಟವಾಗದು. ಆದರೂ ಕೆಲವರಿಗೆ ಕುಟುಂಬದ ಆಹಾರ, ಮನೆಯವರ ಪ್ರೀತಿ ಬಿಟ್ಟು ವಸತಿಶಾಲೆಯಲ್ಲಿ ಉಳಿಯುವುದು ಕಷ್ಟವಾಗಿ ತೋರಬಹುದು.

ಮಕ್ಕಳನ್ನು ವಸತಿಶಾಲೆಗೆ ದಾಖಲಿಸಿರಲಿ ಅಥವಾ ಅವರು ತಮ್ಮೊಟ್ಟಿಗೆ ಮನೆಯಲ್ಲಿಯೇ ಇರಲಿ, ಮಕ್ಕಳ ಜೊತೆ ನಿಯಮಿತವಾಗಿ ಸಮಯ ಕಳೆಯುತ್ತಾ ಇದ್ದರೆ ಅವರ ಮನಃಸ್ಥಿತಿಯ ಅರಿವು ಪೋಷಕರಿಗೆ ಇರುತ್ತದೆ. ಮಕ್ಕಳ ಮಾತುಗಳಿಗೆ ಕಿವಿಯಾಗಿ, ಅವರ ಭಾವನೆಗಳಿಗೆ ಹೃದಯವನ್ನು ಮುಕ್ತವಾಗಿ ತೆರೆದಿಟ್ಟಲ್ಲಿ ಕಾಲಕಾಲಕ್ಕೆ ಅವರು ನೀಡುವ ಸೂಕ್ಷ್ಮ ಸಂದೇಶಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಮಕ್ಕಳು ನೀಡುವ ಇಂತಹ ಸಂದೇಶಗಳನ್ನು ಸಕಾಲದಲ್ಲಿ ಗ್ರಹಿಸಿ, ಸ್ಪಂದಿಸುವುದು ನಮ್ಮೆಲ್ಲರ ಆದ್ಯತೆಯಾಗಬೇಕು.

ವಾಚಕರ ವಾಣಿ

ಭ್ರಷ್ಟರ ಆಸ್ತಿ: ಕಾಡುವ ಪ್ರಶ್ನೆ

ವಿವಿಧ ಇಲಾಖೆಗಳ ಹಲವು ಅಧಿಕಾರಿಗಳ ಅಕ್ರಮ ಸಂಪಾದನೆ ಬಗ್ಗೆ ಭ್ರಷ್ಟಾಚಾರ ನಿಗ್ರಹ ದಳವು ಮಾಧ್ಯಮಗಳಲ್ಲಿ ಬಹಿರಂಗಪಡಿಸಿದ ವಿವರವನ್ನು ನೋಡಿದಾಗ ದಿಗ್ಭ್ರಮೆ ಉಂಟಾಯಿತು. ಇಂತಹ ದುರಾಸೆ, ದುರ್ಬುದ್ಧಿಯ ಅಧಿಕಾರಿಗಳಿಂದ ಪ್ರಾಮಾಣಿಕ ಅಧಿಕಾರಿಗಳೂ ತಲೆ ತಗ್ಗಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಉಪ್ಪು ತಿಂದವರು ನೀರು ಕುಡಿದೇ ಕುಡಿಯುತ್ತಾರೆ ಸರಿ, ಆದರೆ ಆ ಭ್ರಷ್ಟರಿಗೆ ಶಿಕ್ಷೆಯ ಪ್ರಮಾಣ ಎಂತಹದ್ದು? ವಶಪಡಿಸಿಕೊಂಡಿರುವ ಆಸ್ತಿಯನ್ನು ಮುಂದೇನು ಮಾಡುತ್ತಾರೆ ಎಂಬಂಥ ಪ್ರಶ್ನೆಗಳು ಕಾಡುತ್ತವೆ. ಇವು ಕೇವಲ ಪ್ರಶ್ನೆಗಳಾಗಿ ಉಳಿಯದೆ ಉತ್ತರದ ದಿಕ್ಕಿನಲ್ಲಿ ಪ್ರವಹಿಸಲಿ ಎಂದು ಆಶಿಸೋಣ.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ವಿಧಾನಪರಿಷತ್: ಪ್ರಾಥಮಿಕ ಶಿಕ್ಷಕರಿಗೂ ಹಕ್ಕಿರಲಿ

ಪ್ರಾಥಮಿಕ ಶಿಕ್ಷಣವು ರಾಷ್ಟ್ರದ ಭದ್ರಬುನಾದಿ. ದೇಶದ ಶೈಕ್ಷಣಿಕ ಸ್ಥಿತಿಗತಿ ಸುಧಾರಣೆಯ ದಿಸೆಯಲ್ಲಿ ಅದು ತಳಹದಿ ಇದ್ದಂತೆ. ಹೀಗಾಗಿ, ಪ್ರಾಥಮಿಕ ಶಿಕ್ಷಣ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಸಮಸ್ಯೆಗಳನ್ನು ಪ್ರತಿನಿಧಿಸುವ ದಿಸೆಯಲ್ಲಿ ರಾಜ್ಯದ ವಿಧಾನಪರಿಷತ್ತಿನಲ್ಲಿ ಒಂದು ಪ್ರತ್ಯೇಕ ಕ್ಷೇತ್ರವನ್ನು ನಿಗದಿ ಮಾಡಿ, ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತ ಚಲಾಯಿಸುವ ಹಕ್ಕನ್ನು ಒದಗಿಸಬೇಕು. ಈ ಮೂಲಕ, ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಮತದಾನದಿಂದ ವಂಚಿತರಾಗಿರುವ ಪ್ರಾಥಮಿಕ ಶಿಕ್ಷಕರ ಬಹುದಿನಗಳ ಈ ಬೇಡಿಕೆಯನ್ನು ಈಡೇರಿಸಲು ಸರ್ಕಾರ ಮುಂದಾಗಬೇಕು. ಪ್ರೌಢಶಿಕ್ಷಣ, ಕಾಲೇಜಿನಂತಹ ಉನ್ನತ ಹಂತದ ಬೋಧಕರಿಗೆ ಮತದಾನದ ಹಕ್ಕನ್ನು ನೀಡಿ ಪ್ರಾಥಮಿಕ ಶಾಲಾ ಶಿಕ್ಷಕರ ಬಗ್ಗೆ ಮಲತಾಯಿ ಧೋರಣೆ ಅನುಸರಿಸುತ್ತಿರುವುದು ಸರಿಯಲ್ಲ.

ಜಿ.ಪಿ.ಬಿರಾದಾರ, ದೇವರಹಿಪ್ಪರಗಿ, ವಿಜಯಪುರ

ಮುಗಿಯದ ಗೊಂದಲ

ಕೇಂದ್ರ ಸರ್ಕಾರ ಜಾರಿಗೆ ತರುತ್ತಿರುವ ಅಗ್ನಿಪಥ ಯೋಜನೆಯ ಬಗ್ಗೆ, ಒಬ್ಬ ಮಗನ ಜವಾಬ್ದಾರಿಯುತ ತಂದೆಯಾಗಿ ನನ್ನಲ್ಲಿ ಕೆಲವು ಗೊಂದಲಗಳು ಕಾಡುತ್ತಿವೆ. ಹದಿನೇಳೂವರೆ ವರ್ಷದ ವಯಸ್ಸಿನ ಮಿತಿ ಇದೆ. ಆ ವಯಸ್ಸಿಗೆ ಎಸ್‌ಎಸ್‌ಎಲ್‌ಸಿ ಅಥವಾ ಕೆಲವರಿಗೆ ಪಿಯುಸಿ ಕಲಿಯಲು ಸಾಧ್ಯ ಆಗಬಹುದು. ಅಷ್ಟು ಮಾತ್ರ ಕಲಿತವರನ್ನು ಅಗ್ನಿಪಥಕ್ಕೆ ಸೇರಿಸಿಕೊಂಡು, ಅವರಿಗೆ ತರಬೇತಿ ಕೊಟ್ಟು, ನಾಲ್ಕು ವರ್ಷ ಸೈನ್ಯದ ಸೇವೆ ಮಾಡಿಸಿ, ಅನಂತರ 22ನೇ ವಯಸ್ಸಿಗೆ ಯೋಜನೆ ಪ್ರಕಾರ ಸೈನ್ಯ ಬಿಟ್ಟು ಮಗ ಮನೆಗೆ ಬಂದರೆ, ಅವನ ಭವಿಷ್ಯ ಏನಾಗಬೇಕು? ಇತ್ತ ವಿದ್ಯಾಭ್ಯಾಸ ಅಪೂರ್ಣವಾಗಿರುತ್ತದೆ, ಅತ್ತ ಮುಂದಕ್ಕೆ ಕಲಿಯುವ ಮನಸ್ಸೂ ಹೋಗಿರುತ್ತದೆ, ಕೈಯಲ್ಲಿ ಉದ್ಯೋಗವೂ ಇರುವುದಿಲ್ಲ. ರಾಜ್ಯ ಸರ್ಕಾರದ ಇಲ್ಲವೇ ಕೇಂದ್ರ ಸರ್ಕಾರದ ಉದ್ಯೋಗದಲ್ಲಿ ಮೀಸಲಾತಿ ಆಸೆ ತೋರಿಸಲಾಗುತ್ತಿದೆಯಷ್ಟೆ, ಆ ಹೊತ್ತಿಗೆ ಕಲಿಯಲಾದ ಶಿಕ್ಷಣಕ್ಕೆ ತಕ್ಕಂತೆ ಮಕ್ಕಳಿಗೆ ಯಾವ ಕೆಲಸದಲ್ಲಿ ಮೀಸಲಾತಿ ಕೊಡಬಹುದು?

ಈ ಯೋಜನೆಯ ಫಲಾನುಭವಿಗಳು ಯಾರಾಗಬಹುದೆಂದು ನೋಡಿದಾಗ, ಪ್ರಭಾವಿ ಜಾತಿಯವರು ಅಗ್ನಿಪಥ ಸೇರುವುದು ಕಡಿಮೆ, ದುಡ್ಡಿರುವ ತಂದೆ ತಾಯಿ ಮಕ್ಕಳ ಓದನ್ನು ಮೊಟಕು ಮಾಡುವುದಿಲ್ಲ. ಕೂಲಿ ಕಾರ್ಮಿಕರು, ರೈತರು, ಹಣದ ಅಭಾವ ಇರುವ ಬಡವರ ಮಕ್ಕಳಿಗೆ ಈ ಯೋಜನೆ ಆಕರ್ಷಕ ಆಗಬಹುದು. ಅಂದರೆ, ಉಚಿತ ಶಿಕ್ಷಣ ಕೊಡಬೇಕಾದ ಸರ್ಕಾರ, ಆ ವಯಸ್ಸಿನ ಮಕ್ಕಳಿಗೆ ಮೊದಲು ಹಣದ ಆಸೆ ತೋರಿಸಿ, ಕೆಲಸ ಕೊಟ್ಟಂತೆ ಮಾಡಿ, ಆಮೇಲೆ ಮನೆಗೆ ಕಳುಹಿಸುವುದು ಮಕ್ಕಳ ಭವಿಷ್ಯದ ಜೊತೆ ಚೆಲ್ಲಾಟ ಆಡಿದಂತೆ ಆಗುವುದಿಲ್ಲವೇ? ಈ ಯೋಜನೆಯಿಂದ ಉಳ್ಳವರು ಮತ್ತು ಬಡವರ ನಡುವೆ ಇನ್ನಷ್ಟು ಕಂದಕ ನಿರ್ಮಾಣ ಆಗುವುದಿಲ್ಲವೇ?

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಬಿಟ್ಟುಬಿಡಿ...

ಕುವೆಂಪು ನಮ್ಮವರು, ಬಸವಣ್ಣ ನಮ್ಮವರು
ಕನಕ ನಮಗೆ ಮಾತ್ರ, ಅಂಬೇಡ್ಕರ್ ಅನ್ಯರಿಗಲ್ಲ
ಎಂದೇಕೆ ನಿಮ್ಮ ನಿಮ್ಮಲ್ಲೇ ಕಟ್ಟಿ ಹಾಕುವಿರಿ
ಬಿಟ್ಟುಬಿಡಿ ಅವರನ್ನು ಹಾರುವ ಹಕ್ಕಿಗಳಂತೆ
ಹೋಗಿ ಕೂರಲಿ ಎಲ್ಲ ಮರಗಳಲಿ
ಎಲ್ಲರ ಮನೆ ಮೇಲೆ
ಎಲ್ಲರ ಮನಗಳಲಿ ಅವರಿಷ್ಟದಂತೆ
ಎಲ್ಲರೂ ಸೇರಿಯೇ ಕನ್ನಡ, ಕರ್ನಾಟಕ, ಭಾರತ
ಎಲ್ಲವೂ ಇದ್ದರೆ ಊಟ ರಸಭರಿತ
ಇಲ್ಲದವರ ಹೆಸರಲ್ಲಿ ಜಗಳ
ಇರುವವರ ತಲೆಯೊಳಗೆ ಕೆಟ್ಟ ಹುಳ
ತಿದ್ದುವುದಕ್ಕೆ ಅವರು ಎದ್ದು ಬರುವುದಿಲ್ಲ
ತಿದ್ದಿಕೊಳ್ಳದಿದ್ದರೆ ಮುಂದಿನ ಪೀಳಿಗೆಗೆ
ನಾವು ಮಾದರಿಯಾಗುವುದಿಲ್ಲ.

ಟಿ.ಆರ್.ರಘುನಾಥ್, ಬೆಂಗಳೂರು

ಸಮರ್ಥನೆಯ ಹೇಳಿಕೆ ಖಂಡನೀಯ

'ನಾಡಗೀತೆಯ ಸಾಲುಗಳನ್ನು ತಿರುಚಿದ ಮತ್ತು ಕುವೆಂಪು ಅವರನ್ನು ಗೇಲಿ ಮಾಡಿದ ಕೃತ್ಯದಲ್ಲಿ ರೋಹಿತ್ ಚಕ್ರತೀರ್ಥ ಅವರ ತಪ್ಪಿಲ್ಲ, ಅವರು ಆ ಪೋಸ್ಟ್ ಹಂಚಿಕೊಂಡಿದ್ದಾರೆ ಅಷ್ಟೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ (ಪ್ರ.ವಾ., ಜೂನ್ 20). ಶಿಕ್ಷಣ ಸಚಿವರನ್ನೂ ಒಳಗೊಂಡಂತೆ ಬಿಜೆಪಿಯ ಇತರ ಕೆಲವು ಮುಖಂಡರು ಇದೇ ರೀತಿಯ ಹೇಳಿಕೆ ಕೊಟ್ಟಿದ್ದಾರೆ. ಇದು ನಿಜಕ್ಕೂ ಆಶ್ಚರ್ಯ ಹಾಗೂ ಖಂಡನೀಯವಾದ ಸಂಗತಿ. ಯಾವಾಗಲೋ ದೂರು ದಾಖಲಾಗಿ 'ಬಿ' ರಿಪೋರ್ಟ್ ತೆಗೆದುಕೊಂಡಿದ್ದಾರೆ ಎಂಬ ಸಬೂಬು ಸಮ್ಮತಿಸುವಂತಹುದಲ್ಲವೇ ಅಲ್ಲ.

ಕುವೆಂಪು ಅವರಂತಹ ಮಹಾನ್ ಚೇತನದ ಬಗ್ಗೆ ಎಲ್ಲ ಗೊತ್ತಿದ್ದೂ ಹೀಗೆ ಮಾತನಾಡುವುದು ಸರಿಯಲ್ಲ. ಆ ಹೇಳಿಕೆಯ ಮೂಲ ಬೇರೆಯವರೇ ಆಗಿದ್ದರೂ, ಅದನ್ನು ತಕ್ಷಣವೇ ಖಂಡಿಸುವುದು, ದೂರು ಕೊಡುವುದು ಬಿಟ್ಟು, 'ಮೂಲ ಕವಿಗಳು ಇದ್ದರೆ ಮುಂದೆ ಬನ್ನಿ, ಬುರ್ಜ್ ಖಲೀಫಾ ಕೊಡುತ್ತೇನೆ' ಎಂದಿರುವ ಚಕ್ರತೀರ್ಥ ಅವರ ಮಾತುಗಳು ಈ ಎಲ್ಲ ಮಂತ್ರಿ ಮಾನ್ಯರಿಗೆ ತಪ್ಪು ಅಂತ ಕೂಡ ಅನ್ನಿಸುತ್ತಿಲ್ಲ!

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಅಗ್ನಿಪಥ’ಕ್ಕೆ ವಿರೋಧವೇಕೆ?

ಭಾರತೀಯ ಸೇನೆಯ ಮೂರೂ ಪಡೆಗಳ ಸೇವೆಗೆ ಯುವಜನರನ್ನು ಅಲ್ಪಾವಧಿಗೆ ನೇಮಕ ಮಾಡಿಕೊಳ್ಳುವ ಸಲುವಾಗಿ ಸರ್ಕಾರವು ನೂತನವಾಗಿ ಆರಂಭಿಸಿರುವ, ‘ಅಗ್ನಿಪಥ’ ಯೋಜನೆಗೆ ದೇಶದ ಎಲ್ಲೆಡೆ ಭಾರಿ ವಿರೋಧ ವ್ಯಕ್ತವಾಗಿದೆ. ಸೇನಾ ನೇಮಕಾತಿಯಲ್ಲಿ ಸರ್ಕಾರವು ಮಾಡಿರುವ ಬದಲಾವಣೆಯನ್ನು ವಿರೋಧಿಸಿ ಯುವಕರು ಪ್ರತಿಭಟನೆ ನಡೆಸುತ್ತಿದ್ದಾರೆ. ಸೈನಿಕರಿಗೆ ದೊರೆಯುವ ಸವಲತ್ತುಗಳು ಹೊಸದಾಗಿ ಸೃಷ್ಟಿಸಲಾಗಿರುವ ಅಗ್ನಿಪಥ ಯೋಜನೆ ಅಡಿಯಲ್ಲಿ ನೇಮಕವಾಗುವ ‘ಅಗ್ನಿವೀರ’ರಿಗೆ ಲಭ್ಯ ಆಗುವುದಿಲ್ಲ ಎಂಬುದು ವಿರೋಧಕ್ಕೆ ಪ್ರಮುಖ ಕಾರಣವಾಗಿದೆ

ಹಲವು ಸವಲತ್ತುಗಳಿಗೆ ಕೊಕ್

- ಸೇನಾ ಸೇವೆಗೆ ನಿಯುಕ್ತರಾದ ಎಲ್ಲರಿಗೂ ದೊರೆಯುವ ಪಿಂಚಣಿ ಮತ್ತು ಗ್ರಾಚ್ಯುಟಿಯಂತಹ ಯಾವುದೇ ಸೌಲಭ್ಯಗಳು ಅಗ್ನಿವೀರರಿಗೆ ದೊರೆಯುವುದಿಲ್ಲ
- ನಿವೃತ್ತ ಸೈನಿಕರಿಗೆ ದೊರೆಯುವ ಆರೋಗ್ಯ ವಿಮೆ ಸೌಲಭ್ಯವು ಅಗ್ನಿವೀರರಿಗೆ ದೊರೆಯುವುದಿಲ್ಲ
- ಸೈನಿಕರು ಮತ್ತು ನಿವೃತ್ತ ಸೈನಿಕರಿಗೆ ಇರುವ ಸೇನಾ ಕ್ಯಾಂಟೀನ್ ಸೌಲಭ್ಯವು ಅಗ್ನಿವೀರರಿಗೆ ಅನ್ವಯವಾಗುವುದಿಲ್ಲ
- ನಿವೃತ್ತ ಸೈನಿಕ (ಎಕ್ಸ್‌ಸರ್ವೀಸ್‌ಮನ್‌) ಸ್ಥಾನಮಾನ ಮತ್ತು ಸಂಬಂಧಿತ ಸವಲತ್ತುಗಳಿಗೆ ಅಗ್ನಿವೀರರು ಅರ್ಹರಲ್ಲ
- ಸಶಸ್ತ್ರ ಪಡೆಗಳ ಭವಿಷ್ಯ ನಿಧಿ (ಎಎಫ್‌ಪಿಪಿಎಫ್‌) ಯೋಜನೆ ಅಡಿ, ಹಣ ಉಳಿತಾಯ ಸವಲತ್ತು ಅಗ್ನಿವೀರರಿಗೆ ಇರುವುದಿಲ್ಲ
- ಸೇನಾ ಸಮೂಹ ವಿಮಾ ನಿಧಿ ಸವಲತ್ತು ಅಗ್ನಿವೀರರಿಗೆ ಅನ್ವಯವಾಗುವುದಿಲ್ಲ

ನೇಮಕಾತಿ ಹೆಚ್ಚಿದ್ದಲ್ಲಿ ಪ್ರತಿಭಟನೆಯೂ ಹೆಚ್ಚು

‘ಅಗ್ನಿಪಥ’ ಯೋಜನೆಯ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ನಡೆಯುತ್ತಿದೆ. ಹೆಚ್ಚಿನ ನೇಮಕಾತಿ ನಡೆಯುವ ರಾಜ್ಯಗಳಲ್ಲಿ ಪ್ರತಿಭಟನೆಯು ತೀವ್ರ ಸ್ವರೂಪದ ಹಿಂಸಾಚಾರಕ್ಕೆ ತಿರುಗಿದೆ. ಉತ್ತರ ಪ್ರದೇಶ, ಬಿಹಾರ, ಪಂಜಾಬ್, ಹರಿಯಾಣ, ಪಶ್ಚಿಮ ಬಂಗಾಳ, ಮಧ್ಯ-ಪ್ರದೇಶದ, ಜಾರ್ಖಂಡ್ ಮೊದಲಾದ ಉತ್ತರದ ರಾಜ್ಯಗಳಲ್ಲಿ ಕಿಚ್ಚು ದೊಡ್ಡ ಪ್ರಮಾಣದಲ್ಲಿ ಹಬ್ಬಿದೆ. ಹತ್ತಾರು ರೈಲುಗಳಿಗೆ ಬೆಂಕಿ ಹಚ್ಚಲಾಗಿದೆ. ಈ ರಾಜ್ಯಗಳಲ್ಲಿ ಪ್ರತಿಭಟನೆಯ ಕಾವು ಇನ್ನೂ ಆರಿಲ್ಲ.


2020ರ ಬಳಿಕ ಕೋವಿಡ್ ಕಾರಣದಿಂದ ನೇಮಕಾತಿ ಸ್ಥಗಿತಗೊಂಡಿದೆ. ಇದಕ್ಕೂ ಹಿಂದಿನ ಸೇನಾ ನೇಮಕಾತಿಯ ದತ್ತಾಂಶಗಳನ್ನು ಗಮನಿಸಿದರೆ, ಮೂರು ವರ್ಷಗಳ ಅವಧಿಯಲ್ಲಿ ಒಟ್ಟು 1.54 ಲಕ್ಷ ಸೈನಿಕರನ್ನು ನೇಮಿಸಿಕೊಳ್ಳಲಾಗಿದೆ. ಅಂದರೆ, ವರ್ಷಕ್ಕೆ ಸರಾಸರಿ 50 ಸಾವಿರ ಸೈನಿಕರು ಸೇನೆಯನ್ನು ಸೇರಿದ್ದಾರೆ. ಆದರೆ ಈ ವರ್ಷದಿಂದ ಅಗ್ನಿಪಥ ಯೋಜನೆಯಡಿ ಅಗ್ನಿವೀರರ ನೇಮಕಾತಿ ನಡೆಯಲಿದ್ದು, ನೇಮಕಾತಿಯ ಸ್ವರೂಪದಲ್ಲಿ ಭಾರಿ ಬದಲಾವಣೆ ಮಾಡಿರುವುದು ಆಕಾಂಕ್ಷಿಗಳನ್ನು ಸಿಟ್ಟಿಗೇಳಿಸಿದೆ.

ಸೇನಾ ನೇಮಕಾತಿಯಲ್ಲಿ ಉತ್ತರ ಭಾರತದ ರಾಜ್ಯಗಳಿಂದ ಹೆಚ್ಚು ಜನರು ಸೇನೆಗೆ ನೇಮಕವಾಗುತ್ತಿದ್ದಾರೆ ಎಂಬುದು ಅಂಕಿ–ಅಂಶಗಳಿಂದ ತಿಳಿಯುತ್ತದೆ. ಉತ್ತರ ಭಾರತದ ರಾಜ್ಯಗಳ ಪೈಕಿ ಉತ್ತರ ಪ್ರದೇಶ ಅಗ್ರ ಸ್ಥಾನದಲ್ಲಿದೆ. ಮೂರು ವರ್ಷಗಳ ಅವಧಿಯಲ್ಲಿ ಈ ರಾಜ್ಯದಿಂದ 18,906 ಸೈನಿಕರು ಆಯ್ಕೆಯಾಗಿದ್ದಾರೆ. ಎರಡನೇ ಸ್ಥಾನದಲ್ಲಿ ಪಂಜಾಬ್ ಇದೆ. ಇಲ್ಲಿ ಸುಮಾರು 15 ಸಾವಿರ ಸೈನಿಕರ ನೇಮಕಾತಿ ನಡೆದಿದೆ. ರಾಜಸ್ಥಾನದಲ್ಲಿ 13 ಸಾವಿರ, ಮಹಾರಾಷ್ಟ್ರದಲ್ಲಿ 11 ಸಾವಿರ ಹಾಗೂ ಹರಿಯಾಣದಲ್ಲಿ 10 ಸಾವಿರ ಯುವಕರಿಗೆ ಕೆಲಸ ಸಿಕ್ಕಿದೆ. ಬಿಹಾರ ಹಾಗೂ ಹಿಮಾಚಲ ಪ್ರದೇಶದಿಂದ ಆಯ್ಕೆಯಾಗುವವರ ಪ್ರಮಾಣವೂ ಗಮನಾರ್ಹ ಮಟ್ಟದಲ್ಲಿದೆ. ಸೇನಾ ಕಾಯ್ದೆ–1950ರ ಪ್ರಕಾರ, ಪಕ್ಕದ ದೇಶ ನೇಪಾಳದಿಂದಲೂ ಸೇನೆಗೆ ಯುವಕರನ್ನು ನೇಮಕ ಮಾಡಿಕೊಳ್ಳಲು ಅವಕಾಶವಿದೆ. ಮೂರು ವರ್ಷಗಳ ಅವಧಿಯಲ್ಲಿ 5,275 ನೇಪಾಳಿಗರು ಭಾರತದ ಸೇನೆಗೆ ಆಯ್ಕೆಯಾಗಿದ್ದಾರೆ.

ದಕ್ಷಿಣದ ರಾಜ್ಯಗಳ ಪೈಕಿ ತಮಿಳುನಾಡಿನಲ್ಲಿ ಮೂರು ವರ್ಷಗಳಲ್ಲಿ 5,300 ಸೈನಿಕರ ನೇಮಕಾತಿ ಆಗಿದೆ. ಕರ್ನಾಟಕದ 4,267 ಜನರಿಗೆ ಮಾತ್ರ ಈ ಅವಕಾಶ ಸಿಕ್ಕಿದೆ. ಉಳಿದ ರಾಜ್ಯಗಳ ಪಾಲು ಕಡಿಮೆಯಿದೆ. ಪ್ರತಿಭಟನೆಯ ವಿಚಾರಕ್ಕೆ ಬಂದರೆ, ದಕ್ಷಿಣ ಭಾರತದ ತೆಲಂಗಾಣ ಹಾಗೂ ಆಂಧ್ರಪ್ರದೇಶ ರಾಜ್ಯಗಳಲ್ಲಿ ಮಾತ್ರ ಹೆಚ್ಚು ಪ್ರತಿರೋಧ ಕಂಡುಬಂದಿದೆ. ಇನ್ನುಳಿದ ರಾಜ್ಯಗಳಲ್ಲಿ ವಿರೋಧವಷ್ಟೇ ವ್ಯಕ್ತವಾಗಿದೆ. ಹಿಂಸಾಚಾರದ ಹಿಂದೆ ಸೇನಾ ನೇಮಕಕ್ಕೆ ತರಬೇತಿ ನೀಡುವ ಸಂಸ್ಥೆಗಳ ಕುಮ್ಮಕ್ಕು ಇದೆ ಎಂಬ ಆರೋಪವೂ ಕೇಳಿಬಂದಿದೆ.

ಸೇನಾ ನೇಮಕಾತಿ: ಯಾವ ರಾಜ್ಯದಲ್ಲಿ ಎಷ್ಟು

(2016–17, 2017–18, 2018–19ರ ಅವಧಿಯಲ್ಲಿ ಆಗಿರುವ ಸೇನಾ ನೇಮಕಾತಿ)



ಸಾವು: ಪರಿಹಾರದಲ್ಲಿ ತಾರತಮ್ಯ

ಸೇನಾ ಕರ್ತವ್ಯದಲ್ಲಿರುವ ಅಗ್ನಿವೀರರು, ಕರ್ತವ್ಯದಲ್ಲಿ ಇದ್ದಾಗಲೇ ಮೃತಪಟ್ಟರೆ ಸರ್ಕಾರವು ಇಂತಿಷ್ಟು ಎಂದು ಪರಿಹಾರವನ್ನು ನೀಡುತ್ತದೆ. ಆದರೆ, ಕರ್ತವ್ಯದಲ್ಲಿನ ಸಾವನ್ನು ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ. ಮೂರು ವರ್ಗಗಳಲ್ಲಿ ಎರಡು ವರ್ಗಕ್ಕೆ ಮಾತ್ರ ಹೆಚ್ಚಿನ ಮೊತ್ತದ ಪರಿಹಾರವಿದ್ದು, ಒಂದು ವರ್ಗಕ್ಕೆ ಕಡಿಮೆ ಮೊತ್ತದ ಪರಿಹಾರವನ್ನು ನಿಗದಿ ಮಾಡಲಾಗಿದೆ.

ನೈಸರ್ಗಿಕ ವಿಕೋಪದಿಂದ ಸಂಭವಿಸಿದ ಸಾವುಗಳಿಗೆ ಪರಿಹಾರವಾಗಿ ಜೀವವಿಮೆ ಮಾತ್ರ ದೊರೆಯಲಿದೆ. ಜತೆಗೆ, ಮೃತಪಟ್ಟ ಅಗ್ನಿವೀರರ ಉಳಿಕೆ ಅವಧಿಯ ವೇತನವನ್ನು ಸರ್ಕಾರ ನೀಡುವುದಿಲ್ಲ. ಒಂದು ಬಾರಿಯ ಪರಿಹಾರ ಮತ್ತು ಉಳಿಕೆ ಸೇವಾವಧಿಯ ಪೂರ್ಣ ವೇತನದಿಂದ ಈ ವರ್ಗವು ವಂಚಿತವಾಗುತ್ತದೆ

ಅಪಘಾತ/ಅವಘಡಗಳಲ್ಲಿ ಸಂಭವಿಸಿದ ಸಾವುಗಳಿಗೆ ಜೀವವಿಮೆಯ ಜತೆಗೆ ಸರ್ಕಾರವು ಹೆಚ್ಚುವರಿಯಾಗಿ ₹44 ಲಕ್ಷವನ್ನು ಒಂದು ಬಾರಿಯ ಪರಿಹಾರವಾಗಿ ನೀಡಲಿದೆ. ಜತೆಗೆ ಅಗ್ನಿವೀರರ ಉಳಿಕೆ ಅವಧಿಯ ವೇತನವನ್ನು ಸರ್ಕಾರ ನೀಡಲಿದೆ. ಝಡ್ ವರ್ಗದ ಸಾವುಗಳಿಗೂ ಇದೇ ಸ್ವರೂಪದ ಪರಿಹಾರ ದೊರೆಯಲಿದೆ

● ವೇತನ ● ಸೇವಾನಿಧಿ ● ಒಂದು ಬಾರಿಯ ಪರಿಹಾರ ಮೊತ್ತ

ವೈ ವರ್ಗ (ಕರ್ತವ್ಯದಲ್ಲಿದ್ದಾಗ ಅಪಘಾತ/ಅವಘಡಗಳಿಂದ ಸಂಭವಿಸಿದ ಸಾವು)
- ₹48 ಲಕ್ಷ ಜೀವ ವಿಮೆ
- ₹44 ಲಕ್ಷ
- ನಾಲ್ಕು ವರ್ಷಗಳ ಉಳಿಕೆ ಸೇವಾವಧಿಯಲ್ಲಿನ ಪೂರ್ಣ ವೇತನ
- ಅಗ್ನಿವೀರರ ಸಂಬಳದಲ್ಲಿ ಕಡಿತ ಮಾಡಿದ ಸೇವಾನಿಧಿ ಮೊತ್ತ ಮತ್ತು ಸರ್ಕಾರದ ಕೊಡುಗೆ + ಬಡ್ಡಿ

ಝಡ್ ವರ್ಗ (ಯುದ್ಧ/ಸೇನಾ ಕಾರ್ಯಾಚರಣೆ/ಗಡಿ ಸಂಘರ್ಷ/ಆಂತರಿಕ ಸಂಘರ್ಷ/ಭಯೋತ್ಪಾದನಾ ದಾಳಿಯಲ್ಲಿ ಸಂಭವಿಸಿದ ಸಾವು)
- ₹48 ಲಕ್ಷ ಜೀವ ವಿಮೆ
- ₹44 ಲಕ್ಷ
- ನಾಲ್ಕು ವರ್ಷಗಳ ಉಳಿಕೆ ಸೇವಾವಧಿಯಲ್ಲಿನ ಪೂರ್ಣ ವೇತನ
- ಅಗ್ನಿವೀರರ ಸಂಬಳದಲ್ಲಿ ಕಡಿತ ಮಾಡಿದ ಸೇವಾನಿಧಿ ಮೊತ್ತ ಮತ್ತು ಸರ್ಕಾರದ ಕೊಡುಗೆ + ಬಡ್ಡಿ

ಎಕ್ಸ್ ವರ್ಗ (ಕರ್ತವ್ಯದಲ್ಲಿದ್ದಾಗ ನೈಸರ್ಗಿಕ ವಿಕೋಪದಿಂದ ಸಂಭವಿಸಿದ ಸಾವು)
- ₹48 ಲಕ್ಷ ಜೀವ ವಿಮೆ
- ಇಲ್ಲ ಇಲ್ಲ
- ಅಗ್ನಿವೀರರ ಸಂಬಳದಲ್ಲಿ ಕಡಿತ ಮಾಡಿದ ಸೇವಾನಿಧಿ ಮೊತ್ತ ಮತ್ತು ಸರ್ಕಾರದ ಕೊಡುಗೆ + ಬಡ್ಡಿ

ಆಧಾರ: ಭಾರತೀಯ ಸೇನೆಯ ಅಗ್ನಿಪಥ ಯೋಜನೆ, ಅಗ್ನಿಪಥ ಯೋಜನೆಯ ನಿಯಮಗಳು ಮತ್ತು ಷರತ್ತುಗಳು, ಪಿಐಬಿ ಪತ್ರಿಕಾ ಪ್ರಕಟಣೆ, ಪಿಟಿಐ

ಸೇವಾ ನಿಧಿ: ಹಲವು ಗೊಂದಲ

ಅಗ್ನಿವೀರರಾಗಿ ನೇಮಕಗೊಂಡ ಮೊದಲ ತಿಂಗಳಿಂದಲೂ ಅವರ ವೇತನದಲ್ಲಿ ಶೇ 30ರಷ್ಟು ಮೊತ್ತವು ಸೇವಾನಿಧಿಗೆ ಜಮೆ ಆಗಲಿದೆ. ಅಷ್ಟೇ ಮೊತ್ತವನ್ನು ಸರ್ಕಾರವೂ ಜಮೆ ಮಾಡಲಿದೆ. ನಾಲ್ಕು ವರ್ಷದ ಅಂತ್ಯದ ವೇಳೆಗೆ ಎರಡೂ ಮೊತ್ತ ಮತ್ತು ಅದಕ್ಕೆ ದೊರೆತ ಬಡ್ಡಿಯನ್ನು ಸೇರಿಸಿ ಒಟ್ಟು ₹11.71 ಲಕ್ಷದ ಮೊತ್ತವನ್ನು ಅಗ್ನಿವೀರರಿಗೆ ನೀಡಲಾಗುತ್ತದೆ ಎಂದು ಸರ್ಕಾರವು ಹೇಳಿದೆ. ಈ ಯೋಜನೆಗೆ ಸಂಬಂಧಿಸಿದ ಹಲವು ದಾಖಲೆ ಪತ್ರಗಳಲ್ಲೂ ಈ ರೀತಿಯೇ ಹೇಳಲಾಗಿದೆ. ಆದರೆ, ‘ಅಗ್ನಿಪಥ’ ಯೋಜನೆಗೆ ಸಂಬಂಧಿಸಿದ ‘ನಿಯಮಗಳು ಮತ್ತು ಷರತ್ತುಗಳು’ ದಾಖಲೆ ಪತ್ರದಲ್ಲಿ ಕೆಲವು ಷರತ್ತುಗಳನ್ನು ಉಲ್ಲೇಖಿಸಲಾಗಿದೆ. ಸೇವಾನಿಧಿಗೆ ಸಂಬಂಧಿಸಿದ ವಿವಿಧ ದಾಖಲೆ ಪತ್ರಗಳಲ್ಲಿ ಇರುವ ವಿವರವು ಪರಸ್ಪರ ವ್ಯತಿರಿಕ್ತವಾಗಿವೆ.

‘ನಿಯಮಗಳು ಮತ್ತು ಷರತ್ತುಗಳು’ ದಾಖಲೆ ಪತ್ರದ 12ನೇ ಸೆಕ್ಷನ್‌ನ, ಬಿ ಮತ್ತು ಸಿ ಭಾಗಗಳಲ್ಲಿ ಸೇವಾನಿಧಿಗೆ ಸಂಬಂಧಿಸಿದ ಷರತ್ತುಗಳನ್ನು ಉಲ್ಲೇಖಿಸಲಾಗಿದೆ. ಸಿ ಭಾಗದಲ್ಲಿ ‘ಸೇವಾನಿಧಿ ಪಾವತಿಯ ವಿಧಾನ’ವನ್ನು ವಿವರಿಸಲಾಗಿದೆ. ಈ ಭಾಗದಲ್ಲಿ, ‘ಸೇವಾನಿಧಿಯ ಮೊತ್ತವನ್ನು ಪಾವತಿ ಮಾಡಲು ಪ್ರತಿ ಅಗ್ನಿವೀರರಿಗೂ ಎರಡು ಆಯ್ಕೆಗಳನ್ನು ನೀಡಲಾಗುತ್ತದೆ. ಸ್ವಯಂ ಉದ್ಯೋಗ ಮತ್ತು ಉದ್ದಿಮೆ ಆರಂಭಿಸುವವರಿಗೆ ಮತ್ತು ತಕ್ಷಣದ ವೆಚ್ಚಗಳನ್ನು ಭರಿಸಲು ಬ್ಯಾಂಕ್ ಗ್ಯಾರಂಟಿಯ ಮುಖೇನ ಹಣಕಾಸು ಸಾಲವನ್ನು ಒದಗಿಸುವ ಗುರಿ ಹಾಕಿಕೊಳ್ಳಲಾಗಿದೆ. ಇದಕ್ಕೆ ಸಂಬಂಧಿಸಿದ ನಿಯಮಗಳನ್ನು ಪ್ರತ್ಯೇಕವಾಗಿ ರೂಪಿಸಲಾಗುತ್ತದೆ’ ಎಂದು ಹೇಳಲಾಗಿದೆ.

ಸೇವಾನಿಧಿಯ ಮೊತ್ತವನ್ನು ಅಗ್ನಿವೀರರ ಖಾತೆಗೆ ಜಮೆ ಮಾಡಲಾಗುತ್ತದೆಯೇ ಅಥವಾ ಚೆಕ್ ರೂಪದಲ್ಲಿ ನೀಡಲಾಗುತ್ತದೆಯೇ ಅಥವಾ ನಗದು ರೂಪದಲ್ಲಿ ನೀಡಲಾಗುತ್ತದೆಯೇ ಎಂಬುದಕ್ಕೆ ಸಂಬಂಧಿಸಿದಂತೆ ಈ ದಾಖಲೆ ಪತ್ರದಲ್ಲಿ ಯಾವುದೇ ಉಲ್ಲೇಖವಿಲ್ಲ. ಹೀಗಾಗಿ ಸೇವಾನಿಧಿ ಮೊತ್ತವು ಯಾವ ರೂಪದಲ್ಲಿ ಅಗ್ನಿವೀರರಿಗೆ ದೊರೆಯಲಿದೆ ಎಂಬುದು ಸ್ಪಷ್ಟವಾಗಿಲ್ಲ.

- ಸೇನೆಯ ಕಾಯಂ ಸೇವೆಗೆ ನಿಯುಕ್ತರಾದ ಅಗ್ನಿವೀರರಿಗೆ ಅವರ ವೇತನದಲ್ಲಿ ಕಡಿತವಾಗಿದ್ದ ಸೇವಾನಿಧಿ ಮೊತ್ತ ಮತ್ತು ಅದಕ್ಕೆ ಲಭ್ಯವಾದ ಬಡ್ಡಿ ಮಾತ್ರ ನೀಡಲಾಗುತ್ತದೆ. ಸರ್ಕಾರದ ಕೊಡುಗೆಗೆ ಇವರು ಅರ್ಹರಾಗುವುದಿಲ್ಲ
- ನಾಲ್ಕು ವರ್ಷಗಳಿಗೂ ಮುನ್ನವೇ ಅಗ್ನಿಪಥ ಸೇವೆಯಿಂದ ಕೋರಿಕೆ ಮೇರೆಗೆ ಸೇವಾ ಬಿಡುಗಡೆ ಪಡೆಯುವ ಅಗ್ನಿವೀರರಿಗೆ, ಅಲ್ಲಿಯವರೆಗೆ ಅವರ ವೇತನದಲ್ಲಿ ಕಡಿತ ಮಾಡಲಾಗಿದ್ದ ಸೇವಾನಿಧಿ ಮೊತ್ತ ಮತ್ತು ಅದಕ್ಕೆ ಲಭ್ಯವಾದ ಬಡ್ಡಿ ಮಾತ್ರ ದೊರೆಯಲಿದೆ. ಸೇವಾನಿಧಿಗೆ ಸರ್ಕಾರವು ಜಮೆ ಮಾಡಿದ್ದ ಮೊತ್ತವು ದೊರೆಯುವುದಿಲ್ಲ



ಶಿವಸತೀ ಕಲ್ಯಾಣಕ್ಕೆ ಒಪ್ಪಿದ ದಕ್ಷ

ಶಿವನಿಗೆ ಸತೀದೇವಿಯೊಂದಿಗೆ ವಿವಾಹ ಮಾಡಿಕೊಡುವಂತೆ ಕೋರಲು ಬ್ರಹ್ಮ ಹಂಸರಥವನ್ನೇರಿ ಪ್ರಜಾಪತಿ ಬಳಿಗೆ ಹೊರಟ. ಅತ್ತ ಸತೀದೇವಿ ಮನೆಗೆ ಬಂದು ಶಿವನಿಂದ ವರವನ್ನು ಪಡೆದ ವಿಚಾರವನ್ನು ತನ್ನ ಸಖಿಯರ ಮೂಲಕ ತಂದೆ-ತಾಯಿಗೆ ತಿಳಿಸುತ್ತಾಳೆ. ಸತೀ ಸಖಿಯರಿಂದ ವಿಷಯ ತಿಳಿದ ದಕ್ಷ ಮತ್ತು ವೀರಿಣಿಯರಿಬ್ಬರೂ ತುಂಬಾ ಆನಂದಪಟ್ಟರು. ವೀರಿಣಿ ಪುತ್ರಿಯನ್ನು ಆಲಿಂಗಿಸಿ, ಶಿರಸ್ಸನ್ನಾಘ್ರಾಣಿಸಿ ಸಂತೋಷದಿಂದ ಅವಳನ್ನು ಹೊಗಳಿದಳು.

ಇಷ್ಟಾದನಂತರ ದಕ್ಷಪ್ರಜಾಪತಿ ಮನದಲ್ಲಿ ಅನುಮಾನಗಳ ಸುರುಳಿ ಸುತ್ತಿಕೊಳ್ಳುತ್ತದೆ. ಪುತ್ರಿಯನ್ನು ಶಂಕರನಿಗೆ ಹೇಗೆ ಮದುವೆಮಾಡಿ ಕೊಡಲಿ ಎಂಬುದರಿಂದ ಮೊದಲ್ಗೊಂಡು, ಸತೀಯನ್ನು ಮದುವೆಯಾಗಲು ಶಿವನೇ ಇಲ್ಲಿಗೆ ಬರುವನೋ? ಅಥವಾ ನನ್ನ ಪುತ್ರಿಯನ್ನು ಮದುವೆಯಾಗುವಂತೆ ತಿಳಿಸಲು ಯಾರನ್ನಾದರೂ ಶಿವನ ಬಳಿಗೆ ಕಳುಹಿಸಲೆ? ಅಥವಾ ಸತಿಯಂತೆ ನಾನೂ ಶಿವನನ್ನು ಭಕ್ತಿಯಿಂದ ಪೂಜಿಸಿ ನನ್ನ ಪುತ್ರಿಯನ್ನು ಮದುವೆ ಮಾಡಿಕೊಳ್ಳುವಂತೆ ಪ್ರಾರ್ಥಿಸಲೇ? – ಎಂಬಿತ್ಯಾದಿಯಾಗಿ ದಕ್ಷ ಚಿಂತಿಸುತ್ತಾ ಕುಳಿತಿದ್ದ. ಆ ಹೊತ್ತಿಗೆ ಸರಿಯಾಗಿ ಬ್ರಹ್ಮ ಸರಸ್ವತಿಯೊಡನೆ ಆಗಮಿಸಿದ. ದಕ್ಷ ಸಂತೋಷದಿಂದ ಬರಮಾಡಿಕೊಂಡು ‘ಓ ಬ್ರಹ್ಮಪಿತನೇ, ನೀನು ಯಾವ ನಿಮಿತ್ತವಾಗಿ ಇಲ್ಲಿಗೆ ಬಂದಿರುವೆ?’ ಎಂದುಕೇಳಿದ. ಬ್ರಹ್ಮ ‘ಎಲೈ ದಕ್ಷ, ನಿನ್ನ ಪುತ್ರಿಯಾದ ಸತಿಯು ಜಗತ್ಪ್ರಭುವಾದ ಮಹೇಶ್ವನನ್ನು ಆರಾಧಿಸಿ ಯಾವ ವರವನ್ನು ಅವನಿಂದ ಪಡೆದಿರುವಳೋ, ಆ ವರವು ಈಗ ಸಿದ್ಧಿಸುವಂತಹ ಸಮಯವು ಬಂದಿದೆ. ಶಂಕರನು ನಿನ್ನ ಪುತ್ರಿಯನ್ನ ವಿವಾಹವಾಗಬಯಸಿ ನನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ. ಈ ವಿಚಾರದಲ್ಲಿ ಶ್ರೇಯಸ್ಕರವಾದ ಯಾವ ಕಾರ್ಯವನ್ನು ಮಾಡಬೇಕು ಎಂಬುದನ್ನು ಹೇಳುವೆನು ಕೇಳು’ ಎನ್ನುತ್ತಾನೆ.

ತಂದೆ ಬ್ರಹ್ಮನ ಮಾತನ್ನು ಕೇಳಿ ದಕ್ಷಪ್ರಜಾಪತಿ ಆನಂದತುಂದಿಲನಾಗುತ್ತಾನೆ. ತನ್ನ ಪುತ್ರಿ ಸತೀದೇವಿಯನ್ನು ವಿವಾಹ ಮಾಡಿಕೊಡಲು ಶಿವನ ಬಳಿಗೆ ಯಾರನ್ನು ಮಾತುಕತೆಗೆ ಕಳುಹಿಸಬೇಕೆಂದು ಯೋಚಿಸುತ್ತಿದ್ದ ತನಗೆ ತಂದೆಯೇ ರಾಯಭಾರಿಯಾಗಿ ಬಂದಿದ್ದು ಬಹಳ ಸಂತೋಷವಾಗುತ್ತದೆ. ‘ಸತೀದೇವಿಗೆ ವರವನ್ನು ಕೊಟ್ಟುಹೋದ ಶಂಕರ ಈಗ ಸತೀದೇವಿಯ ವಿರಹದಿಂದ ಬಳಲುತ್ತಿದ್ದಾನೆ. ಈಗ ನಾವು ಸತೀದೇವಿಯನ್ನು ಶಿವನಿಗೆ ಕೊಟ್ಟು ವಿವಾಹ ಮಾಡಿಕೊಡುವ ಕಾರ್ಯದತ್ತ ಗಮನ ಹರಿಸಬೇಕು. ಶಿವ ಗೃಹಸ್ಥನಾಗಲು ನಾವೆಲ್ಲಾ ಎಷ್ಟೆಲ್ಲಾ ಶ್ರಮಪಟ್ಟಿದ್ದೆವು. ಆದರೆ ನಮ್ಮಿಂದ ಆಗದ ಕಾರ್ಯವನ್ನು ಸತೀದೇವಿ ಮಾಡಿದ್ದಾಳೆ. ನಾವಿನ್ನು ತಡಮಾಡುವುದು ಬೇಡ, ಅವರಿಬ್ಬರ ವಿವಾಹವನ್ನು ವಿಧಿಯುಕ್ತವಾಗಿ ನೆರವೇರಿಸಬೇಕು’ ಎನ್ನುತ್ತಾನೆ ಬ್ರಹ್ಮ.

ಬ್ರಹ್ಮನ ಮಾತನ್ನು ಒಪ್ಪಿದ ದಕ್ಷ ಮತ್ತು ವೀರಿಣಿ ದಂಪತಿ ತಾವು ಸಹ ಶಿವನಲ್ಲಿಗೆ ಮದುವೆ ಸಂಧಾನಕ್ಕೆ ಯಾರನ್ನು ಕಳುಹಿಸುವುದೆಂಬ ಚಿಂತೆಯಲ್ಲಿದ್ದೆವು. ಈಗ ನಮಗೆ ಸಮಾಧಾನವಾಗಿದೆ. ಸತೀದೇವಿ ಮದುವೆ ಆಗಬಯಸಿ ಶಂಕರನನ್ನು ಆರಾಧಿಸಿದಳು. ಇದಕ್ಕೆ ಶಿವನೂ ಒಪ್ಪಿ ಅವಳನ್ನು ಪಡೆಯಬೇಕೆಂದು ಹಿಮಾಲಯದಲ್ಲಿ ಚಿಂತಿಸುತ್ತಿದ್ದಾನೆ. ಶಂಕರನಿಗಾಗಿಯೇ ಜನಿಸಿರುವ ಸತೀದೇವಿಯನ್ನು ಮದುವೆ ಮಾಡಿಕೊಡುವ ಮೂಲಕ ತಾವು ಕೃತಾರ್ಥರಾಗುತ್ತೇವೆ ಎಂದು ಹೇಳಿದರು.

ದಕ್ಷದಂಪತಿಗಳ ಮಾತನ್ನು ಕೇಳಿ ಬ್ರಹ್ಮನಿಗೂ ತನ್ನ ರಾಯಭಾರ ಕಾರ್ಯ ಸುಲಭವಾಗಿದ್ದರಿಂದ ತೃಪ್ತನಾಗಿ ‘ಶಂಕರನನ್ನು ನಿನ್ನ ಮನೆಗೆ ನಾರದನ ಮೂಲಕ ಕರತರುವೆ. ಅವನಿಗಾಗಿ ನಿಶ್ಚಿತಳಾಗಿರುವ ನಿನ್ನ ಪುತ್ರಿಯನ್ನು ಮದುವೆಮಾಡಿ ಕೊಡು’ ಎಂದ. ಇದಕ್ಕೆ ದಕ್ಷ ಮತ್ತವನ ಪತ್ನಿ ವೀರಿಣಿ ಸಂತೋಷದಿಂದ ಒಪ್ಪಿಕೊಂಡರು. ತನ್ನ ಮದುವೆ ಸಂಧಾನ ಯಶಸ್ವಿಯಾದ ನಂತರ ಬ್ರಹ್ಮ, ಮಗನಿಂದ ಯಥೋಚಿತವಾದ ಆತಿಥ್ಯ ಸ್ವೀಕರಿಸಿ ಅಲ್ಲಿಂದ ಬೀಳ್ಕೊಂಡ. ಸತೀದೇವಿಯನ್ನು ಮದುವೆ ಮಾಡಿಕೊಡಲು ದಕ್ಷ ದಂಪತಿ ಒಪ್ಪಿಕೊಂಡಿರುವ ವಿಷಯವನ್ನು ಶಂಕರನಿಗೆ ತಿಳಿಸಲು ಕೈಲಾಸಕ್ಕೆ ಹೊರಟ.

ಇತ್ತ ದಕ್ಷಪ್ರಜಾಪತಿ ಸಹ ತನ್ನ ಇಷ್ಟಾರ್ಥ ಕೈಗೂಡಿತೆಂದು ಪತ್ನಿ ಮತ್ತು ಪುತ್ರಿಯೊಡನೆ ತುಂಬಾ ಹರ್ಷಚಿತ್ತನಾದ ಎಂಬಲ್ಲಿಗೆ ವೇದವ್ಯಾಸರ ಶ್ರೀಶಿವಮಹಾಪುರಾಣದ ರುದ್ರಸಂಹಿತೆಯಲ್ಲಿನ ಸತೀಖಂಡದ ಹದಿನೇಳನೆ ಅಧ್ಯಾಯ ಮುಗಿಯುತ್ತದೆ. ●

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸಾವಿರಾರು ಮುಸ್ಲಿಮರು ರಸ್ತೆಯೊಂದರಲ್ಲಿ ಸೇರಿದ್ದ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ‘ಇದು ಕೋಲ್ಕತ್ತದಲ್ಲಿ ತೆಗೆಯಲಾಗಿರುವ ಚಿತ್ರ. ಪಶ್ಚಿಮ ಬಂಗಾಳದಲ್ಲಿ ಮುಸ್ಲಿಮರ ಜನಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಏರಿಕೆ ಆಗಿರುವುದಕ್ಕೆ ಈ ಚಿತ್ರವೇ ಸಾಕ್ಷಿ. ಈ ಸಮುದಾಯದ ಜನಸಂಖ್ಯೆ ಏರಿಕೆಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೇ ಕಾರಣ. ಈ ದೇಶ ಒಂದು ದಿನ ಇಸ್ಲಾಮಿಕ್ ರಿಪಬ್ಲಿಕ್ ಆಗುತ್ತದೆ. ಅದನ್ನು ತಡೆಯಬೇಕೆಂದರೆ ಹಿಂದೂಗಳೆಲ್ಲರೂ ಬಿಜೆಪಿಗೆ ಮತ ನೀಡಬೇಕು’ ಎಂಬ ವಿವರಣೆಯನ್ನು ಈ ಚಿತ್ರದ ಜೊತೆ ನೀಡಲಾಗಿದೆ.



ಈ ಚಿತ್ರದ ಜೊತೆ ನೀಡಲಾಗಿರುವ ವಿವರಣೆ ಸುಳ್ಳು ಎಂದು ‘ದಿ ಲಾಜಿಕಲ್ ಇಂಡಿಯನ್’ ವೇದಿಕೆ ವರದಿ ಮಾಡಿದೆ. ‘ಚಿತ್ರವನ್ನು ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಿದಾಗ ಘಟನೆಗೆ ಸಂಬಂಧಿಸಿದ ವಿಡಿಯೊಗಳು ಯೂಟ್ಯೂಬ್‌ನಲ್ಲಿ ಪತ್ತೆಯಾಗಿವೆ. ಈ ಚಿತ್ರವನ್ನು 2021ರ ಜನವರಿಯಲ್ಲಿ ಪಾಕಿಸ್ತಾನದ ಲಾಹೋರ್‌ನಲ್ಲಿ ಸೆರೆಹಿಡಿಯಲಾಗಿದೆ. ‘ತೆಹ್ರೀಕ್–ಲಬ್ಬೈಕ್ ಪಾಕಿಸ್ತಾನ’ ಪಕ್ಷದ ಸಂಸ್ಥಾಪಕ ಅಲ್ಲಮ್ ಖಾದಿಮ್ ಹುಸೇನ್ ರಿಜ್ವಿ ಅವರ ಚೆಹ್ಲಮ್ (ವ್ಯಕ್ತಿ ಮೃತಪಟ್ಟ 40ನೇ ದಿನ ಕೈಗೊಳ್ಳುವ ಧಾರ್ಮಿಕ ಆಚರಣೆ) ನಡೆದಿತ್ತು. ಅದಕ್ಕಾಗಿ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು’ ಎಂದು ದಿ ಲಾಜಿಕಲ್ ಇಂಡಿಯನ್ ವಿವರಿಸಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಹೆಸರೆಂಬ ಕಸ

ಹೆಸರು ಹೆಸರೆಂದು ನೀಂ ಬಸವಳಿವುದೇಕಯ್ಯ?|
ಕಸದೊಳಗೆ ಕಸನಾಗಿ ಹೋಹನಲೆ ನೀನು?||
ಮುಸುಕಲೀ ಧರೆಯ ಮರೆವೆನ್ನನ್, ಎನ್ನುತ ಬೇಡು|
ಮಿಸುಕದಿರು ಮಣ್ಣಿನಲಿ - ಮಂಕುತಿಮ್ಮ ||654||

ಪದ-ಅರ್ಥ: ಬಸವಳಿವುದೇಕಯ್ಯ = ಬಸವಳಿವುದು (ಬಸವಳಿಯುವುದು, ಆಯಾಸಗೊಳ್ಳುವುದು) + ಏಕಯ್ಯ, ಹೋಹನಲೆ = ಹೋಗುವವನಲ್ಲವೆ, ಮರೆವೆನ್ನನ್ = ಮರೆವು + ಎನ್ನನ್, ಮಿಸುಕದಿರು = ಅಲುಗಾಡದಿರು.

ವಾಚ್ಯಾರ್ಥ: ಹೆಸರು, ಹೆಸರೆಂದು ಯಾಕೆ ಒದ್ದಾಡುತ್ತೀ? ನೀನು ಕಸದಲ್ಲಿ ಕಸವಾಗಿ ಹೋಗುವವನು. ಈ ಜಗತ್ತು ನನ್ನನ್ನು ಮರೆತುಬಿಡಲಿ ಎಂದು ಭಗವಂತನನ್ನು ಬೇಡು. ಮಣ್ಣಿನಲ್ಲಿ ಮಣ್ಣಾಗಿ ಇರು.

ವಿವರಣೆ: ಎಲ್ಲರಿಗೂ ಹೆಸರನ್ನು ಶಾಶ್ವತವಾಗಿಸುವ ಹುಚ್ಚು. ಅದು ಶಾಶ್ವತವಾಗುವುದು ಸಾಧ್ಯವಿಲ್ಲವೆಂದು ತಿಳಿದೂ ಅದಕ್ಕೆ ಒದ್ದಾಡುವುದು ತಪ್ಪಿಲ್ಲ. ಪುಟ್ಟ ಕೆಲಸಮಾಡಿದರೂ ಅಲ್ಲಿ ತಮ್ಮ ಹೆಸರಿರಬೇಕು. ಅದಿಲ್ಲದಿದ್ದರೆ ಕೋಪ, ಅಸಹನೆ. ಪ್ರಪಂಚದಲ್ಲಿ ಎಷ್ಟು ದೊಡ್ಡ ದೊಡ್ಡ ಸಾಧನೆ ಮಾಡಿದವರು ಈಗಿಲ್ಲ, ಅವರ ಹೆಸರುಗಳೂ ನಮಗೆ ನೆನಪಿಲ್ಲ. ವ್ಯಕ್ತಿ ಹಾಗೂ ಕಾರ್ಯ ಶಾಶ್ವತವಾಗಿ ಉಳಿಯುವುದು ಕಷ್ಟ.

ಅವರು ಹಿರಿಯರು, ಸಮಾಜಕ್ಕೆ ಮಾದರಿಯಾದವರು. ಅವರನ್ನು ಒಬ್ಬ ತರುಣ ಕೇಳಿದ, “ಸರ್, ತಮಗೆ ಒಬ್ಬನೇ ಮಗ, ಅವನಿಗೂ ಮಕ್ಕಳಿಲ್ಲ. ಮುಂದೆ ತಮ್ಮ ಮನೆತನದ ಹೆಸರನ್ನು ಉಳಿಸುವವರು ಯಾರು ಸ್ವಾಮಿ? ತಮ್ಮದು ಅಷ್ಟು ಪ್ರಖ್ಯಾತವಾದ ಮನೆತನ”. ಹಿರಿಯರು ಅವನನ್ನು ತೀಕ್ಷ್ಣವಾಗಿ ನೋಡಿ ಕೇಳಿದರು, ‘ಅಯ್ಯಾ, ಶ್ರೀರಾಮನ ವಂಶದವರು ಇದ್ದಾರೇನಯ್ಯಾ?’.

‘ಯಾರೂ ಇಲ್ಲ ಸ್ವಾಮಿ’

‘ಶ್ರೀ ಕೃಷ್ಣನ ವಂಶದವರು?’

‘ಯಾರೂ ಇದ್ದಂಗಿಲ್ಲ ಸಾರ್’

‘ಸರಿ, ಬುದ್ಧ, ಮಹಾವೀರರ ವಂಶದವರು ಯಾರಿದ್ದಾರೆ?’


‘ಯಾರಿದ್ದಾರೋ ತಿಳಿಯದು ಸ್ವಾಮಿ’

‘ಅಲ್ಲಯ್ಯ ಅಂಥವರ ವಂಶದವರೇ ಉಳಿದಿಲ್ಲವಂತೆ, ಇನ್ನು ವಂಶದ ಹೆಸರು ಉಳಿಯುವ ಚಿಂತೆ ಏಕೆ?’ ತರುಣ ಸುಮ್ಮನಾದ.

ಈ ಮಾತು ಸತ್ಯವಲ್ಲವೇ? ಯಾರ ಹೆಸರು ಉಳಿದಿದೆ ಪ್ರಪಂಚದಲ್ಲಿ? ಅದರಲ್ಲೂ ಹೆಸರಿಗಾಗಿ ಒದ್ದಾಡಿದವರ ಹೆಸರು ಖಂಡಿತವಾಗಿಯೂ ಉಳಿದಿಲ್ಲ.

ಈ ಮಾತನ್ನು ಕಗ್ಗ ತುಂಬ ಒರಟಾಗಿ, ಎದೆಗೆ ತಟ್ಟುವಂತೆ ಹೇಳುತ್ತದೆ. ನೀನು ಕಸದಲ್ಲಿ ಕಸವಾಗಿ ಹೋಗುವವನು. ಸತ್ತ ನಂತರ ಮಣ್ಣೋ, ಬೂದಿಯೋ ಆಗಿ ಹೋಗುತ್ತೀ. ಹಿಂದೆ ಅದೆಷ್ಟು ಜನ ಹೀಗೆಯೇ ಮಣ್ಣು, ಕಸವಾಗಿ ಹೋದರೋ? ಅದರೊಳಗೆ ನೀನೊಬ್ಬ. ಆದರೆ ಭಗವಂತನನ್ನು ಬೇಡುವುದಾದರೆ ಒಂದನ್ನು ಮಾತ್ರ ಬೇಡು, ‘ಭಗವಂತಾ, ಈ ಪ್ರಪಂಚದ ಮರವೆಯೊಳಗೆ ನಾನೂ ಸೇರಿ ಹೋಗಲಿ, ನನ್ನ ಹೆಸರನ್ನು ಜಗತ್ತು ಮರೆತು ಬಿಡಲಿ’. ಕುತೂಹಲದ ವಿಷಯವೆಂದರೆ, ಯಾರು ಹೆಸರಿಗಾಗಿ ಒದ್ದಾಡಿದರೋ ಅವರೆಲ್ಲರನ್ನು ಪ್ರಪಂಚ ನಿಷ್ಕರುಣೆಯಿಂದ ಮರೆತು ಹಾಕಿದೆ. ಆದರೆ ಯಾರು ಹೆಸರು ಬೇಡವೆಂದು ಜಗತ್ತಿನ ಕಲ್ಯಾಣಕ್ಕೆ ದುಡಿದರೋ, ಅವರ ಹೆಸರು ಶಾಶ್ವತವಾಗಿ ನಿಂತಿವೆ. ಆದ್ದರಿಂದ ಮಣ್ಣಲ್ಲಿ ಮಣ್ಣಾಗಿ ಮಿಸುಕದೆ ಇರುವುದೇ ಕ್ಷೇಮ. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜೂನ್ 21, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಅಷ್ಟಮಿ ಗಂ. 20-31 ನಕ್ಷತ್ರ: ಉತ್ತರಾಭಾದ್ರಾ ಗಂ. 29-03 ಯೋಗ: ಆಯುಷ್ಮಾನ್ ಗಂ. 06-41, ಕರಣ: ಬಾಲವ ಗಂ. 08-41, ಮಿಥುನ ಮಾಸದ 06 ನೇ ದಿನ.

ರಾಹುಕಾಲ: ಮಧ್ಯಾಹ್ನ 03:00 – 04:30

ಸೂರ್ಯೋದಯ: 06-09 **ಸೂರ್ಯಾಸ್ತ:** 06-56

ಮುಸ್ಲಿಂ ದಿನಾಂಕ: 21 ಜುಲ್ಖಾಯಿದ್

ಅದೃಷ್ಟ ಸಂಖ್ಯೆ: 5, 9

ಮೇಷ: ನಿಮ್ಮ ತೊಂದರೆಗಳು ಒಂದೊಂದಾಗಿ ಉಪಶಮನಗೊಳ್ಳುತ್ತಾ ಹಂತ ಹಂತವಾಗಿ ಅಭಿವೃದ್ಧಿ. ಜೀವನೋಲ್ಲಾಸ ಉಂಟಾಗುವುದು. ಸರ್ಕಾರಿ ಉದ್ಯೋಗಿಗಳಿಗೆ ಶಿಕ್ಷೆಯ ರೂಪದಲ್ಲಿ ವರ್ಗಾವಣೆ ಸಂಭವ.

ವೃಷಭ: ಲೋಹ ಮಾರಾಟಗಾರರಿಗೆ ಅನಿರೀಕ್ಷಿತವಾಗಿ ಲಾಭ. ಧನ ಲಾಭದ ಉಪಾಯಗಳು ಹೊಳೆಯುವಂತ ಮಾರ್ಗಗಳನ್ನು ಹುಡುಕುವಿರಿ. ಅದರಿಂದಾಗಿ ನೀವು ಆಸಕ್ತಿದಾಯಕ ದಿಕ್ಕಿಗೆ ಸಾಗಬಹುದು.

ಮಿಥುನ: ಗುರುಗಳ ದರ್ಶನ ಭಾಗ್ಯ. ಈ ದಿನವನ್ನು ಹೊಸ ರೀತಿಯಲ್ಲಿ ಪ್ರಾರಂಭಿಸುವಿರಿ. ದುಬಾರಿ ವಸ್ತುಗಳನ್ನು ಖರೀದಿಸುವ ಕುರಿತು ಹಾಗು ಅದರ ಅವಶ್ಯಕತೆಯ ಕುರಿತು ನಿಮ್ಮ ಮನೆಯವರೊಂದಿಗೆ ಚರ್ಚಿಸಿ ನಂತರ ಖರೀದಿಸಿ.

ಕರ್ಕಾಟಕ: ಸಿಹಿ ವಿಚಾರ, ಅವಕಾಶ ಮತ್ತು ಕಹಿಯ ಸಂಗತಿಯನ್ನು ಮುಕ್ತ ಮನಸ್ಸಿನಿಂದ ಸಮಾನವಾಗಿ ಸ್ವೀಕರಿಸಿ. ಇಂದಿನ ನಿಮ್ಮ ಮನಸ್ಥಿತಿ ಯಾರೊಂದಿಗೂ ಬೆರೆಯದೆ, ಕೆಲಸ ಕಾರ್ಯಗಳತ್ತಲೇ ಇರುವುದು.

ಸಿಂಹ: ನಿಮ್ಮ ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ. ಅವಶ್ಯಕತೆಗಿಂತ ಹೆಚ್ಚಾಗಿ ಹಣ ಬರಲಿದೆ. ತಾಂತ್ರಿಕ ವರ್ಗದಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಆಲಸ್ಯದಿಂದ ಕೆಲಸ ಬಾಕಿ.

ಕನ್ಯಾ: ಸ್ವಂತವಾಗಿ ತರಕಾರಿಯಂತಹ ವ್ಯಾಪಾರ ಆರಂಭ ಮಾಡುವ ಯೋಚನೆ ಸದ್ಯಕ್ಕೆ ಸರಿಯಲ್ಲ. ಕುಟುಂಬದಲ್ಲಿ ಹೊಸ ಜವಾಬ್ದಾರಿಗಳು ಹೆಗಲೇರಲಿವೆ. ಪುಸ್ತಕ ಪ್ರಕಾಶಕರಿಗೆ ನೂತನ ಕಾರ್ಯಭಾರ.

ತುಲಾ: ಮಾನಸಿಕ ಒತ್ತಡ ಸ್ವಲ್ಪ ಕಡಿಮೆಯಾಗಲಿದೆ. ತಾಂತ್ರಿಕ ಕ್ಷೇತ್ರದಲ್ಲಿ ಜೀವನ ನಡೆಸುವವರು ಉದ್ಯೋಗದಲ್ಲಿ ಎಡಗುವಂತಹಾ ಅಥವಾ ದಂಡ ಕಟ್ಟುವ ಸ್ಥಿತಿ ಈ ದಿನ ಎದುರಾಗಬಹುದು. ಕೆಲಸದಲ್ಲಿ ಹೆಚ್ಚಿನ ಗಮನವಿರಲಿ.

ವೃಶ್ಚಿಕ: ಬಂಗಾರದ ಮೇಲಿನ ಹೂಡಿಕೆಯಿಂದ ಲಾಭ. ಸರ್ಕಾರಿ ಸಂಸ್ಥೆಗಳಲ್ಲಿ ಅಧ್ಯಾಪಕ ವೃತ್ತಿ ಕೈಗೊಳ್ಳುವ ಬಗ್ಗೆ ಹೆಚ್ಚಿನ ಪರಿಶ್ರಮವಿರಲಿ. ಮಗಳ ಮದುವೆ ಮುಂತಾದ ಮಂಗಳ ಕಾರ್ಯಗಳ ಬೆಳವಣಿಗೆ ನೆರವೇರುವುದು.

ಧನು: ಇಂದು ನಿಮ್ಮ ಜೀವನದಲ್ಲಿ ಹೊಸಹುರುಪನ್ನು ಮೂಡಿಸಿ ಆನಂದ-ಯುಕ್ತವಾಗಿಡುವುದರಲ್ಲಿ ಸಂಶಯವಿಲ್ಲ. ಸ್ನೇಹಿತರ ಬಳಗದಲ್ಲಿ ಸೇರಿ ನಿಷ್ಫಲ ವಿಚಾರಗಳಿಗಾಗಿ ಸಮಯಹರಣವೂ, ಕೀರ್ತಿಹಾನಿಯು ಸಂಭವಿಸಲಿದೆ.

ಮಕರ: ರಸ್ತೆ ಗುತ್ತಿಗೆದಾರರಿಗೆ, ಮರ-ಮುಟ್ಟುಗಳ, ಪೀಠೋಪಕರಣ ಮತ್ತು ಕಲ್ಲಿನ ವ್ಯಾಪಾರಿಗಳಿಗೆ ಶ್ರಮದ ದುಪ್ಪಟ್ಟು ಸಂಪಾದನೆ. ಮೂಳೆಗೆ ಸಂಬಂಧಿಸಿದ ಸಮಸ್ಯೆಯು ಕಾಣಿಸಿಕೊಳ್ಳಬಹುದು. ನಿರ್ಲಕ್ಷಿಸಬೇಡಿ.

ಕುಂಭ: ಜೀವನ ಶೈಲಿಯಲ್ಲಿ ಸುಧಾರಣೆ ಕಂಡು ಬಂದು ಎಲ್ಲವೂ ನಿಮಗೆ ಅನುಕೂಲ ಆಗಲಿದೆ. ಸೋಮಾರಿತನ ಇಲ್ಲದೆ ಧೈರ್ಯದಿಂದ ಮುನ್ನುಗ್ಗಿ ಕೆಲಸಮಾಡುವವರಿಗೆ ಕನಸುಗಳು ನನಸಾಗುವಂತಾಗಲಿದೆ.

ಮೀನ: ಸಾರ್ವಜನಿಕರ ಸೇವೆ ಮಾಡುವವರಿಗೆ ಅನುಯಾಯಿಗಳಿಂದ ಸಹಕಾರ, ಅಸಹಕಾರ ಎರಡನ್ನೂ ಸ್ವಾಗತಿಸಿ. ತಾಳಿದವನು ಬಾಳಿಯಾನು ಎಂಬಂತೆ ದುಡುಕದೇ ಸಮಾದಾನದಿಂದ ವ್ಯವಹರಿಸಿ.

ಪದಬಂಧ 4995


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಒಪ್ಪವಾಗಿ ಬಂದಿರುವ ಬಿಂದು ರೂಪದ ವರ್ಣ (4)
3.ಮಿತಿ ಮೀರಿದ ಕೋಪವಿದು (3)
4.ಕಂಠೀಹಾರದ ಹತ್ತಿರ ಗರ್ಜಿಸುವ ಪ್ರಾಣಿ ಕಾಣುತ್ತಿದೆ (4)
6.ಪರಂಪರೆಯಲ್ಲಿಯೇ ಈ ಗಲಾಟೆ! (2)
7.ನಾಮ ಹಚ್ಚಿಕೊಂಡವನ ಹೆಸರು (4)
8.ಜಡಿಮಳೆಯಲ್ಲಿ ಖರೀದಿಸಿದ ವಂದರಿ (3)
9.ಮಾಡಿದ ಕೆಲಸಕ್ಕೆ ದೊರೆತ ಲಾಭ (4)
12.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
13.ಮಲಗುವ ಮನೆಯಿದು (4)
15.ಅಳೆಯುವ ಸಾಧನ (3)
16.ಎಳೆತನದಿಂದಲೂ ಮೊಳೆತ ಸ್ನೇಹ! (4)

ಮೇಲಿಂದ ಕೆಳಕ್ಕೆ

1.ಅಪರಿಚಿತ ಕೊಟ್ಟಿದ್ದು ಚೊಕ್ಕ ಚಿನ್ನ (4)
2.ಕಂದಾಚಾರದಲ್ಲೇ ಬೆಲೆ ಹುಡುಕಿ! (2)
3.ಚಿತ್ರವಿದ್ದುದಕ್ಕೇ ಇಷ್ಟೊಂದು ಬೆರಗು! (3)
5.ಯುವಕರೆಲ್ಲ ನೋಡಿರುವ ಪ್ರದೇಶ! (3)
7.ನಾಡಾಡಿಯ ಧಮನಿ! (2)
8.ಜಟಿಲತೆಯಿಂದ ಸಂಗ್ರಹಿಸಿರುವ ನೀರು (2)
9.ವೇಷ ಧರಿಸಿಕೊಂಡು ಒಳಹೋಗುವಿಕೆ! (3)
10.ಹೋಲಿಕೆಗೊಂದು ಪರ್ಯಾಯ ಪದ (4)
11.ನೂರರ ಮೊತ್ತ (3)
14.ಹಲಗೆಗಾಗಿ ಬೆಳೆದ ವೈರ! (2)



4994ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆಘ್ರಾಣ 2.ಆವರಣ 4.ಸಾಕ್ಷಾತ್ಕಾರ 6.ಪ್ರಸಂಗ 7.ನೆಪ 9.ಕನಕ 11.ರವಿ 13.ಕವಲು 14.ಟಕ್ಕುತನ 16.ಮನೆತನ 17.ಶಯನ

ಮೇಲಿಂದ ಕೆಳಕ್ಕೆ: 1.ಆತ್ಮಸಾಧನೆ 2.ಆಸೆ 3.ರಕ್ತಸಂಚಾರ 5.ರಕ್ಷಕ 8.ಪರಿವರ್ತನೆ 10.ಕರಟ 12.ವಿಮಾನಯಾನ 15.ಮಾನ

ಸುಡೊಕು 5381

			4		3	9	6	
	9	8						5
			5		8	7	2	1
		9						7
	3	7	1	8	6	4	5	
8						2	1	
6		5		2				4
3						5		2
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5380 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಅಗ್ನಿಪಥ: ಬೆಳಗಾವಿಯಲ್ಲಿ ಬಂದ್ ಯತ್ನ ವಿಫಲ

ಬೆಳಗಾವಿ: 'ಅಗ್ನಿಪಥ' ಯೋಜನೆ ವಿರೋಧಿಸಿ ಸೋಮವಾರ ಕರೆ ನೀಡಿದ್ದ ಬೆಳಗಾವಿ ಬಂದ್ ಹಾಗೂ ಬೃಹತ್ ಪ್ರತಿಭಟನೆ ಯತ್ನವನ್ನು ಪೊಲೀಸರು ವಿಫಲಗೊಳಿಸಿದರು. ನಗರದಲ್ಲಿ ಇಡೀ ದಿನ ಶಸ್ತ್ರಸಜ್ಜಿತ ಪೊಲೀಸರೇ ಕಾಣಿಸಿದರು.

ಕ್ಷಿಪ್ರಕಾರ್ಯ ಪಡೆಯ ಮೂರು ತುಕಡಿಗಳು, ಕೆಎಸ್‌ಆರ್‌ಪಿ ಪೊಲೀಸರು ಬೆಳಗ್ಗೆಯಿಂದಲೇ ಪಥಸಂಚಲನ ನಡೆಸಿ, ಶಾಂತಿ ಕದಡದಂತೆ ಎಚ್ಚರಿಕೆ ಕೊಟ್ಟರು. ಮುಂಜಾಗ್ರತೆಯಾಗಿ ಜಲಫಿರಂಗಿ ವಾಹನ ತರಿಸಲಾಗಿತ್ತು, ಆಯಕಟ್ಟಿನ ಸ್ಥಳಗಳಲ್ಲಿ ಡ್ರೋನ್ ಮೂಲಕ ಕಣ್ಗಾವಲು ಇಡಲಾಗಿತ್ತು.

ನಗರಕ್ಕೆ ಸಂಪರ್ಕ ಕಲ್ಪಿಸುವ ಎಲ್ಲ ಮಾರ್ಗಗಳಲ್ಲೂ ಚೆಕ್‌ಪೋಸ್ಟ್ ನಿರ್ಮಿಸಿದ್ದ ಪೊಲೀಸರು, ಗುಂಪು ಸೇರಿದ್ದ 265ಕ್ಕೂ ಹೆಚ್ಚು ಮಂದಿಯನ್ನು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ಕಲಬುರಗಿಯಲ್ಲಿ ಬಂಧನ

ಕಲಬುರಗಿ ವರದಿ: ಯುವಕರಿಗೆ ತರಬೇತಿ ನೀಡಿ ನಾಲ್ಕು ವರ್ಷ ಸೇನೆಗೆ ಸೇರಿಸಿಕೊಳ್ಳುವ ಅಗ್ನಿಪಥ್ ಯೋಜನೆ ವಿರೋಧಿಸಿ ನಗರದಲ್ಲಿ ಪ್ರತಿಭಟನೆಗೆ ಮುಂದಾದ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ಸೋಮವಾರ ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು. ನಗರದ ಸರ್ದಾರ್ ವಲ್ಲಭ ಭಾಯ್ ಪಟೇಲ್ (ಎಸ್‌ವಿಪಿ) ವೃತ್ತದಿಂದ ರೈಲು ನಿಲ್ದಾಣದವರೆಗೆ ಮೆರವಣಿಗೆ ನಡೆಸಿ ರೈಲ್ವೆ ನಿಲ್ದಾಣದ ಎದುರು ಪ್ರತಿಭಟಿಸಲು ಕಾರ್ಯಕರ್ತರು ಉದ್ದೇಶಿಸಿದ್ದರು. ಪೊಲೀಸರು ಬಂದೋಬಸ್ತ್ ಕಲ್ಪಿಸಿದ್ದರು. ಕಾರ್ಯಕರ್ತರು ಪ್ರತಿ ಭಟನೆಗೆ ಮುಂದಾದ ಕೂಡಲೇ ಅವರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು.

'ಅಗ್ನಿಪಥ'ಕ್ಕೆ ವಿರೋಧ: ದೆಹಲಿ, ಬಿಹಾರ, ಜಾರ್ಖಂಡ್, ಉತ್ತರ ಪ್ರದೇಶ, ಕೇರಳ, ಅಸ್ಸಾಂ, ರಾಜಸ್ಥಾನದಲ್ಲಿ ಪ್ರತಿಭಟನೆ

'ಬಂದ್': ಕೆಲವೆಡೆ ಸಂಚಾರ ಅಸ್ತವ್ಯಸ್ತ

ನವದೆಹಲಿ/ಪಟ್ನಾ (ಪಿಟಿಐ): ರಕ್ಷಣಾ ಪಡೆಯಲ್ಲಿ ಅಲ್ಪಾವಧಿ ನೇಮಕದ 'ಅಗ್ನಿಪಥ ಯೋಜನೆ' ವಿರುದ್ಧ ನೀಡಲಾಗಿದ್ದ 'ಭಾರತ್ ಬಂದ್' ಕರೆಯಿಂದಾಗಿ ಕೆಲವು ಪ್ರದೇಶಗಳಲ್ಲಿ ರೈಲು ಮತ್ತು ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿದೆ. ಹಲವು ರಾಜ್ಯಗಳಲ್ಲಿ ಪ್ರತಿಭಟನೆಯ ಬಿರುಸು ಸ್ವಲ್ಪ ಕಡಿಮೆಯಾಗಿದೆ. ಭದ್ರತೆ ಮತ್ತು ನಿರ್ಬಂಧಗಳ ಹೇರಿಕೆಯು ಪ್ರತಿಭಟನೆಯ ಬಿರುಸು ಕಡಿಮೆಯಾಗಲು ಕಾರಣ.

ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಯೋಜನೆಯನ್ನು ಬಲವಾಗಿ ವಿರೋಧಿಸಿವೆ. ಹಾಗಿದ್ದರೂ ಯೋಜನೆಯನ್ನು ಜಾರಿಗೊಳಿಸುವ ಪ್ರಕ್ರಿಯೆಯನ್ನು ಸರ್ಕಾರ ಆರಂಭಿಸಿದೆ.

ಬಂದ್‌ಗೆ ಯಾವುದೇ ಸಂಘಟನೆ ಕರೆ ಕೊಟ್ಟಿಲ್ಲ. ಬದಲಿಗೆ, ಸಾಮಾಜಿಕ ಜಾಲತಾಣಗಳಲ್ಲಿ ಕರೆ ಕೊಡಲಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ದೆಹಲಿ, ಬಿಹಾರ, ಜಾರ್ಖಂಡ್, ಉತ್ತರ ಪ್ರದೇಶ, ಕೇರಳ, ಅಸ್ಸಾಂ, ಜಮ್ಮು-ಕಾಶ್ಮೀರ ಮತ್ತು ರಾಜಸ್ಥಾನದಲ್ಲಿ ಭದ್ರತೆ ಹೆಚ್ಚಿಸಲಾಗಿತ್ತು. ಕೆಲವು ಜಿಲ್ಲೆಗಳಲ್ಲಿ ನಿಷೇಧಾಜ್ಞೆ ಹೇರಲಾಗಿತ್ತು. ಹರಿಯಾಣ, ಪಂಜಾಬ್ ಮತ್ತು ಜಮ್ಮುವಿನ ಕೆಲವು ಕಡೆ ಪ್ರತಿಭಟನೆ ನಡೆದಿವೆ.

ಉತ್ತರ ಪ್ರದೇಶದಲ್ಲಿ ರಾಜ್ಯ ಪೊಲೀಸ್ ಮತ್ತು ಕೇಂದ್ರ ಅರೆಸೇನಾ ಪಡೆಯ 151 ತುಕಡಿಗಳನ್ನು ನಿಯೋಜಿಸಲಾಗಿತ್ತು. ರಾಜ್ಯದಲ್ಲಿ ಯಾವುದೇ ಅಹಿತಕರ ಘಟನೆ ವರದಿಯಾಗಿಲ್ಲ.

ತೀವ್ರ ಪ್ರತಿಭಟನೆಗೆ ಸಾಕ್ಷಿಯಾಗಿರುವ ಬಿಹಾರದ 17 ಜಿಲ್ಲೆಗಳಲ್ಲಿ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು. ಹಲವು ಪ್ರದೇಶಗಳಲ್ಲಿ ಪೊಲೀಸ್ ಮತ್ತು ಅರೆ ಸೇನಾ ಪಡೆಗಳನ್ನು ಭಾರಿ ಸಂಖ್ಯೆಯಲ್ಲಿ ನಿಯೋಜಿಸಲಾಗಿತ್ತು.

ಜಾರ್ಖಂಡ್‌ನಲ್ಲಿ ಸೋಮವಾರ 5 ಸಾವಿರಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಶಾಲೆಗಳಿಗೆ ರಜೆ ನೀಡಲಾಗಿತ್ತು. ರಾಜ್ಯದ ವಿವಿಧ ನಗರಗಳಲ್ಲಿ ಅಂಗಡಿ ಮತ್ತು ಇತರ ವಹಿವಾಟುಗಳು ಸುಗಮವಾಗಿ ನಡೆದಿವೆ. ಯಾವುದೇ ಅಹಿತಕರ ಘಟನೆ ವರದಿ ಆಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಜಮ್ಮುವಿನಲ್ಲಿಯೂ ಸೋಮವಾರ ಪ್ರತಿಭಟನೆ ನಡೆದಿದೆ. ಕಾಂಗ್ರೆಸ್, ಎಎಪಿ ಕಾರ್ಯಕರ್ತರು ಮತ್ತು ಕೆಲವು ಸಂಘಟನೆಗಳು ಪ್ರತಿಭಟನೆ ನಡೆಸಿವೆ. ರಸ್ತೆ ತಡೆಯನ್ನೂ ನಡೆಸಲಾಗಿದೆ. ಪ್ರತಿಭಟನೆ ನಡೆಸುತ್ತಿದ್ದ ಕೆಲವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ವಿವಿಧ ರಾಜ್ಯಗಳಲ್ಲಿ ನೂರಾರು ಮಂದಿಯನ್ನು ಬಂಧಿಸಲಾಗಿದೆ. ಪ್ರತಿಭಟನೆಯ ಹಿಂದೆ ಕೋಚಿಂಗ್ ಕೇಂದ್ರಗಳ ಕೈವಾಡ ಇದೆಯೇ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ.

ಕಾಂಗ್ರೆಸ್ ಪ್ರಶ್ನೆ: ಸೇನಾ ಪಡೆಗಳ ಮುಖ್ಯಸ್ಥರಾಗಿದ್ದ ಜ. ಬಿಪಿನ್ ರಾವತ್ ಅವರು ಸೈನಿಕರು ಮತ್ತು ಅಧಿಕಾರಿಗಳ ನಿವೃತ್ತಿ ವಯಸ್ಸನ್ನು 58 ವರ್ಷಕ್ಕೆ ಹೆಚ್ಚಿಸಬೇಕು ಎಂಬ ಪ್ರಸ್ತಾವವನ್ನು ಸರ್ಕಾರಕ್ಕೆ 2020ರಲ್ಲಿ ಸಲ್ಲಿಸಿದ್ದರು. ಹಾಗಾಗಿ, ಈಗಿನ ಅಗ್ನಿಪಥ ಯೋಜನೆಯು ರಾವತ್ ಅವರಿಗೆ ಮಾಡಿದ ಅವಮಾನವಲ್ಲವೇ ಎಂಬ ಪ್ರಶ್ನೆಯನ್ನು ಕಾಂಗ್ರೆಸ್ ಕೇಳಿದೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಜಯ ಮಾಕನ್ ಅವರು ಈ ಪ್ರಶ್ನೆ ಕೇಳಿದ್ದಾರೆ.

'2020ರ ಅಕ್ಟೋಬರ್‌ನಲ್ಲಿನ ಸುತ್ತೋಲೆಯಲ್ಲಿ ರಾವತ್ ಅವರು ಈ ವಿಚಾರ ಪ್ರಸ್ತಾಪಿಸಿದ್ದರು. ಸಂದರ್ಶನವೊಂದರಲ್ಲಿಯೂ ಇದನ್ನು ಅವರು ಪ್ರಸ್ತಾಪಿಸಿದ್ದರು. ಸೈನಿಕರು 17 ವರ್ಷದಲ್ಲಿ ನಿವೃತ್ತರಾಗುತ್ತಾರೆ. ಅವರ ನಿವೃತ್ತಿ ವಯಸ್ಸನ್ನು 58ಕ್ಕೆ ಏರಿಸಬೇಕು' ಎಂದು ಅವರು ಹೇಳಿದ್ದರು ಎಂದು ಮಾಕನ್ ಉಲ್ಲೇಖಿಸಿದ್ದಾರೆ.

ರಾವತ್ ಅವರೇ ಹೀಗೆ ಹೇಳಿದ್ದಾರೆ. ಈ ವಿಚಾರದಲ್ಲಿ ಏನನ್ನಾದರೂ ಹೇಳಲು ಅವರಿಗಿಂತ ಹೆಚ್ಚು ಅರ್ಹತೆ ಇರುವವರು ಯಾರಿದ್ದಾರೆ? ಸೇನೆಯ ಮೂರೂ ವಿಭಾಗಗಳ ಮುಖ್ಯಸ್ಥರು ರಾವತ್ ಅವರ ಚಿಂತನೆಗಳಿಗೆ ವಿರುದ್ಧವಾಗಿದ್ದಾರೆಯೇ ಎಂದು ಮಾಕನ್ ಪ್ರಶ್ನಿಸಿದ್ದಾರೆ.

ಚುನಾಯಿತ ಪ್ರತಿನಿಧಿಗಳ ಜತೆಗೆ ಪ್ರಜಾಸತ್ತಾತ್ಮಕ ಸಮಾಲೋಚನೆಗಳ ಕೊರತೆ ಮತ್ತು ಸಂಸತ್ತಿನಲ್ಲಿ ಚರ್ಚೆಯ ಕೊರತೆಯಿಂದಾಗಿ ಸರ್ಕಾರ ಕೈಗೊಳ್ಳುವ ಮಹತ್ವದ ನಿರ್ಧಾರಗಳಿಗೆ ಸ್ಥಿರತೆಯೇ ಇರುವುದಿಲ್ಲ ಎಂದರು.

'ನೋಟು ರದ್ದತಿಯು 50 ದಿನಗಳಲ್ಲಿ 60, ಜಿಎಸ್‌ಟಿ 10 ತಿಂಗಳಲ್ಲಿ 376 ತಿದ್ದುಪಡಿ ಕಂಡಿವೆ. ಮೂರು ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯಲಾಗಿದೆ. ಎರಡೂವರೆ ವರ್ಷಗಳಾದರೂ ಪೌರತ್ವ ತಿದ್ದುಪಡಿ ಕಾಯ್ದೆಯ ನಿಯಮಗಳನ್ನು ರೂಪಿಸಲು ಸಾಧ್ಯವಾಗಿಲ್ಲ. ಅಗ್ನಿಪಥವು ಐದು ದಿನಗಳಲ್ಲಿ 11 ಬದಲಾವಣೆ ಕಂಡಿದೆ' ಎಂದು ಅವರು ಹೇಳಿದ್ದಾರೆ.


'ಭಾರತ್ ಬಂದ್' ಅಂಗವಾಗಿ ಚೆನ್ನೈನಲ್ಲಿ ಪ್ರತಿಭಟನೆ ನಡೆಸಿದ ಡಿವೈಎಫ್‌ಐ ಕಾರ್ಯಕರ್ತರನ್ನು ಪೊಲೀಸರು ಸೋಮವಾರ ವಶಕ್ಕೆ ಪಡೆದರು –ಪಿಟಿಐ ಚಿತ್ರ

ದಿನದ ಬೆಳವಣಿಗೆ

- ಬಿಹಾರದಲ್ಲಿ ಅಗ್ನಿಪಥ ವಿರೋಧಿ ಪ್ರತಿಭಟನೆಯನ್ನು ನಿಗ್ರಹಿಸಲು ಮುಖ್ಯಮಂತ್ರಿ ನಿತೀಶ್ ಕುಮಾರ್ ವಿಫಲರಾಗಿದ್ದಾರೆ ಎಂದು ಬಿಜೆಪಿ ಸೋಮವಾರ ಆರೋಪಿಸಿದೆ
- ವಕೀಲ ಎಂ.ಎಲ್. ಶರ್ಮಾ ಎಂಬುವರು ಅಗ್ನಿಪಥ ಯೋಜನೆ ಪ್ರಶ್ನಿಸಿ ಸುಪ್ರೀಂ‌ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ
- ಉತ್ತರ ಪ್ರದೇಶದಲ್ಲಿ ಪ್ರವಾದಿ ಕುರಿತ ಹೇಳಿಕೆ ಖಂಡಿಸಿ ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇಲೆ ಆರೋಪಿಗಳ ಮನೆಗಳನ್ನು ಬುಲ್ಡೋಜರ್ ಬಳಸಿ ನೆಲಸಮ ಮಾಡಲಾಗಿತ್ತು. ಗಾಜಿಯಾಬಾದ್‌ನಲ್ಲಿ ಸೋಮವಾರ ಪಥ ಸಂಚಲನ ನಡೆಸಿದ ಪೊಲೀಸರು ತಮ್ಮ ಜೊತೆ ಬುಲ್ಡೋಜರ್‌ಗಳನ್ನೂ ಬಳಸಿಕೊಂಡು, ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ

'ಅಗ್ನಿಪಥ'ಕ್ಕೆ ಉದ್ಯಮ ವಲಯದ ಬೆಂಬಲ

ಅಗ್ನಿಪಥ ಯೋಜನೆಗೆ ಉದ್ಯಮ ವಲಯದಿಂದ ಬೆಂಬಲ ವ್ಯಕ್ತವಾಗಿದೆ. ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್, ಮಹೀಂದ್ರಾ ಸಮೂಹದ ಅಧ್ಯಕ್ಷ ಆನಂದ್ ಮಹೀಂದ್ರಾ, ಆರ್‌ಪಿಜಿ ಎಂಟರ್‌ಪ್ರೈಸಸ್ ಅಧ್ಯಕ್ಷ ಹರ್ಷ ಗೋಯೆಂಕಾ ಮತ್ತು ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ ಅವರು ಯೋಜನೆಗೆ ಬೆಂಬಲ ಸೂಚಿಸಿದ್ದಾರೆ. ನಾಲ್ಕು ವರ್ಷದ ಕರ್ತವ್ಯ ಪೂರೈಸಿ ಬರುವ 'ಅಗ್ನಿವೀರ'ರಿಗೆ ಉದ್ಯಮ ವಲಯದಲ್ಲಿ ಉದ್ಯೋಗದ ಅವಕಾಶ ವ್ಯಾಪಕವಾಗಿದೆ ಎಂದು ಅವರು ಹೇಳಿದ್ದಾರೆ.

ಅಗ್ನಿಪಥ ಯೋಜನೆಯು ಯುವಜನರಿಗೆ ರಕ್ಷಣಾ ಪಡೆಗಳಲ್ಲಿ ಕೆಲಸ ಮಾಡುವ ಅವಕಾಶ ಒದಗಿಸುತ್ತದೆ. ಜತೆಗೆ, ಶಿಸ್ತಿನ ಹಾಗೂ ತರಬೇತಿ ಪಡೆದ ಮಾನವ ಸಂಪನ್ಮೂಲವನ್ನು ಉದ್ಯಮ ವಲಯಕ್ಕೆ ಒದಗಿಸಲಿದೆ ಎಂದು ಚಂದ್ರಶೇಖರನ್ ಹೇಳಿದ್ದಾರೆ.

ಅಗ್ನಿಪಥದ ವಿರುದ್ಧದ ಪ್ರತಿಭಟನೆಯು ಹಿಂಸೆಗೆ ತಿರುಗಿರುವುದರ ಕುರಿತು ಮಹೀಂದ್ರಾ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

'ನಾಯಕತ್ವ ಕೌಶಲ, ತಂಡಸ್ಫೂರ್ತಿ ಮತ್ತು ದೈಹಿಕ ತರಬೇತಿಯೊಂದಿಗೆ ಹಿಂದಿರುಗುವ ಅಗ್ನಿವೀರರು ಉದ್ಯಮಕ್ಕೆ ಸನ್ನದ್ಧ ಕೆಲಸಗಾರರಾಗಿ ದೊರೆಯುತ್ತಾರೆ. ಕಾರ್ಯಾಚರಣೆ, ಆಡಳಿತ, ಪೂರೈಕೆ ಸರಪಣಿ ನಿರ್ವಹಣೆಯಂತಹ ಕೆಲಸಗಳಿಗೆ ಅವರು ಅರ್ಹರಾಗಬಹುದು' ಎಂದು ಮಹೀಂದ್ರಾ ಅವರು ಹೇಳಿದ್ದಾರೆ. ಅಗ್ನಿವೀರರಿಗೆ ಯಾವ ಕೆಲಸ ನೀಡುತ್ತೀರಿ ಎಂದು ಟ್ವಿಟರ್‌ನಲ್ಲಿ ಕೇಳಿದ ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದ್ದಾರೆ.

'ಅಗ್ನಿವೀರರನ್ನು ನೇಮಕ ಮಾಡಿಕೊಳ್ಳುವ ಅವಕಾಶವನ್ನು ಆರ್‌ಪಿಜಿ ಸಮೂಹ ಕೂಡ ಸ್ವಾಗತಿಸುತ್ತದೆ' ಎಂದು ಮಹೀಂದ್ರಾ ಅವರ ಟ್ವೀಟ್‌ಗೆ ಹರ್ಷ ಗೋಯೆಂಕಾ ಪ್ರತಿಕ್ರಿಯೆ ನೀಡಿದ್ದಾರೆ.

'ಉದ್ಯಮ ವಲಯದ ನೇಮಕಾತಿಯಲ್ಲಿ ಅಗ್ನಿವೀರರಿಗೆ ವಿಶಿಷ್ಟವಾದ ಅನುಕೂಲಗಳು ದೊರೆಯಲಿವೆ ಎಂದು ದೃಢವಾಗಿ ನಂಬಿದ್ದೇನೆ' ಎಂದು ಮಜುಂದಾರ್ ಷಾ ಟ್ವೀಟ್ ಮಾಡಿದ್ದಾರೆ.

ಕಾಂಗ್ರೆಸ್ ಧರಣಿ

ಅಗ್ನಿಪಥ ಯೋಜನೆ ವಿರೋಧಿಸಿ ಕಾಂಗ್ರೆಸ್ ಪಕ್ಷ ಜಂತರ್ ಮಂತರ್‌ನಲ್ಲಿ ಸೋಮವಾರವೂ ಪ್ರತಿಭಟನಾ ಸತ್ಯಾಗ್ರಹ ಮುಂದುವರಿಸಿತು. ಮುಖಂಡರಾದ ಅಶೋಕ್ ಗೆಹಲೋತ್, ಅಧೀರ್ ರಂಜನ್ ಚೌಧರಿ, ಸಲ್ಮಾನ್ ಖುರ್ಷಿದ್, ಸಚಿನ್ ಪೈಲಟ್, ಮಲ್ಲಿಕಾರ್ಜುನ ಖರ್ಗೆ, ಕೆ.ಸಿ. ವೇಣುಗೋಪಾಲ್ ಅವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಗಡಿಕಾಯುವ ಸೈನಿಕರನ್ನು ಹೀನಾಯವಾಗಿ ನಡೆಸಿಕೊಳ್ಳಲಾಗುತ್ತಿದೆ ಎಂದು ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಆರೋಪಿಸಿದರು. ಕೇಂದ್ರ ಸರ್ಕಾರವು ಎಲ್ಲರನ್ನೂ ಚೌಕಿದಾರರನ್ನಾಗಿ (ಭದ್ರತಾ ಸಿಬ್ಬಂದಿ) ಮಾಡಲು ಹೊರಟಿದೆ ಎಂದು ದೂರಿದರು.

ಯುವ ಕಾಂಗ್ರೆಸ್ ಕಾರ್ಯಕರ್ತರು ದೆಹಲಿಯ ಶಿವಾಜಿ ಬ್ರಿಡ್ಜ್ ರೈಲು ನಿಲ್ದಾಣದಲ್ಲಿ ರೈಲು ತಡೆ ನಡೆಸಿದರು. ಅಗ್ನಿಪಥ ಪ್ರತಿಭಟನೆಯಲ್ಲಿ ಭಾಗಿಯಾಗಲು ನೋಯ್ಡಾಗೆ ತೆರಳುತ್ತಿದ್ದ 30ಕ್ಕೂ ಹೆಚ್ಚು ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು. ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ಹರಿಯಾಣ, ಪಂಜಾಬ್,ರಾಜಸ್ಥಾನ, ಕೇರಳ ರಾಜ್ಯಗಳ ಅಲ್ಲಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

> ಅಗ್ನಿಪಥವು ಬಿಜೆಪಿಯ ಕೇಡರ್ ಸೃಷ್ಟಿ ಯೋಜನೆಯಾಗಿದೆ. ಬಿಜೆಪಿ ಅವರಿಗೆ ನಾಲ್ಕು ವರ್ಷಗಳವರೆಗೆ ಲಾಲಿಪಾಪ್ ನೀಡಲಿದೆ. ನಂತರ, ಬಿಜೆಪಿಗೆ ಮತಗಳನ್ನು ಬೇಟೆಯಾಡಲು ಇವರು ಬಳಕೆಯಾಗಲಿದ್ದಾರೆ
>
> **ಮಮತಾ ಬ್ಯಾನರ್ಜಿ,** ಟಿಎಂಸಿ ಮುಖ್ಯಸ್ಥೆ

> ಲಾಕ್‌ಡೌನ್ ಹೇರಿಕೆ ಹಾಗೂ ನೋಟು ರದ್ದತಿ ಜಾರಿಗೆ ಕೇಂದ್ರ ಸರ್ಕಾರ ತೋರಿದ ಆತುರವನ್ನೇ ಅಗ್ನಿಪಥ ಯೋಜನೆ ಜಾರಿಯಲ್ಲೂ ತೋರುತ್ತಿದೆ. ಯೋಜನೆ ಕುರಿತು ಬಿಜೆಪಿ ನಾಯಕರ ಅನುಚಿತ ಹೇಳಿಕೆಗಳು ಸರಿಯಲ್ಲ
>
> **ಮಾಯಾವತಿ,** ಬಿಎಸ್‌ಪಿ ಮುಖ್ಯಸ್ಥೆ

> 75 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಕೇಂದ್ರ ಸರ್ಕಾರ ಘೋಷಿಸಿದ ಯೋಜನೆಯನ್ನು ಸೇನೆಯ ಮೂರೂ ವಿಭಾಗಗಳ ಮುಖ್ಯಸ್ಥರು ಸಮರ್ಥಿಸಿಕೊಳ್ಳಲು ಮುಂದೆ ಬಂದಿದ್ದಾರೆ. ಪ್ರಧಾನಿ, ಗೃಹಸಚಿವರು, ರಕ್ಷಣಾ ಸಚಿವರು ಎಲ್ಲಿ ಹೋದರು?
>
> **ಮಲ್ಲಿಕಾರ್ಜುನ ಖರ್ಗೆ,** ಕಾಂಗ್ರೆಸ್ ಮುಖಂಡ

> ಉದ್ಯಮಿಗಳ ಸುರಕ್ಷತೆಗಿಂತ ದೇಶದ ಭದ್ರತೆ ಮುಖ್ಯ. ಹಣದ ಅವಶ್ಯಕತೆಯಿದ್ದರೆ ಕಾರ್ಪೊರೇಟ್ ವಲಯಕ್ಕೆ ಅಧಿಕ ತೆರಿಗೆ ಹಾಕಿ ಸರಿದೂಗಿಸಿಕೊಳ್ಳಬೇಕು. ರಾಷ್ಟ್ರೀಯ ಭದ್ರತೆಯಲ್ಲಿ ರಾಜಿ ಮಾಡಿಕೊಳ್ಳಬಾರದು
>
> **ಅಖಿಲೇಶ್ ಯಾದವ್,** ಎಸ್‌ಪಿ ಮುಖ್ಯಸ್ಥ

ಶ್ರೀಲಂಕಾ: 21ನೇ ತಿದ್ದುಪಡಿಗೆ ಸಂಪುಟ ಅಸ್ತು

ಕೊಲಂಬೊ (ಪಿಟಿಐ): ಶ್ರೀಲಂಕಾದ ಅಧ್ಯಕ್ಷರ ಅಧಿಕಾರ ಮೊಟಕುಗೊಳಿಸುವ ಮತ್ತು ಸಂಸತ್ತಿಗೆ ಹೆಚ್ಚಿನ ಅಧಿಕಾರ ನೀಡುವ ಉದ್ದೇಶದ ಸಂವಿಧಾನದ 21ನೇ ತಿದ್ದುಪಡಿಗೆ ಸಂಪುಟ ಅನುಮೋದನೆ ನೀಡಿದ್ದು, ಇದನ್ನು ಸಂಸತ್ತಿನಲ್ಲಿ ಮಂಡಿಸಲಾಗುತ್ತದೆ ಎಂದು ಪ್ರವಾಸೋದ್ಯಮ ಸಚಿವ ಹರಿನ್ ಫರ್ನಾಂಡೊ ತಿಳಿಸಿದ್ದಾರೆ.

ಬಹುಮತ ಕಳೆದುಕೊಂಡ ಮ್ಯಾಕ್ರಾನ್

ಪ್ಯಾರಿಸ್ (ಎಎಫ್‌ಪಿ): ಫ್ರಾನ್ಸ್‌ನಲ್ಲಿ ನಡೆದ ಅಚ್ಚರಿಯ ರಾಜಕೀಯ ಬೆಳವಣಿಗೆಯಲ್ಲಿ ದೇಶದ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರಾನ್ ಸೋಮವಾರ ಸಂಸತ್‌ನಲ್ಲಿ ಬಹುಮತ ಕಳೆದುಕೊಂಡಿದ್ದಾರೆ.

44ರ ಹರೆಯದ ಮ್ಯಾಕ್ರನ್ ಅವರ 'ಟುಗೆದರ್' ಪಕ್ಷಕ್ಕೆ ಅಧಿಕಾರ ಉಳಿಸಿಕೊಳ್ಳಲು ಅಗತ್ಯವಿದ್ದ ಸ್ಥಾನಗಳು ಲಭಿಸದೇ, ಹಿನ್ನಡೆಯಾಗಿದೆ. 577 ಸದಸ್ಯ ಬಲದ ಸಂಸತ್‌ನಲ್ಲಿ ಅಧಿಕಾರ ಹಿಡಿಯಲು 289 ಸ್ಥಾನಗಳು ಬೇಕಿತ್ತು. ಆದರೆ, ಆಂತರಿಕ ಸಚಿವಾಲಯದ ಪ್ರಕಾರ ಮ್ಯಾಕ್ರನ್ ನೇತೃತ್ವದ ಎಡಪಂಥದ ಒಕ್ಕೂಟ 245 ಸ್ಥಾನಗಳನ್ನು ಪಡೆದು, ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಅಧಿಕಾರ ಉಳಿಸಿಕೊಳ್ಳಬೇಕೆಂದರೆ ಮ್ಯಾಕ್ರನ್ ಅವರು ಈಗ ಮತ್ತೊಂದು ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳಬೇಕಾಗಿದೆ.

ಏಪ್ರಿಲ್‌ನಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಮ್ಯಾಕ್ರಾನ್ 2 ದಶಕಗಳಲ್ಲಿ 2ನೇ ಅವಧಿಗೆ ಗೆದ್ದಿದ್ದರು.

ಅವಿಶ್ವಾಸ ನಿರ್ಣಯ: ಮ್ಯಾಕ್ರನ್ ಅವರ ಸರ್ಕಾರದ ವಿರುದ್ಧ ಜುಲೈ 5ರಂದು ಅವಿಶ್ವಾಸ ನಿರ್ಣಯ ಮಂಡಿಸುವುದಾಗಿ ಫ್ರಾನ್ಸ್‌ನ ಎಡಪಂಥೀಯ ನ್ಯೂಪ್ಸ್ ಮೈತ್ರಿಕೂಟವು ಸೋಮವಾರ ಹೇಳಿದೆ.

ಕಾರ್ತಿಕ್ ನಮಗೆ ಹೆಚ್ಚಿನ ಆಯ್ಕೆಗಳನ್ನು ನೀಡಿದ್ದಾರೆ: ರಾಹುಲ್ ದ್ರಾವಿಡ್ ಅಭಿಮತ

ಟಿ20 ವಿಶ್ವಕಪ್: ಸಮರ್ಥರ ಆಯ್ಕೆ ಮುಖ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟಿ20 ವಿಶ್ವಕಪ್ ಟೂರ್ನಿಗೆ ಸಮರ್ಥ ಆಟಗಾರರನ್ನು ಕಂಡುಕೊಳ್ಳುವ ಪ್ರಕ್ರಿಯೆ ಆರಂಭವಾಗಿದ್ದು, ಇಂಗ್ಲೆಂಡ್ ಪ್ರವಾಸದ ಕೊನೆಯ ವೇಳೆಗೆ 18ರಿಂದ 20 ಆಟಗಾರರನ್ನು ಗುರುತಿಸುವುದು ನಮ್ಮ ಉದ್ದೇಶ' ಎಂದು ಭಾರತ ಕ್ರಿಕೆಟ್ ತಂಡದ ಕೋಚ್ ರಾಹುಲ್ ದ್ರಾವಿಡ್ ಹೇಳಿದರು.

ದಕ್ಷಿಣ ಆಫ್ರಿಕಾ ವಿರುದ್ಧದ ಐದನೇ ಟಿ20 ಪಂದ್ಯದ ಬಳಿಕ ಮಾಧ್ಯಮದವರ ಜತೆ ಮಾತನಾಡಿ, 'ವಿಶ್ವಕಪ್ ಟೂರ್ನಿ ಸಮೀಪಿಸುತ್ತಿರುವುದರಿಂದ ತಂಡವನ್ನು ಸಿದ್ಧಗೊಳಿಸಲು ಈಗಿನಿಂದಲೇ ತಯಾರಿ ಆಗಬೇಕು. ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಯ ಬಳಿಕ ಸ್ಪಷ್ಟ ಚಿತ್ರಣ ಲಭಿಸುವ ವಿಶ್ವಾಸ ನನ್ನದು. ವಿಶ್ವಕಪ್ ಟೂರ್ನಿಗೆ 15 ಮಂದಿಯ ತಂಡವನ್ನು ಮಾತ್ರ ಕರೆದೊಯ್ಯಲು ಸಾಧ್ಯ. ಆದರೂ 18 ರಿಂದ 20 ಆಟಗಾರರನ್ನು ಗುರುತಿಸುವುದು ಅಗತ್ಯ' ಎಂದರು.



ರಾಹುಲ್ ದ್ರಾವಿಡ್ ಹಾಗೂ ರಿಷಭ್ ಪಂತ್

ಹೆಚ್ಚಿನ ಆಯ್ಕೆಗಳು ಲಭಿಸಿವೆ: ದಿನೇಶ್ ಕಾರ್ತಿಕ್ ಅವರ ಪ್ರದರ್ಶನವನ್ನು ಶ್ಲಾಘಿಸಿರುವ ದ್ರಾವಿಡ್, 'ಯಾವ ಉದ್ದೇಶ ಇಟ್ಟುಕೊಂಡು ಅವರನ್ನು ತಂಡಕ್ಕೆ ಆಯ್ಕೆ ಮಾಡಲಾಗಿತ್ತೋ, ಆ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಅವರಿಂದಾಗಿ ನಮಗೆ ಹೆಚ್ಚಿನ ಆಯ್ಕೆಗಳು ಲಭಿಸಿದೆ' ಎಂದು ತಿಳಿಸಿದರು. ರಾಜ್‌ಕೋಟ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ಕಾರ್ತಿಕ್ 27 ಎಸೆತಗಳಲ್ಲಿ 55 ರನ್ ಗಳಿಸಿದ್ದರು. ಆ ಪಂದ್ಯದ ಬಗ್ಗೆ ಮಾತನಾಡಿದ ದ್ರಾವಿಡ್, 'ಕೊನೆಯ ಐದು ಓವರ್‌ಗಳಲ್ಲಿ ಹೆಚ್ಚಿನ ರನ್‌ಗಳು ಬೇಕಿದ್ದವು. ಕಾರ್ತಿಕ್ ಮತ್ತು ಹಾರ್ದಿಕ್ ಪಾಂಡ್ಯ ಬಿರುಸಿನ ಆಟವಾಡಿದರು. ನಮ್ಮ ಯೋಜನೆಗಳನ್ನು ಇವರಿಬ್ಬರು ಚೆನ್ನಾಗಿ ಕಾರ್ಯರೂಪಕ್ಕಿಳಿಸುತ್ತಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಿಷಭ್‌ಗೆ ಬೆಂಬಲ: ಟಿ20 ಸರಣಿಯಲ್ಲಿ ತಂಡವನ್ನು ಮುನ್ನಡೆಸಿದ ವಿಕೆಟ್‌ಕೀಪರ್ ಬ್ಯಾಟರ್ ರಿಷಭ್ ಪಂತ್ ಅವರಿಗೆ ದ್ರಾವಿಡ್ ಬೆಂಬಲ ಸೂಚಿಸಿದ್ದು, ಮುಂಬರುವ ವಿಶ್ವಕಪ್ ಟೂರ್ನಿಯಲ್ಲಿ ಅವರು ಪ್ರಮುಖ ಪಾತ್ರ ನಿಭಾಯಿಸುವರು ಎಂದಿದ್ದಾರೆ. ರಿಷಭ್ ಈ ಸರಣಿಯಲ್ಲಿ ಬ್ಯಾಟಿಂಗ್‌ನಲ್ಲಿ ವೈಫಲ್ಯ ಅನುಭವಿಸಿದ್ದು ಕೇವಲ 58 ರನ್ ಮಾತ್ರ ಕಲೆಹಾಕಿದ್ದಾರೆ.

'ಇನ್ನೂ ಹೆಚ್ಚಿನ ರನ್ ಗಳಿಸಬೇಕೆಂದು ಅವರು ಬಯಸಿದ್ದರು. ದೊಡ್ಡ ಮೊತ್ತ ಪೇರಿಸಲು ಆಗದ್ದು ಅವರಿಗೆ ಚಿಂತೆ ಉಂಟುಮಾಡಿಲ್ಲ. ಮುಂದಿನ ಕೆಲವು ತಿಂಗಳುಗಳಿಗೆ ನಾವು ಸಿದ್ಧಪಡಿಸಿರುವ ಯೋಜನೆಯಲ್ಲಿ ಅವರು ಪ್ರಮುಖ ಪಾತ್ರ ನಿಭಾಯಿಸಲಿದ್ದಾರೆ' ಎಂದರು.

ಭುವನೇಶ್ವರ್ ಆಟ: ಬೌಷರ್ ಮೆಚ್ಚುಗೆ

ಟಿ20 ಸರಣಿಯಲ್ಲಿ ಭಾರತದ ವೇಗದ ಬೌಲರ್ ಭುವನೇಶ್ವರ್ ಕುಮಾರ್ ಅವರ ಪ್ರದರ್ಶನ 'ವಿಶೇಷ'ವಾಗಿತ್ತು ಎಂದು ದಕ್ಷಿಣ ಆಫ್ರಿಕಾ ತಂಡದ ಮುಖ್ಯ ಕೋಚ್ ಮಾರ್ಕ್ ಬೌಷರ್ ಬಣ್ಣಿಸಿದ್ದಾರೆ.

ಭುನವೇಶ್ವರ್ ಈ ಸರಣಿಯಲ್ಲಿ 14 ಓವರ್ ಬೌಲ್ ಮಾಡಿದ್ದು, 85 ರನ್ ಬಿಟ್ಟುಕೊಟ್ಟು ಆರು ವಿಕೆಟ್‌ಗಳನ್ನು ಪಡೆದಿದ್ದಾರೆ.

'ಭುವನೇಶ್ವರ್ ಸರಣಿಯುದ್ದಕ್ಕೂ ಉತ್ತಮವಾಗಿ ಬೌಲ್ ಮಾಡಿದ್ದಾರೆ. ಪವರ್ ಪ್ಲೇ ಓವರ್‌ಗಳಲ್ಲಿ ಅವರು ನಮ್ಮ ಬ್ಯಾಟ್ಸ್‌ಮನ್‌ಗಳ ಮೇಲೆ ಒತ್ತಡ ಹೇರಲು ಯಶಸ್ವಿಯಾದರು' ಎಂದರು.

ಟೆಸ್ಟ್: ಭಾರತ ತಂಡದ ಅಭ್ಯಾಸ

ಲೆಸ್ಟರ್ (ಪಿಟಿಐ): ಇಂಗ್ಲೆಂಡ್ ವಿರುದ್ಧದ ಐದನೇ ಹಾಗೂ ಕೊನೆಯ ಕ್ರಿಕೆಟ್ ಟೆಸ್ಟ್ ಪಂದ್ಯಕ್ಕೆ ಸಜ್ಜಾಗುತ್ತಿರುವ ಭಾರತ ತಂಡದ ಆಟಗಾರರು ಲೆಸ್ಟರ್‌ಷೈರ್ ಕೌಂಟಿ ಮೈದಾನದಲ್ಲಿ ಸೋಮವಾರ ತಾಲೀಮು ಕೈಗೊಂಡರು.

ಇಂಗ್ಲೆಂಡ್ ಎದುರಿನ ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಭಾರತ 2–1 ರಲ್ಲಿ ಮುನ್ನಡೆಯಲ್ಲಿದೆ. ಈ ಸರಣಿಯ ನಾಲ್ಕು ಪಂದ್ಯಗಳು ಕಳೆದ ವರ್ಷ ನಡೆದಿತ್ತು. ಕೋವಿಡ್ ಕಾರಣ ಮುಂದೂಡಲಾಗಿದ್ದ ಕೊನೆಯ ಟೆಸ್ಟ್ ಜುಲೈ 1 ರಂದು ಬರ್ಮಿಂಗ್‌ಹ್ಯಾಂನಲ್ಲಿ ಆರಂಭವಾಗಲಿದೆ. ಆರಂಭಿಕ ಬ್ಯಾಟರ್‌ಗಳಾದ ರೋಹಿತ್ ಶರ್ಮ ಮತ್ತು ಶುಭಮನ್ ಗಿಲ್ ಅವರು ತುಂಬಾ ಹೊತ್ತು ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿದರು. ಕೆ.ಎಲ್.ರಾಹುಲ್ ಅನುಪಸ್ಥಿತಿಯಲ್ಲಿ ಗಿಲ್ ಅವರು ರೋಹಿತ್ ಜತೆ ಭಾರತದ ಇನಿಂಗ್ಸ್ ಆರಂಭಿಸುವ ಸಾಧ್ಯತೆಯಿದೆ.

ತಂಡದ ಇತರ ಸದಸ್ಯರಾದ ವಿರಾಟ್ ಕೊಹ್ಲಿ, ಚೇತೇಶ್ವರ ಪೂಜಾರ, ರವೀಂದ್ರ ಜಡೇಜ, ಜಸ್‌ಪ್ರೀತ್ ಬೂಮ್ರಾ ಅವರೂ ದೈಹಿಕ ಕಸರತ್ತು ನಡೆಸಿದರು.

ಭಾರತ ತಂಡ ಒಂದು ವಾರ ಲೆಸ್ಟರ್‌ನಲ್ಲೇ ತಂಗಲಿದ್ದು, ಜೂನ್ 24 ರಿಂದ ನಾಲ್ಕು ದಿನಗಳ ಅಭ್ಯಾಸ ಪಂದ್ಯವನ್ನಾಡಲಿದೆ. ಟೆಸ್ಟ್ ಪಂದ್ಯದ ಬಳಿಕ ತಲಾ ಮೂರು ಏಕದಿನ ಮತ್ತು ಟಿ20 ಪಂದ್ಯಗಳನ್ನೂ ಆಡಲಿದೆ.

ಅಶ್ವಿನ್‌ಗೆ ಕೋವಿಡ್: ಅನುಭವಿ ಸ್ಪಿನ್ನರ್ ಆರ್. ಅಶ್ವಿನ್ ಅವರಿಗೆ ಕೋವಿಡ್ ಖಚಿತಪಟ್ಟಿದ್ದು ಅವರು ತಂಡದೊಂದಿಗೆ ಇಂಗ್ಲೆಂಡ್‌ಗೆ ತೆರಳಿಲ್ಲ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಅಶ್ವಿನ್ ಅವರು ಸದ್ಯಕ್ಕೆ ಕ್ವಾರಂಟೈನ್‌ನಲ್ಲಿದ್ದಾರೆ. ಎಲ್ಲ ನಿಯಮಗಳನ್ನು ಪೂರ್ಣಗೊಳಿಸಿದ ಬಳಿಕ ತಂಡವನ್ನು ಸೇರಿಕೊಳ್ಳಲಿದ್ದಾರೆ.



ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಕ್ರಿಕೆಟ್ ಪಂದ್ಯಕ್ಕೆ ಸಜ್ಜಾಗುತ್ತಿರುವ ಭಾರತ ತಂಡದ ಆಟಗಾರರು ಸೋಮವಾರ ಲೆಸ್ಟರ್‌ನಲ್ಲಿ ತಾಲೀಮು ನಡೆಸಿದರು —ಬಿಸಿಸಿಐ ಟ್ವಿಟರ್ ಚಿತ್ರ

ಬಿಎಫ್‌ಸಿಗೆ ಪ್ರಬೀರ್ ದಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ (ಐಎಸ್ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಆಡುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಪ್ರಬೀರ್ ದಾಸ್ ಅವರನ್ನು ಮೂರು ವರ್ಷಗಳ ಅವಧಿಗೆ ತಂಡಕ್ಕೆ ಸೇರಿಸಿಕೊಂಡಿದೆ.

ಬೆಂಗಳೂರು ಎಫ್‌ಸಿ ಸೋಮವಾರ ಈ ವಿಷಯ ತಿಳಿಸಿದೆ. ಪ್ರಬೀರ್ ದಾಸ್ ಅವರು 2015ರಿಂದ ಏಳು ವರ್ಷಗಳ ಕಾಲ ಎಟಿಕೆ ಮೋಹನ್ ಬಾಗನ್ ತಂಡದಲ್ಲಿದ್ದರು. ಪೈಲಾನ್ ಏರೋಸ್ ಯೂತ್ ಅಕಾಡೆಮಿಯಲ್ಲಿ ತರಬೇತಿ ಪಡೆದಿರುವ ಅವರು ಹಲವು ಕ್ಲಬ್‌ಗಳ ಪರ ಆಡಿದ ಅನುಭವ ಹೊಂದಿದ್ದಾರೆ.



ಪ್ರಬೀರ್ ದಾಸ್



ಆಶಿಕ್

ಎಫ್‌ಸಿ ಗೋವಾ ಮತ್ತು ಡೆಲ್ಲಿ ಡೈನಮೋಸ್ ತಂಡಗಳನ್ನೂ ಪ್ರತಿನಿಧಿಸಿದ್ದಾರೆ.

ಎಟಿಕೆಎಂಬಿಗೆ ಆಶಿಕ್ ಕುರುಣಿಯನ್: ಭಾರತ ತಂಡದ ಮಿಡ್‌ಫೀಲ್ಡರ್ ಆಶಿಕ್ ಕುರುಣಿಯನ್ ಅವರನ್ನು ಎಟಿಕೆ ಮೋಹನ್ ಬಾಗನ್ ಐದು ವರ್ಷಗಳ ಅವಧಿಗೆ ತಂಡಕ್ಕೆ ಸೇರಿಸಿಕೊಂಡಿದೆ. ಆಶಿಕ್ ಈ ಹಿಂದೆ ಬೆಂಗಳೂರು ಎಫ್‌ಸಿಯಲ್ಲಿದ್ದರು.

25 ವರ್ಷದ ಆಶಿಕ್ ಇತ್ತೀಚೆಗೆ ಏಷ್ಯಾಕಪ್ ಅರ್ಹತಾ ಟೂರ್ನಿಯಲ್ಲಿ ಉತ್ತಮ ಸಾಮರ್ಥ್ಯ ತೋರಿದ್ದರು. ಅವರ ನೆರವಿನಿಂದ ತಂಡವು ಡಿ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿ ಸತತ ಎರಡನೇ ಬಾರಿ ಏಷ್ಯಾಕಪ್ ಟಿಕೆಟ್ ಗಳಿಸಿತ್ತು.

ಹೈದರಾಬಾದ್ ಎಫ್‌ಸಿಯಲ್ಲಿದ್ದ ಆಶಿಶ್ ರಾಯ್ ಅವರೂ ಎಟಿಕೆಎಂಬಿ ಸೇರಿಕೊಂಡಿದ್ದಾರೆ.

ಸೈಕ್ಲಿಂಗ್: ಭಾರತಕ್ಕೆ ಎರಡು ಕಂಚು

ನವದೆಹಲಿ (ಪಿಟಿಐ): ಏಷ್ಯನ್ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಬೇಟೆ ಮುಂದುವರಿಸಿರುವ ಭಾರತ, ಸೋಮವಾರ ಮತ್ತೆ ಎರಡು ಕಂಚು ಗೆದ್ದಿತು. ಮೂರು ದಿನಗಳಲ್ಲಿ ಗೆದ್ದ ಒಟ್ಟು ಪದಕಗಳ ಸಂಖ್ಯೆ 20ಕ್ಕೆ ಹೆಚ್ಚಿದೆ.

ರೊನಾಲ್ಡೊ ಸಿಂಗ್ ಸೀನಿಯರ್ ಪುರುಷರ ವಿಭಾಗದ 1 ಕಿ.ಮೀ ಟೈಮ್ ಟ್ರಯಲ್‌ನಲ್ಲಿ ಮೂರನೇ ಸ್ಥಾನ ಗಳಿಸಿದರು. ಅವರು 1 ನಿ. 01.798 ಸೆ.ಗಳಲ್ಲಿ ಗುರಿ ತಲುಪಿದರು. ಈ ವಿಭಾಗದಲ್ಲಿ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾರತಕ್ಕೆ ದೊರೆತ ಮೊದಲ ಪದಕ ಇದು.

ಜಪಾನ್‌ನ ಯುತಾ ಒಬಾರ (1:01.118 ಸೆ.) ಚಿನ್ನ ಗೆದ್ದುಕೊಂಡರೆ, ಮಲೇಷ್ಯದ ಮೊಹಮ್ಮದ್ ಫಾದಿಲ್ (1:01.639 ಸೆ.) ಬೆಳ್ಳಿ ಪಡೆದುಕೊಂಡರು.

'ಚಿನ್ನ ಗೆಲ್ಲುವ ಗುರಿಯೊಂದಿಗೆ ನಾನು ಇಲ್ಲಿಗೆ ಬಂದಿದ್ದೆ. ಆದರೆ ಕಂಚಿನ ಪದಕಕ್ಕೆ ತೃಪ್ತಿಪಡಬೇಕಾಯಿತು. ಕಳೆದ ವರ್ಷ ನೀಡಿದ್ದ ಪ್ರದರ್ಶನವನ್ನು ಪುನರಾವರ್ತಿಸಲು ಯಶಸ್ವಿಯಾದರೂ ಚಿನ್ನ ದಕ್ಕಲಿಲ್ಲ' ಎಂದು ರೊನಾಲ್ಡೊ ಪ್ರತಿಕ್ರಿಯಿಸಿದರು.

ಇನ್ನೊಂದು ಪದಕ ಜೂನಿಯರ್ 10 ಕಿ.ಮೀ ರೇಸ್‌ನಲ್ಲಿ ಲಭಿಸಿತು. ಬಿರ್ಜಿತ್ ಯುಮ್ನಮ್ ಮೂರನೇ ಸ್ಥಾನ ಗಳಿಸಿದರು. ಕೊರಿಯಾದ ಹ್ವಾಂಗ್ ಕಿಮ್ ಚಿನ್ನ ಹಾಗೂ ಮಲೇಷ್ಯಾದ ಜುಲ್‌ಫಹ್ಮಿ ಐಮನ್ ಬೆಳ್ಳಿ ಗೆದ್ದರು.

ಫುಟ್‌ಬಾಲ್: ಸುಬ್ರತೊ ಕಪ್ ಅರ್ಹತಾ ಟೂರ್ನಿ ಇಂದಿನಿಂದ

ಬೆಂಗಳೂರು: ಸುಬ್ರತೊ ಕಪ್ 17 ವರ್ಷದೊಳಗಿನವರ ರಾಷ್ಟ್ರೀಯ ಅಂತರ ಶಾಲಾ ಫುಟ್‌ಬಾಲ್ ಟೂರ್ನಿಗೆ ವಲಯಮಟ್ಟದ ಅರ್ಹತಾ ಪಂದ್ಯಗಳು ಮಂಗಳವಾರದಿಂದ ಇಲ್ಲಿ ನಡೆಯಲಿವೆ.

ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ ಸಹಯೋಗದಲ್ಲಿ ಸೇಂಟ್ ಜೋಸೆಫ್ ಪ್ರೌಢ ಶಾಲೆಯು ಪಂದ್ಯಗಳನ್ನು ಆಯೋಜಿಸಲಿದೆ. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಇದೇ 28ರವರೆಗೆ ಪಂದ್ಯಗಳು ನಡೆಯಲಿವೆ.

ಭಾಗವಹಿಸುವ ತಂಡಗಳು: ಸೇಂಟ್ ಡೊಮಿನಿಕ್, ಅಂಬರ್ ವ್ಯಾಲಿ (ಚಿಕ್ಕಮಗಳೂರು), ಬಾಲ್ಡ್‌ವಿನ್ ಬಾಯ್ಸ್, ಬಿಷಪ್ ಕಾಟನ್ಸ್, ರ‍್ಯಾನ್ ಇಂಟರ್‌ನ್ಯಾಷನಲ್, ಗ್ರೀನ್‌ವುಡ್ ಇಂಟರ್‌ನ್ಯಾಷನಲ್, ಗ್ರೀನ್‌ವುಡ್ ಹೈಸ್ಕೂಲ್, ಎನ್‌ಎಫ್‌ಎಲ್, ಸೇಂಟ್ ಜೋಸೆಫ್, ಶಿಶು ಗೃಹ, ನ್ಯೂ ಶಮ್ಸ್ (ಭಟ್ಕಳ), ವಿಬ್‌ಗಯಾರ್, ಅಪೋಲೊ ನ್ಯಾಷನಲ್ ಪಬ್ಲಿಕ್ ಸ್ಕೂಲ್, ಕ್ರೈಸ್ಟ್ ಅಕಾಡೆಮಿ.

ಈಜು: ಸೆಮಿ ತಲುಪಲು ಸಜನ್ ವಿಫಲ

ನವದೆಹಲಿ (ಪಿಟಿಐ): ಭಾರತದ ಸಜನ್ ಪ್ರಕಾಶ್ ಅವರು ಫಿನಾ ವಿಶ್ವ ಈಜು ಚಾಂಪಿಯನ್‌ಷಿಪ್‌ನ 200 ಮೀಟರ್ ಬಟರ್‌ಫ್ಲೈ ವಿಭಾಗದಲ್ಲಿ ಸೆಮಿಫೈನಲ್ ತಲುಪಲು ವಿಫಲರಾದರು.

ಹಂಗರಿಯ ಬುಡಾಪೆಸ್ಟ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಹೀಟ್‌ನಲ್ಲಿ ಅವರು 1 ನಿಮಿಷ 58.67 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇಲ್ಲಿ ಅವರು ಎಂಟನೆ ಸ್ಥಾನ ಗಳಿಸಿದರು. ಅಗ್ರ ಐದು ಸ್ಥಾನ ಗಳಿಸಿದವರು ಸೆಮಿಫೈನಲ್ಸ್‌ಗೆ ಮುಂದುವರಿದರು.

ಎರಡು ಬಾರಿಯ ಒಲಿಂಪಿಯನ್, 28 ವರ್ಷದ ಸಜನ್, 200 ಮೀ. ಬಟರ್‌ಫ್ಲೈ ವಿಭಾಗದಲ್ಲಿ ಒಟ್ಟಾರೆ 25ನೇ ಸ್ಥಾನ ಗಳಿಸಿದರು. ಈ ವಿಭಾಗದಲ್ಲಿ ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 1 ನಿ. 56.48 ಸೆಕೆಂಡು ಆಗಿದೆ.

ಪುರುಷರ 800 ಮೀ. ಫ್ರೀಸ್ಟೈಲ್‌ನಲ್ಲಿ ಕುಶಾಗ್ರ ರಾವತ್ 23ನೇ ಸ್ಥಾನ ಗಳಿಸಿದರು. ಈ ವಿಭಾಗದ ಹೀಟ್‌ನಲ್ಲಿ 8 ನಿ. 15.96 ಸೆಕೆಂಡಿನಲ್ಲಿ ಗುರಿ ಮುಟ್ಟಿದ ಅವರು ಫೈನಲ್‌ಗೇರಲು ವಿಫಲರಾದರು. ಕಳೆದ ವರ್ಷ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ 8 ನಿ. 8.32 ಸೆಕೆಂಡುಗಳಲ್ಲಿ ಗುರಿ ತಲುಪಿದ್ದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿದೆ.



ಸಜನ್ ಪ್ರಕಾಶ್– ಪ್ರಜಾವಾಣಿ ಚಿತ್ರ

ಟಿಟಿ: ಅರ್ಜಿ ವಜಾ

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್‌ಗಾಗಿ ಆಯ್ಕೆ ಮಾಡಿರುವ ಭಾರತ ಟೇಬಲ್ ಟೆನಿಸ್ ತಂಡದಲ್ಲಿ ತಮಗೆ ಅವಕಾಶ ನೀಡದಿರುವುದನ್ನು ಪ್ರಶ್ನಿಸಿ ಸ್ಪರ್ಧಿಗಳಾದ ಸ್ವಸ್ತಿಕಾ ಘೋಷ್ ಮತ್ತು ಮನುಷ್ ಶಾ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ತಳ್ಳಿಹಾಕಿದೆ.

'ಅರ್ಜಿಯನ್ನು ಹೈಕೋರ್ಟ್ ತಳ್ಳಿಹಾಕಿದೆ ಎಂದು ನಮ್ಮ ವಕೀಲರು ತಿಳಿಸಿದ್ದಾರೆ' ಎಂದು ಮನುಷ್ ಅವರ ತಂದೆ ಉತ್ಪಲ್ ತಿಳಿಸಿದರು.

ಮನುಷ್ ಮತ್ತು ಸ್ವಸ್ತಿಕಾ ಅವರಿಗೆ ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ ತಂಡದಲ್ಲಿ ಮೀಸಲು ಆಟಗಾರರ ಸ್ಥಾನ ನೀಡಲಾಗಿತ್ತು. ಟಿಟಿ ತಂಡದ ಆಯ್ಕೆ ಪ್ರಶ್ನಿಸಿ ಅರ್ಚನಾ ಕಾಮತ್ ಅವರೂ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಅರ್ಜಿಯ ವಿಚಾರಣೆಯನ್ನು ಕರ್ನಾಟಕ ಹೈಕೋರ್ಟ್ ಜೂನ್ 22 ರಂದು ನಡೆಸಲಿದೆ.

ಜೆಹಾನ್‌ಗೆ ಎಫ್‌1 ಕಾರು ಚಲಾಯಿಸುವ ಅವಕಾಶ

ನವದೆಹಲಿ (ಪಿಟಿಐ): ಭಾರತದ ಯುವ ರೇಸಿಂಗ್ ಸ್ಪರ್ಧಿ ಜೆಹಾನ್ ದಾರುವಾಲಾ ಅವರು ಫಾರ್ಮುಲಾ ಒನ್ ರೇಸ್‌ನಲ್ಲಿ ಪಾಲ್ಗೊಳ್ಳಬೇಕೆಂಬ ಕನಸು ಈಡೇರಿಸುವ ನಿಟ್ಟಿನಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟಿದ್ದಾರೆ.

ಫಾರ್ಮುಲಾ ಒನ್ ರೇಸ್‌ನಲ್ಲಿ ಎಂಟು ಬಾರಿ ಚಾಂಪಿಯನ್ ಆಗಿರುವ ಮೆಕ್‌ಲಾರೆನ್ ತಂಡದಲ್ಲಿ ಎರಡು ದಿನ ಟೆಸ್ಟ್ ಡ್ರೈವ್ ಮಾಡುವ ಅವಕಾಶ ಅವರಿಗೆ ಒಲಿದಿದೆ. ಜೂನ್ 21 ಮತ್ತು 22 ರಂದು ಅವರು ಇಂಗ್ಲೆಂಡ್‌ನ ಸಿಲ್ವರ್‌ಸ್ಟೋನ್‌ನಲ್ಲಿರುವ ಟ್ರ್ಯಾಕ್‌ನಲ್ಲಿ ಮೆಕ್‌ಲಾರೆನ್ ತಂಡದ ಎಫ್‌1 ಕಾರು (ಎಂಸಿಎಲ್ 35) ಚಲಾಯಿಸಲಿದ್ದಾರೆ.

ಫಾರ್ಮುಲಾ 2 ಸ್ಪರ್ಧೆಗಳಲ್ಲಿ ಮೂರು ವರ್ಷಗಳಿಂದ ಪಾಲ್ಗೊಳ್ಳುತ್ತಿರುವ ಜೆಹಾನ್ ಅವರಿಗೆ ವೃತ್ತಿಜೀವನದಲ್ಲಿ ಇದೇ ಮೊದಲ ಬಾರಿಗೆ ಎಫ್‌1 ಕಾರು ಚಲಾಯಿಸುವ ಅವಕಾಶ ದೊರೆತಿದೆ.




ಜೆಹಾನ್

ಪರೀಕ್ಷಾರ್ಥ ಚಾಲನೆಯಲ್ಲಿ ಉತ್ತಮ ಸಮಯ ಕಂಡು ಕೊಂಡರೆ, 'ಸೂಪರ್ ಲೈಸೆನ್ಸ್'ಗೆ ಅರ್ಜಿ ಸಲ್ಲಿಸುವ ಅವಕಾಶ ಅವರಿಗೆ ದೊರೆಯಲಿದೆ.

'ಮೆಕ್‌ಲಾರೆನ್ ತಂಡದ ಪರೀಕ್ಷಾರ್ಥ ಚಾಲನೆಯ ಅವಕಾಶ ಲಭಿಸಿರುವುದು ಸಂತಸದ ಸಂಗತಿ. ನಾನು ಒಮ್ಮೆಯೂ ಎಫ್‌1 ಕಾರು ಚಲಾಯಿಸಿಲ್ಲ. ಕಾರಿನ ಬಗ್ಗೆ ತಿಳಿದುಕೊಳ್ಳುವ ಅವಕಾಶ ಲಭಿಸಿದೆ' ಎಂದು ಜೆಹಾನ್ ಹೇಳಿದರು.

ಷೇರುಪೇಟೆ ವಹಿವಾಟು

237



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,293
ಇಂದಿನ ಅಂತ್ಯ	15,350
▲	57
ದಿನದ ಗರಿಷ್ಠ	15,382

ವಿನಿಮಯ ದರ

$ ಡಾಲರ್	77.98
£ ಪೌಂಡ್	95.48
€ ಯುರೊ	82.14
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹525

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1575 (1580)
ಸೋಯಾ (ರಿಫೈನ್ಡ್)	₹1380 (1425)
ಸೂರ್ಯಕಾಂತಿ (ರಿಫೈನ್ಡ್)	₹1720 (1735)
ಪಾಮೋಲಿನ್	₹1335(1375)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹400-623
ದ್ವಿತಳಿ (ಬಿ.ವಿ)	₹325-826

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹173
ಆರ್‌ಎಸ್‌ಎಸ್-5	₹165
ಗುಡ್ ಲಾಟ್	₹157

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಹೊಸ ಬ್ರೆಜಾ ಬುಕಿಂಗ್ ಆರಂಭ: ತಿಂಗಳಾಂತ್ಯಕ್ಕೆ ಬಿಡುಗಡೆ

ನವದೆಹಲಿ (ಪಿಟಿಐ): ಹೊಸ ಬ್ರೆಜಾ ಮಾದರಿಯ ಮುಂಗಡ ಬುಕಿಂಗ್ ಆರಂಭ ಆಗಿದ್ದು, ತಿಂಗಳಾಂತ್ಯಕ್ಕೆ ಬಿಡುಗಡೆ ಮಾಡಲಾಗುವುದು ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿ ಸೋಮವಾರ ತಿಳಿಸಿದೆ.

ಆರಂಭಿಕ ಮೊತ್ತ ₹ 11 ಸಾವಿರ ಪಾವತಿಸಿ ಕಂಪನಿಯ ಷೋರೂಂಗಳಲ್ಲಿ ಅಥವಾ ಜಾಲತಾಣದಲ್ಲಿ ಮುಂಗಡ ಬುಕಿಂಗ್ ಮಾಡಬಹುದು ಎಂದು ಹೇಳಿದೆ.

ಹೊಸ ಕಾಂಪ್ಯಾಕ್ಟ್ ಎಸ್‌ಯುವಿನಲ್ಲಿ ಎಲೆಕ್ಟ್ರಿಕ್ ಸನ್‌ರೂಫ್, ಆರಾಮದಾಯಕ, ಅನುಕೂಲಕರ ವೈಶಿಷ್ಟ್ಯಗಳು ಇರಲಿವೆ. ಮುಂದಿನ ಪೀಳಿಗೆಯ 6-ಸ್ಪೀಡ್ ಆಟೊಮೆಟಿಕ್ ಟ್ರಾನ್ಸ್‌ಮಿಷನ್ ಆಯ್ಕೆ ಇರಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಹೊಸ ಬ್ರೆಜಾ, ಸುಧಾರಿತ ವಿನ್ಯಾಸ, ತಂತ್ರಜ್ಞಾನ ಮತ್ತು ಸುರಕ್ಷತಾ ವೈಶಿಷ್ಟ್ಯಗಳನ್ನು ಒಳಗೊಂಡಿದೆ ಎಂದು ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ ಸಿ.ವಿ. ರಾಮನ್ ಅವರು ಮಾಹಿತಿ ನೀಡಿದ್ದಾರೆ.

ಸಾನೆಟ್ 1.5 ಲಕ್ಷಕ್ಕೂ ಅಧಿಕ ಮಾರಾಟ

ನವದೆಹಲಿ (ಪಿಟಿಐ): ಕಾಂಪ್ಯಾಕ್ಟ್ ಎಸ್‌ಯುವಿ ಕಿಯಾ ಸಾನೆಟ್‌ನ ಒಟ್ಟಾರೆ ಮಾರಾಟವು 1.5 ಲಕ್ಷದ ಮೈಲಿಗಲ್ಲು ದಾಟಿದೆ ಎಂದು ಕಿಯಾ ಇಂಡಿಯಾ ಕಂಪನಿ ಸೋಮವಾರ ತಿಳಿಸಿದೆ.

2020ರ ಸೆಪ್ಟೆಂಬರ್‌ನಲ್ಲಿ ಈ ಮಾದರಿಯನ್ನು ಬಿಡುಗಡೆ ಮಾಡಲಾಗಿತ್ತು.

ಕಂಪನಿಯ ಒಟ್ಟಾರೆ ಮಾರಾಟದಲ್ಲಿ ಸಾನೆಟ್ ಪಾಲು ಶೇಕಡ 32ರಷ್ಟಿದೆ. ಕಾಂಪ್ಯಾಕ್ಟ್ ಎಸ್‌ಯುವಿ ವಿಭಾಗದಲ್ಲಿ ಸಾನೆಟ್ ಶೇ 15ರಷ್ಟು ಪಾಲು ಹೊಂದಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಸಾನೆಟ್‌ನ ಎಲ್ಲಾ ಆವೃತ್ತಿಗಳಲ್ಲಿಯೂ ನಾಲ್ಕು ಏರ್‌ಬ್ಯಾಗ್ ಅಳವಡಿಸಲಾಗಿದೆ. ಈ ಮೂಲಕ ಸುರಕ್ಷತೆಯನ್ನು ಹೆಚ್ಚಿಸಲಾಗಿದೆ ಎಂದು ಕಂಪನಿಯ ಮುಖ್ಯ ಮಾರಾಟ ಅಧಿಕಾರಿ ಮ್ಯುಂಗ್ ಸಿಕ್ ಸೊಹ್ನ್ ಹೇಳಿದ್ದಾರೆ.

ಒಟ್ಟಾರೆ ಮಾರಾಟದಲ್ಲಿ ಈ ಮಾದರಿಯ ಟಾಪ್ ವೇರಿಯಂಟ್‌ನ ಪಾಲು ಶೇ 26ರಷ್ಟು ಇದೆ. ಶೇ 22ರಷ್ಟು ಖರೀದಿದಾರರು ಆಟೊಮೆಟಿಕ್ ಟ್ರಾನ್ಸ್‌ಮಿಷನ್ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಕಂಪನಿಯು ತಿಳಿಸಿದೆ.

ಬಿಎಸ್‌ಇ ಸೆನ್ಸೆಕ್ಸ್ 237 ಅಂಶ, ನಿಫ್ಟಿ 57 ಅಂಶ ಏರಿಕೆ

ಆರು ದಿನಗಳ ಕುಸಿತಕ್ಕೆ ವಿರಾಮ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಆರು ದಿನಗಳ ಕುಸಿತಕ್ಕೆ ಸೋಮವಾರ ವಿರಾಮ ದೊರೆತಿದೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಏರಿಕೆ ಕಂಡಿವೆ.

ಸೆನ್ಸೆಕ್ಸ್ 237 ಅಂಶ, ನಿಫ್ಟಿ 57 ಅಂಶ ಏರಿಕೆ ಕಂಡಿವೆ. ದಿನದ ವಹಿವಾಟಿನಲ್ಲಿ ಬಿಎಸ್‌ಇ ಸ್ಮಾಲ್ ಕ್ಯಾಪ್ ಶೇ 2.96 ಮತ್ತು ಮಿಡ್ ಕ್ಯಾಪ್ ಶೇ 1.39ರಷ್ಟು ಇಳಿಕೆ ಕಂಡಿವೆ.

'ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಧನಾತ್ಮಕ ವಾತಾವರಣವು ದೇಶಿ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರಿತು. ಲಾರ್ಜ್ ಕ್ಯಾಪ್ ವಲಯದ ಕಂಪನಿಗಳ ಷೇರುಗಳು ಅತಿಹೆಚ್ಚಿನ ಗಳಿಕೆ ಕಂಡವು. ಆದರೆ, ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ವಲಯದ ಷೇರುಗಳ ಮೌಲ್ಯ ಕುಸಿದಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.



ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕವು ಶೇ 2.95ರಷ್ಟು, ಮಿಡ್ ಕ್ಯಾಪ್ ಸೂಚ್ಯಂಕ ಶೇ 1.39ರಷ್ಟು ಕುಸಿದಿವೆ. 'ಐ.ಟಿ., ಹಣಕಾಸು ಮತ್ತು ಆರೋಗ್ಯಸೇವಾ ವಲಯದ ಆಯ್ದ ಷೇರುಗಳನ್ನು ಹೂಡಿಕೆದಾರರು ಖರೀದಿಸಿದ್ದಾರೆ. ಆದರೆ, ಲೋಹ, ತೈಲ ಮತ್ತು ಅನಿಲ ವಲಯದ ಷೇರುಗಳನ್ನು ಭಾರಿ ಪ್ರಮಾಣದಲ್ಲಿ ಮಾರಾಟ ಮಾಡಿದ್ದಾರೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ಸಣ್ಣ ಹೂಡಿಕೆಗಳ ವಿಭಾಗದ ಮುಖ್ಯಸ್ಥ ಶ್ರೀಕಾಂತ ಚವಾಣ್ ಹೇಳಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಷೇರುಪೇಟೆಯಿಂದ ಬಂಡವಾಳ ಹಿಂದಕ್ಕೆ ಪಡೆಯುವುದನ್ನು ಮುಂದುವರಿಸಿದ್ದಾರೆ. ಸೋಮವಾರದ ವಹಿವಾಟಿನಲ್ಲಿ ₹ 1,217 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಮುಖ್ಯಾಂಶಗಳು

- ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 7 ಪೈಸೆ ಹೆಚ್ಚಳ
- ಎಫ್‌ಎಂಸಿಜಿ, ಹಣಕಾಸು, ತಂತ್ರಜ್ಞಾನ, ಐ.ಟಿ ವಲಯದ ಷೇರುಗಳ ಗಳಿಕೆ

ಚಿನ್ನ: ₹242 ಇಳಿಕೆ

ನವದೆಹಲಿ (ಪಿಟಿಐ): ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನದ ದರ 10ಗ್ರಾಂಗೆ ₹242 ಇಳಿಕೆ ಆಗಿ ₹50,735ಕ್ಕೆ ತಲುಪಿತು. ಬೆಳ್ಳಿ ದರ ಕೆ.ಜಿಗೆ ₹770 ಕಡಿಮೆ ಆಗಿ ₹60,460ಕ್ಕೆ ತಲುಪಿತು. ರೂಪಾಯಿ ಮೌಲ್ಯ ಹೆಚ್ಚಳವೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಎಫ್‌ಎಸ್‌ಎನ್‌ಎಲ್ ಖರೀದಿಗೆ ಆಸಕ್ತಿ

ನವದೆಹಲಿ (ಪಿಟಿಐ): ಫೆರ್ರೊ ಸ್ಕ್ರ್ಯಾಪ್ ನಿಗಮ್ ಲಿಮಿಟೆಡ್ (ಎಫ್‌ಎಸ್‌ಎನ್‌ಎಲ್) ಖರೀದಿಗೆ ಹಲವು ಹೂಡಿಕೆದಾರರು ಆಸಕ್ತಿ ತೋರಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಈ ಕುರಿತು ಸಾರ್ವಜನಿಕ ಹೂಡಿಕೆ ಮತ್ತು ಆಸ್ತಿ ನಿರ್ವಹಣಾ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ್ ಪಾಂಡೆ ಅವರು ಟ್ವೀಟ್ ಮಾಡಿದ್ದಾರೆ.

ಎಫ್‌ಎಸ್‌ಎನ್‌ಎಲ್‌ನ ಮಾರಾಟಕ್ಕೆ ಸಂಬಂಧಿಸಿದಂತೆ ಇಲಾಖೆಯು ಮಾರ್ಚ್‌ನಲ್ಲಿ ಬಿಡ್ ಆಹ್ವಾನಿಸಿತ್ತು. ಬಿಡ್ ಸಲ್ಲಿಸಲು ಮೇ 5 ಕಡೆಯ ದಿನವಾಗಿತ್ತು. ಆದರೆ ಅದನ್ನು ಜೂನ್ 17ರವರೆಗೆ ವಿಸ್ತರಿಸಲಾಗಿತ್ತು.

ಖರೀದಿ ಆಸಕ್ತಿ ವ್ಯಕ್ತಪಡಿಸಿ ಸಲ್ಲಿಕೆ ಆಗಿರುವ ಅರ್ಜಿಗಳನ್ನು ಪರಿಶೀಲನೆ ನಡೆಸಿದ ಬಳಿಕ ಅರ್ಹ ಹೂಡಿಕೆದಾರರಿಗೆ ಹಣಕಾಸಿನ ಬಿಡ್ ಸಲ್ಲಿಸಲು ಆಹ್ವಾನ ನೀಡಲಾಗುತ್ತದೆ.



ಎಂಎಸ್‌ಟಿಸಿ ಲಿಮಿಟೆಡ್‌ನ ಅಂಗಸಂಸ್ಥೆ ಇದಾಗಿದ್ದು, 1979ರಲ್ಲಿ ಸ್ಥಾಪನೆ ಆಗಿದೆ. ಉಕ್ಕು ಸಚಿವಾಲಯದ ಅಡಿಯಲ್ಲಿ ಈ ಸಂಸ್ಥೆ ಕೆಲಸ ಮಾಡುತ್ತದೆ.

ಕೇಂದ್ರ ಸರ್ಕಾರವು 2022–23ರಲ್ಲಿ ಕೇಂದ್ರೋದ್ಯಮಗಳ ಷೇರು ವಿಕ್ರಯದ ಮೂಲಕ ₹ 65 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ಗುರಿ ಇಟ್ಟುಕೊಂಡಿದೆ. ಈವರೆಗೆ ₹ 24,544 ಕೋಟಿ ಬಂಡವಾಳ ಸಂಗ್ರಹ ಮಾಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕುಮಟ	
ಚಿಪ್ಪು	26999-31899
ಕೋಕ	17569-29869
ಫ್ಯಾಕ್ಟರಿ	10699-19829
ಹಳೆಚಾಲಿ	43569-46269
ಹೊಸಚಾಲಿ	36089-40029
ಪುತ್ತೂರು	
ಕೋಕ	11000-26000
ಹೊಸತು	30500-43000
ಸಾಗರ	
ಬಿಳಿಗೋಟು	20313-30609
ಚಾಲಿ	31001-37699
ಕೋಕ	18989-33501
ಕೆಂಪುಗೋಟು	18989-37211
ರಾಶಿ	32519-49689
ಸಿಪ್ಪೆಗೋಟು	17599-20850
ಶಿವಮೊಗ್ಗ	
ಬೆಟ್ಟೆ	49519-52739
ಗೊರಬಲು	15109-37359
ರಾಶಿ	43096-49409
ಸರಕು	56069-78396
ಸಿದ್ದಾಪುರ	
ಬಿಳಿಗೋಟು	24699-31890
ಚಾಲಿ	35399-39599
ಕೋಕ	21699-30779
ಕೆಂಪುಗೋಟು	29112-34119
ರಾಶಿ	43589-48989
ತಟ್ಟಿಬೆಟ್ಟೆ	39019-45699
ಶಿರಸಿ	
ಬೆಟ್ಟೆ	36799-43699
ಬಿಳಿಗೋಟು	22025-33019
ಚಾಲಿ	32899-40111
ರಾಶಿ	45099-47799

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	15900	16100	227.65 ಸೆಂಟ್ಸ್
ಎಸಿ	8960	8600	8900	
ಆರ್‌ಪಿ	9750	9800	9975	ಲಂಡನ್
ಆರ್‌ಸಿ	4800	4500	4600	2065 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

20-6-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10200-10250
ದಪ್ಪ ಮಧ್ಯಪ್ರದೇಶ(ಹೊಸ)	10200-10250
ದಪ್ಪ ಗುಜರಾತ್(ಹೊಸ)	11000-11050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1585 (1590)
ಒಂದು ವಾರದ ಡೆಲಿವರಿ	1580 (1585)
ಸೋಯಾ ಕಚ್ಚಾ	1320 (1357)
ಪಾಮ್ ವಾರದ ಡೆಲಿವರಿ	1333 (1373)
ಸೂರ್ಯಕಾಂತಿ ಎಣ್ಣೆ ಕಚ್ಚಾ	1700 (1710)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 50,850 (50,800)

ಬೆಳ್ಳಿ ಕೆ.ಜಿ 60,800 (61,000)

ಆವರಣದಲ್ಲಿ ಶನಿವಾರದ ಧಾರಣೆ

ಸಂಕ್ಷಿಪ್ತ ಸುದ್ದಿ

ಪಾಕ್ ಉಗ್ರರಿಗೆ ಆಶ್ರಯ: ನಾಲ್ವರ ಬಂಧನ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪುಲ್ವಾಮದ ಏಳು ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ನಿಷೇಧಿತ ಜೈಶ್ -ಎ- ಮೊಹಮ್ಮದ್ (ಜೆಇಎಂ) ಸಂಘಟನೆಯ ಪಾಕ್ ಉಗ್ರರಿಗೆ ಆಶ್ರಯ ನೀಡುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿದೆ.

ಸಾಹಿಲ್ ಅಹ್ಮದ್ ಖಾನ್, ಜಹಾಂಗೀರ್ ಅಹ್ಮದ್ ದಾರ್, ಶಾಹಿದ್ ಅಹ್ಮದ್ ಶೇರ್ಗೋಜ್ರಿ ಹಾಗೂ ಇನಾಯತ್ ಗುಲ್ಜಾರ್ ಭಟ್ ಬಂಧಿತ ಆರೋಪಿಗಳು. ದಕ್ಷಿಣ ಕಾಶ್ಮೀರದಲ್ಲಿ ಸಕ್ರಿಯವಾಗಿರುವ ಜೆಇಎಂ ಭಯೋತ್ಪಾದಕರಿಗೆ ಆಶ್ರಯ ನೀಡಿದ್ದರು.

ಎನ್‌ಕೌಂಟರ್: ಮೂವರು ನಕ್ಸಲರ ಹತ್ಯೆ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಬಾಲಘಾಟ್ ಜಿಲ್ಲೆಯಲ್ಲಿ ಸೋಮವಾರ ಬೆಳಿಗ್ಗೆ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಮಹಿಳೆ ಸೇರಿದಂತೆ ಮೂವರು ನಕ್ಸಲರು ಹತ್ಯೆಯಾಗಿದ್ದಾರೆ. ಇವರ ತಲೆಗೆ ₹ 30 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಗೃಹ ಸಚಿವ ನರೋತ್ತಮ್ ಮಿಶ್ರಾ ತಿಳಿಸಿದ್ದಾರೆ.

'ಹತ್ಯೆಯಾಗಿರುವ ನಕ್ಸಲ್ ವಿಭಾಗೀಯ ಸಮಿತಿ ಸದಸ್ಯ ನಾಗೇಶ್ ತಲೆಗೆ ₹ 15 ಲಕ್ಷ, ಕಮಾಂಡರ್ ಮನೋಜ್ ಮತ್ತು ಮಹಿಳಾ ನಕ್ಸಲ್ ರಮೆ ಅವರ ತಲೆಗೆ ತಲಾ ₹ 8 ಲಕ್ಷ ಬಹುಮಾನ ಘೋಷಿಸಲಾಗಿತ್ತು' ಎಂದಿದ್ದಾರೆ.

ಕಾಶ್ಮೀರ: ಮೂವರು ಉಗ್ರರ ಹತ್ಯೆ

ಶ್ರೀನಗರ(ಪಿಟಿಐ): ಕಾಶ್ಮೀರದಲ್ಲಿ ಸೋಮವಾರ ನಡೆದ ಎರಡು ಪ್ರತ್ಯೇಕ ಎನ್‌ಕೌಂಟರ್‌ನಲ್ಲಿ ಭದ್ರತಾ ಪಡೆಗಳು ಮೂವರು ಉಗ್ರರನ್ನು ಹತ್ಯೆ ಮಾಡಿದ್ದಾರೆ. ಇದರಿಂದಾಗಿ ಕಳೆದ 24 ಗಂಟೆಗಳಲ್ಲಿ ಒಟ್ಟು ಏಳು ಮಂದಿ ಭಯೋತ್ಪಾದಕರನ್ನು ಹತ್ಯೆ ಮಾಡಿದಂತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಉತ್ತರ ಕಾಶ್ಮೀರದ ಕುಪ್ವಾರ ಜಿಲ್ಲೆಯಲ್ಲಿನ ಎನ್‌ಕೌಂಟರ್‌ನಲ್ಲಿ ಇಬ್ಬರನ್ನು ಹೊಡೆದುರುಳಿಸಲಾಗಿದೆ. ಪುಲ್ವಾಮಾ ಜಿಲ್ಲೆಯಲ್ಲಿ ಮತ್ತೊಂದು ಎನ್‌ಕೌಂಟರ್‌ನಲ್ಲಿ ಅಪರಿಚಿತ ಉಗ್ರರನ್ನು ಹತ್ಯೆ ಮಾಡಲಾಗಿದೆ.

ಭಾರತ ಕೇಂದ್ರಿತ ಕೃಷಿ ಅನುಸರಿಸಿ: ಭಾಗವತ್ ಕರೆ

ನಾಗ್ಪುರ (ಪಿಟಿಐ): ನಮ್ಮ ಜಿಡಿಪಿ ಹೆಚ್ಚಿಸುವಂತಹ 'ಭಾರತ ಕೇಂದ್ರಿತ' ಕೃಷಿ ವಿಧಾನವನ್ನು ಅನು ಸರಿಸುವಂತೆ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಸೋಮವಾರ ರೈತರಿಗೆ ಕರೆ ನೀಡಿದರು.

ಕೇಂದ್ರದ ಪಶುವಿಜ್ಞಾನ ರಾಷ್ಟ್ರೀಯ ಅಕಾಡೆಮಿ ಮತ್ತು ಮಹಾರಾಷ್ಟ್ರ ಪಶು ಹಾಗೂ ಮೀನು ಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯ ಜಂಟಿಯಾಗಿ ಆಯೋಜಿಸಿದ್ದ ವಾರ್ಷಿಕ ಘಟಿಕೋತ್ಸವ ಮತ್ತು ವೈಜ್ಞಾನಿಕ ಸಮಾವೇಶದಲ್ಲಿ ಅವರು ಮಾತನಾಡಿದರು.

'ಕ್ರಿ.ಶ. 1700ರವರೆಗೂ ವಿಶ್ವದಲ್ಲೇ ನಮ್ಮ ಆರ್ಥಿಕತೆ ಅಗ್ರಸ್ಥಾನದಲ್ಲಿತ್ತು. ನಮ್ಮದು ಕೃಷಿ ಆರ್ಥಿಕತೆ ಅವಲಂಬನೆಯ ದೇಶ. ನಾವು 'ಭಾರತ್ ಕೇಂದ್ರಿತ ವಿಧಾನ' ಅಳವಡಿಸಿಕೊಳ್ಳಬೇಕು. ಇದಕ್ಕಾಗಿ ನಮ್ಮ ದೇಶದ ಪುರಾತನವಾದ ಸ್ಥಳೀಯ ಜ್ಞಾನದ ಕೃಷಿ ಮತ್ತು ಪಶುಸಂಗೋಪನೆ ವಿಧಾನವನ್ನು ರೈತರು ಅನುಸರಿಸಬೇಕು. ಇಂತಹ ಸ್ಥಳೀಯ ಜ್ಞಾನವನ್ನು ಪರಿಶೀಲಿಸದೆ ಅವೈಜ್ಞಾನಿಕವೆಂದು ತಿರಸ್ಕರಿಸುವುದು ತಪ್ಪು' ಎಂದು ಭಾಗವತ್ ಅವರು ಹೇಳಿದರು.

ಕಾಮನ್‌ವೆಲ್ತ್ ಕೂಟಕ್ಕೆ ಭಾರತ ಹಾಕಿ ತಂಡ ಪ್ರಕಟ

ಮನ್‌ಪ್ರೀತ್ ಸಿಂಗ್ ಸಾರಥ್ಯ



ಮನ್‌ಪ್ರೀತ್ ಸಿಂಗ್

ನವದೆಹಲಿ (ಪಿಟಿಐ): ಮುಂಬರುವ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವ ಭಾರತ ಹಾಕಿ ತಂಡವನ್ನು ಮನ್‌ಪ್ರೀತ್ ಸಿಂಗ್ ಮುನ್ನಡೆಸಲಿದ್ದಾರೆ. ಡ್ರ್ಯಾಗ್‌ಫ್ಲಿಕ್ ಪರಿಣಿತ ಹರ್ಮನ್‌ಪ್ರೀತ್ ಸಿಂಗ್ ಉಪನಾಯಕನ ಜವಾಬ್ದಾರಿ ನಿರ್ವಹಿಸುವರು.

18 ಸದಸ್ಯರ ತಂಡವನ್ನು ಹಾಕಿ ಇಂಡಿಯಾ (ಎಚ್‌ಐ) ಸೋಮವಾರ ಪ್ರಕಟಿಸಿತು. ಕಾಮನ್‌ವೆಲ್ತ್ ಕೂಟಕ್ಕೆ ಎರಡನೇ ಹಂತದ ಆಟಗಾರರನ್ನು ಒಳಗೊಂಡ ತಂಡವನ್ನು ಕಳುಹಿಸಲು ಎಚ್‌ಐ ನಿರ್ಧರಿಸಿತ್ತು. ಇದೀಗ ಪೂರ್ಣ ಸಾಮರ್ಥ್ಯದ ತಂಡವನ್ನೇ ಆಯ್ಕೆ ಮಾಡಿದೆ. ಏಷ್ಯನ್ ಗೇಮ್ಸ್‌ಅನ್ನು ಮುಂದಿನ ವರ್ಷಕ್ಕೆ ಮುಂದೂಡಿರುವ ಕಾರಣ ಹಾಕಿ ಇಂಡಿಯಾ ಈ ತೀರ್ಮಾನ ತೆಗೆದುಕೊಂಡಿದೆ.

ಬರ್ಮಿಂಗ್‌ಹ್ಯಾಂನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕೂಟದಲ್ಲಿ ಭಾರತ ತಂಡ ಘಾನಾ, ವೇಲ್ಸ್, ಕೆನಡಾ ಮತ್ತು ಇಂಗ್ಲೆಂಡ್ ಜತೆ 'ಬಿ' ಗುಂಪಿನಲ್ಲಿ ಸ್ಥಾನ ಪಡೆದುಕೊಂಡಿದೆ.

ಭಾರತ ತನ್ನ ಮೊದಲ ಪಂದ್ಯದಲ್ಲಿ ಜುಲೈ 31 ರಂದು ಘಾನಾ ತಂಡವನ್ನು ಎದುರಿಸಲಿದೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದ ತಂಡವನ್ನು ಮುನ್ನಡೆಸಿದ್ದ ಮನ್‌ಪ್ರೀತ್ ಅವರಿಗೆ ಮತ್ತೆ ನಾಯಕತ್ವದ ಜವಾಬ್ದಾರಿ ಲಭಿಸಿದೆ. ಇತ್ತೀಚೆಗೆ ನಡೆದ ಎಫ್‌ಐಎಚ್ ಪ್ರೊ ಹಾಕಿ ಲೀಗ್‌ನಲ್ಲಿ ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ವಿರುದ್ಧದ ಪಂದ್ಯಗಳಿಗೆ ಭಾರತ ತಂಡವನ್ನು ಅಮಿತ್ ರೋಹಿದಾಸ್ ಮುನ್ನಡೆಸಿದ್ದರು.

ಗಾಯದ ಕಾರಣ ವಿಶ್ರಾಂತಿಯಲ್ಲಿದ್ದ ಗೋಲ್‌ಕೀಪರ್ ಕೃಷ್ಣ ಬಿ. ಪಾಠಕ್ ತಂಡಕ್ಕೆ ವಾಪಸಾಗಿದ್ದಾರೆ. ಗೋಲ್‌ಕೀಪರ್ ಸೂರಜ್ ಕರ್ಕೇರ, ಶೀಲಾನಂದ ಲಾಕ್ರ ಅವರನ್ನು ಕೈಬಿಡಲಾಗಿದೆ.

2018ರಲ್ಲಿ ಗೋಲ್ಡ್‌ಕೋಸ್ಟ್‌ನಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಕೂಟದಲ್ಲಿ ಭಾರತ ಹಾಕಿ ತಂಡ ನಾಲ್ಕನೇ ಸ್ಥಾನ ಗಳಿಸಿತ್ತು.

ಭಾರತ ತಂಡ ಇಂತಿದೆ

ಗೋಲ್‌ಕೀಪರ್ಸ್: ಪಿ.ಆರ್.ಶ್ರೀಜೇಶ್, ಕೃಷ್ಣ ಬಹಾದೂರ್ ಪಾಠಕ್

ಡಿಫೆಂಡರ್ಸ್: ವರುಣ್ ಕುಮಾರ್, ಸುರೇಂದರ್ ಕುಮಾರ್, ಹರ್ಮನ್‌ಪ್ರೀತ್ ಸಿಂಗ್, ಅಮಿತ್ ರೋಹಿದಾಸ್, ಜುಗ್ರಾಜ್ ಸಿಂಗ್, ಜರ್ಮನ್‌ಪ್ರೀತ್ ಸಿಂಗ್

ಮಿಡ್‌ಫೀಲ್ಡರ್ಸ್: ಮನ್‌ಪ್ರೀತ್ ಸಿಂಗ್, ಹಾರ್ದಿಕ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ಶಂಷೇರ್ ಸಿಂಗ್, ಆಕಾಶ್‌ದೀಪ್ ಸಿಂಗ್, ನೀಲಕಂಠ ಶರ್ಮ

ಫಾರ್ವರ್ಡ್ಸ್: ಮನ್‌ದೀಪ್ ಸಿಂಗ್, ಗುರ್ಜಂತ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ಅಭಿಷೇಕ್

ಏಷ್ಯನ್ ಕುಸ್ತಿ: ಭಾರತಕ್ಕೆ ನಾಲ್ಕು ಚಿನ್ನದ ಪದಕ

ನವದೆಹಲಿ (ಪಿಟಿಐ): ಭಾರತ ಬಾಲಕಿಯರ ತಂಡದವರು ಕಿರ್ಗಿಸ್ತಾನದ ಬಿಶ್ಕೆಕ್‌ನಲ್ಲಿ ನಡೆಯುತ್ತಿರುವ 17 ವರ್ಷದೊಳಗಿನ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ 4 ಚಿನ್ನ ಮತ್ತು 1 ಕಂಚು ಜಯಿಸಿದರು.

ಮುಸ್ಕಾನ್ (40 ಕೆ.ಜಿ.ವಿಭಾಗ), ಶ್ರುತಿ (46), ರೀನಾ (53) ಮತ್ತು ಸವಿತಾ (61) ಚಿನ್ನ ಜಯಿಸಿದರೆ, ಮಾನಸಿ (69) ಕಂಚು ಪಡೆದರು.

ಗ್ರೀಕೊ ರೋಮನ್ ವಿಭಾಗದಲ್ಲಿ ರೋನಿತ್ ಶರ್ಮ (48) ಚಿನ್ನ, ಪ್ರದೀಪ್ ಸಿಂಗ್ (110) ಮತ್ತು ಮೋಹಿತ್ ಖೋಕರ್ (80 ಕೆ.ಜಿ) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಪಡೆದುಕೊಂಡರು.

ಸಂಕ್ಷಿಪ್ತ ಸುದ್ದಿ

ಮಹಿಳಾ ಹಾಕಿ: ಭಾರತ, ಅಮೆರಿಕ ಮುಖಾಮುಖಿ

ರಾಟರ್‌ಡ್ಯಾಮ್ (ಪಿಟಿಐ): ವಿಶ್ವಕಪ್ ಟೂರ್ನಿಗೆ ಸಿದ್ಧತೆ ನಡೆಸುತ್ತಿರುವ ಭಾರತ ಮಹಿಳಾ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ 'ಡಬಲ್ ಹೆಡರ್'ನ ಮೊದಲ ಪಂದ್ಯದಲ್ಲಿ ಮಂಗಳವಾರ ಅಮೆರಿಕ ತಂಡವನ್ನು ಎದುರಿಸಲಿದೆ.

ಅಮೆರಿಕ ಎದುರಿನ ಎರಡನೇ ಪಂದ್ಯವು ಬುಧವಾರ ನಿಗದಿಯಾಗಿದೆ.

ಇದೇ ಮೊದಲ ಬಾರಿ ಪ್ರೊ ಲೀಗ್‌ನಲ್ಲಿ ಆಡುತ್ತಿರುವ ಭಾರತ, ಇದುವರೆಗೆ ಉತ್ತಮ ಸಾಮರ್ಥ್ಯವನ್ನೇ ತೋರಿದೆ. 14 ಪಂದ್ಯಗಳಿಂದ 24 ಪಾಯಿಂಟ್ಸ್ ಕಲೆಹಾಕಿ ಪಾಯಿಂಟ್ಸ್ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಅರ್ಜೆಂಟೀನಾ (16 ಪಂದ್ಯ; 42 ಪಾಯಿಂಟ್ಸ್) ಮತ್ತು ನೆದರ್ಲೆಂಡ್ಸ್ (14 ಪಂದ್ಯ; 32 ಪಾಯಿಂಟ್ಸ್) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಗಳಲ್ಲಿವೆ.

ಅರ್ಜೆಂಟೀನಾ ಈಗಾಗಲೇ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ.

ವಿಶ್ವಕಪ್ ಟೂರ್ನಿಯು ಜುಲೈ 1ರಿಂದ 17ರವರೆಗೆ ನೆದರ್ಲೆಂಡ್ಸ್ ಮತ್ತು ಸ್ಪೇನ್‌ನ ಜಂಟಿ ಆತಿಥ್ಯದಲ್ಲಿ ನಡೆಯಲಿದೆ.

ಕೊಕ್ಕೊ: ಕ್ಯಾಪ್ರಿ, ಕೆಎಲ್‌ಒ ಮಾಲೀಕತ್ವ

ಬೆಂಗಳೂರು: ಕ್ಯಾಪ್ರಿ ಗ್ಲೋಬಲ್ ಮತ್ತು ಕೆಎಲ್‌ಒ ಸ್ಪೋರ್ಟ್ಸ್ ಸಂಸ್ಥೆಗಳು ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ (ಯುಕೆಕೆ) ಕ್ರಮವಾಗಿ ರಾಜಸ್ಥಾನ ಮತ್ತು ಚೆನ್ನೈ ತಂಡಗಳ ಮಾಲೀಕತ್ವ ವಹಿಸಿಕೊಂಡಿವೆ.

ಕೆಎಲ್‌ಒ ಸ್ಪೋರ್ಟ್ಸ್ ಮಾಲೀಕತ್ವದ ತಂಡವನ್ನು ಚೆನ್ನೈ ಕ್ವಿಕ್ ಗನ್ಸ್ ಎಂದು ಕರೆಯಲಾಗುತ್ತದೆ. ಕ್ಯಾಪ್ರಿ ಗ್ಲೋಬಲ್‌ನ ರಾಜಸ್ಥಾನ ಮೂಲದ ಫ್ರಾಂಚೈಸಿಗೆ ಇನ್ನೂ ಹೆಸರಿಡಲಾಗಿಲ್ಲ.

ಕೆಎಲ್‌ಒ ಸ್ಪೋರ್ಟ್ಸ್ ಸಂಜಯ್ ಜುಪುಡಿ ಮತ್ತು ಶ್ರೀನಾಥ್ ಚಿತ್ತೂರಿ ಅವರ ಸಹ-ಮಾಲೀಕತ್ವದಲ್ಲಿದೆ.

ಸ್ಮ್ಯಾಷಿಂಗ್ ಸ್ಕ್ವಾಷರ್ಸ್‌ಗೆ ಜಯ

ಬೆಂಗಳೂರು: ಹಾಲಿ ಚಾಂಪಿಯನ್ ಸ್ಮ್ಯಾಷಿಂಗ್ ಸ್ಕ್ವಾಷರ್ಸ್ ತಂಡವು ಬೆಂಗಳೂರು ಸ್ಕ್ವಾಷ್ ಲೀಗ್‌ನಲ್ಲಿ ಶುಭಾರಂಭ ಮಾಡಿದೆ. ಮಂಗಳವಾರ ನಡೆದ ಪಂದ್ಯದಲ್ಲಿ 4–3ರಿಂದ ಫ್ಲೈಯಿಂಗ್ ಡೆವಿಲ್ಸ್ ಎದುರು ಗೆದ್ದಿತು.

ಮತ್ತೊಂದು ಪಂದ್ಯದಲ್ಲಿ ಸ್ಕಾವ್ ಸ್ಟ್ರೈಕರ್ಸ್ 4–3ರಿಂದ ರೇಜಿಂಗ್ ರ್‍ಯಾಕೆಟ್ಸ್ ತಂಡವನ್ನು ಸೋಲಿಸಿತು.